ಉಪಾಧ್ಯಕ್ಷಿಣಿಯವರು.— ಪ್ರಸ್ತಾವ ಏನೆಂದರೆ,

೧೯೯೦ರ ಕರ್ನಾಟಕ ಜಿಲ್ಲಾ ಪರಿಷತ್ತು, ತಾಲ್ಲೂಕು ಪಂಚಾಯಿತಿ ಸಮಿತಿಗಳು. ಮಂಡಲ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯಿತಿಗಳ ತಿದ್ದುಪಡಿ ವಿಧೇಯಕ ವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ ೨ ರಿಂದ ೩ರವರೆಗೆ

ಉಪಾಧ್ಯಕ್ಷಿಣಿಯವರು.—"ಖಂಡ ೨ ಮತ್ತು ೩ ಎರಡೂ ಸೇರಿದಂತೆ ಈ ವಿಧೇಯಕದ ಅಂಗ ವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ೨ ಮತ್ತು ೩ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು

ಖಂಡ ೧ ಇತ್ಯಾದಿ:—

ಉಪಾಧ್ಯಕ್ಷಿಣಿಯವರು.—ಪ್ರಸ್ತಾವ ಏನೆಂದರೆ. "ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

(ಮೊದಲನೇ ಖಂಡ. ದೀರ್ಘ ಶೀರ್ಷಿಕೆ. ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು.)

ಅಂಗೀಕಾರ ಪ್ರಸ್ತಾವ

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಮಂತ್ರಿಗಳು). —"೧೯೯೦ರ ಕರ್ನಾಟಕ ಜಿಲ್ಲಾ ಪರಿಷತ್ತು, ತಾಲ್ಲೂಕು ಪಂಚಾಯಿತಿ ಸಮಿತಿಗಳು ಮಂಡಲ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯಿತಿಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ".

ಉಪಾಧ್ಯಕ್ಷಿಣಿಯವರು.—ಪ್ರಸ್ತಾವ ಏನೆಂದರೆ. "೧೯೯೦ರ ಕರ್ನಾಟಕ ಜಿಲ್ಲಾ ಪರಿಷತ್ತು, ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯಿತಿಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಂಜೂರಿಗೆ ಒಪ್ಪಿಗೆ ನೀಡಲಾಯಿತು.

DISCUSSION ON THE MOTION OF THANKS TO GOVERNOR'S ADDRESS

† ಶ್ರೀ.ಆರ್. ವಿ. ದೇಶಪಾಂಡೆ (ಹಳಿಯಾಳ).—ಮಾನ್ಯ ಉಪಾಧ್ಯಕ್ಷಿಣಿಯವರೇ ರಾಜ್ಯಪಾಲ ಅಭಿಯಾಚನಾ ಪ್ರಸ್ತಾಪದ ಮೇಲೆ ನನ್ನ ವಿರೋಧವನ್ನು ಸೂಚಿಸುತ್ತಾ ನಾನು ಕೆಲವು ವಿಚಾರಗಳನ್ನು ಈ ಸದನದ ಮುಂದಿಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಈ ರಾಜ್ಯಪಾಲರ ಭಾಷಣ ಇವತ್ತು ನಮ್ಮ ಮುಂದೆ ಏನು ಮಂಡಿಸಲಾಗಿದೆ, ಅದರಲ್ಲಿ ಸರ್ಕಾರ ಯಾವ ದಿಕ್ಕಿನಲ್ಲಿ ಹೋಗುತ್ತಿದೆ ಎನ್ನುವ ಬಗ್ಗೆ ಸ್ಪಷ್ಟವಾಗಿ ಕಾಣುತ್ತಿಲ್ಲ. Popular will reflected in November, 1989 General Elections ಇದು ರಾಜ್ಯಪಾಲರ ಅಡ್ರೆಸ್‌ನಲ್ಲಿ ರಿಫ್ಲೆಕ್ಟ್ ಆಗುತ್ತಿಲ್ಲ, ಇದರಲ್ಲಿ ಯಾವುದೇ ಸ್ಪಷ

ವಾದ ಕಾರ್ಯಕ್ರಮವಿಲ್ಲ. ಈ ಒಂದು ಚುನಾವಣೆಯಲ್ಲಿ ಆಳುವ ಪಕ್ಷ ಕನ್ನಡ ನಾಡಿನ ಜನತೆಗೆ ಭರವಸೆಗಳನ್ನು ಕೊಟ್ಟು ತನ್ನ ಪ್ರಣಾಳಿಕೆಯ ಮೇಲೆ ಅಧಿಕಾರಕ್ಕೆ ಬಂದಿದ್ದಾರೆ. ಆ ಪ್ರಣಾಳಿಕೆಯನ್ನು ಜಾರಿಗೆ ತರುವಲ್ಲಿ ಯಾವುದೇ ಒಂದು ಸ್ಪಷ್ಟವಾದ ಕಾರ್ಯಕ್ರಮ ಈ ರಾಜ್ಯಪಾಲರ ಭಾಷಣದಲ್ಲಿ ಇಲ್ಲ. ಆದ್ದರಿಂದ ಈ ಸದನದಲ್ಲಿ ಸಂಕ್ಷಿಪ್ತವಾಗಿ ಹೇಳಬೇಕಾಗಿದೆ Governor's Address is purposeless and makes an ordinary reading. ಇವತ್ತು ರಾಜ್ಯಪಾಲರ ಅಡ್ರೆಸ್‌ನಲ್ಲಿ ಒಂದು ಮಾತನ್ನು ಹೇಳಿದ್ದಾರೆ.

"The hon. Members would be happy to know that the Staff Selection Commission of Govt. of India has opened a Sub-Regional office will find employment opportunities to subordinate levels."

ಇದರ ಬಗ್ಗೆ ಕೇಂದ್ರ ಸರ್ಕಾರವನ್ನು ಅಭಿನಂದನೆ ಮಾಡಬೇಕಾಗುತ್ತದೆ. ಆದರೆ ಒಂದು ಮಾತನ್ನು ಏನು ಹೇಳುತ್ತಾರೆಂದರೆ Will find employment opportunities to Subordinate levels. ಕೇವಲ ಸಬಾರ್ಡಿನೇಟ್ ಲೆವೆಲ್‌ನಲ್ಲಿ ಕೇಂದ್ರ ಸರ್ಕಾರದಲ್ಲಿ ನಮ್ಮ ಜನರನ್ನು ಸೇರಿಸುವುದಲ್ಲ ಎಲ್ಲ ಹಂತದಲ್ಲಿಯೂ ನಮ್ಮ ಜನರಿಗೆ ಉದ್ಯೋಗ ಅವಕಾಶ ಕೊಡಲಿಕ್ಕೆ ನಾವು ಪ್ರಯತ್ನ ಮಾಡಬೇಕಾಗುತ್ತದೆ. ಆದ್ದರಿಂದ ಸರ್ಕಾರ ಆ ದೃಷ್ಟಿಯಲ್ಲಿ ಪ್ರಯತ್ನ ಮಾಡಬೇಕಾಗುತ್ತದೆಂದು ತಮ್ಮ ಮುಖಾಂತರ ನಾನು ಕೇಳಿಕೊಳ್ಳುತ್ತಿದ್ದೇನೆ. ಇವತ್ತು ಈ ಅಡ್ಮಿನಿಸ್ಟ್ರೇಷನ್ ಬಗ್ಗೆ ಅವರು ಸಾಕಷ್ಟು ಒಳ್ಳೆಯ ವಿಚಾರಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಅದರ ಬಗ್ಗೆ ನಾನು ಸ್ವಾಗತ ಮಾಡುತ್ತೇನೆ, ಆದರೆ ಕೇವಲ ಭಾಷಣದಿಂದ ಅಡ್ಮಿನಿಸ್ಟ್ರೇಷನ್‌ಲ್ಲಿ ಚುರುಕು ತರುತ್ತೇವೆಂದರೆ ಅದು ಸಾಧ್ಯವಾಗುವುದಿಲ್ಲ. ಇವತ್ತು ತಾವು ಏನು ಮಾಡುತ್ತಿದ್ದೀರೆಂದರೆ ಕೇವಲ ಸಣ್ಣ ಮೀನುಗಳನ್ನು ಹಿಡಿಯಲು ಪ್ರಯತ್ನ ಮಾಡುತ್ತಿದ್ದೀರಿ. ಇವೊತ್ತು ನಿಜವಾಗಿಯೂ ಆಡಳಿತದಲ್ಲಿ ಬಿಗುತನ ತರಬೇಕಾದರೆ ಆ "ವಿಲ್" ಸರ್ಕಾರಕ್ಕೆ ಇರ ಬೇಕಾಗುತ್ತದೆ. ಸರ್ಕಾರದ ಜೊತೆಗೆ ಮಂತ್ರಿಗಳಲ್ಲಿಯೂ ಆ "ವಿಲ್" ಇರಬೇಕು, ಕೇವಲ ಸಣ್ಣ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡರೆ ಆಡಳಿತದಲ್ಲಿ ಬಿಗಿ ತರಲಿಕ್ಕೆ ಸಾಧ್ಯವಾಗುವುದಿಲ್ಲ. ಇವತ್ತು ಹಿರಿಯ ಅಧಿಕಾರಿಗಳು ಯಾರು ಇದ್ದಾರೆ, ಅವರ ಮೇಲೆ ಹಿಡಿತ ತರಬೇಕು. ಯಾವಾಗ ಅಧಿಕಾರವನ್ನು ಕೊಡುತ್ತೇವೆ, ಜವಾಬ್ದಾರಿಯನ್ನು ಕೊಡುತ್ತೇವೆ ಆವಾಗ ಅವರ ಮೇಲೆ ಹಿಡಿತ ಇರಬೇಕಾಗುತ್ತದೆ. ಈ ದೃಷ್ಟಿಯಿಂದ ಇವತ್ತು ಸರ್ಕಾರ ಹೆಚ್ಚಿನ ಪ್ರಮಾಣದಲ್ಲಿ ಹಿರಿಯ ಅಧಿಕಾರಿಗಳ ಮೇಲೆ ಹಿಡಿತ ಇಡುವುದಕ್ಕೆ ಪ್ರಯತ್ನ ಮಾಡಬೇಕಾತ್ತದೆ. ನಾವು ಅಧಿಕಾರದಲ್ಲಿದ್ದಾಗ ಪಬ್ಲಿಕ್ ಗ್ರಿವೆನ್ಸ್‌ಸ್ ಸೆಲ್ ಎಂದು ಮಾಡಿದ್ದೆವು. ಆ ಒಂದು ಸೆಲ್ ಈಗ ಏನಾಗಿದೆ ಎಂದು ಗೊತ್ತಿಲ್ಲ ಆ ಸೆಲ್ ಇದ್ದಾಗ ತಾಲ್ಲೂಕು ಮಟ್ಟದಿಂದ ರಾಜ್ಯ ಮಟ್ಟದವರೆಗೆ ಎಷ್ಟೋ ಪಿಟಿಷನ್‌ಗಳು ಬಂದವು ಆಗ ಅವುಗಳಿಗೆ ಪರಿಹಾರ ನೀಡುವುದಕ್ಕೆ ಸಾಧ್ಯವಾಯಿತು ಈ ದೃಷ್ಟಿಯಿಂದ ಪಬ್ಲಿಕ್ ಗ್ರಿವೆನ್ಸ್‌ಸ್ ಸೆಲ್ ಏನಿದೆ, ಅದನ್ನು ಬಲಪಡಿಸುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕಾಗಿದೆ. ಇವತ್ತು ನಮ್ಮ ಸರ್ಕಾರ ಸಿಬ್ಬಂದಿ ಸಂಖ್ಯೆ ನಾಲ್ಕೂವರೆ ಲಕ್ಷ. ನಾವು ನಮ್ಮ ಆದಾಯದಲ್ಲಿ ೬೦-೬೨ ಪರ್ಸೆಂಟ್ ಹಣವನ್ನು ರಾಜ್ಯದ ಒಂದು ಪರ್ಸೆಂಟ್ ಜನತೆಯ ಮೇಲೆ ಖರ್ಚು ಮಾಡುತ್ತಿದ್ದೇವೆ. ಇದು ಅನಿವಾರ್ಯ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ತಮ್ಮ ಮೂಲಕ ನೌಕರ ವರ್ಗ ಏನಿದೆ ಇದು ಕನಿಷ್ಠ ಎಂಟು ತಾಸು ಕೆಲಸ ಮಾಡಲೆಂದು ವಿನಂತಿಸಿಕೊಳ್ಳುತ್ತೇನೆ, ಹಳ್ಳಿಗಳಲ್ಲಿ ಶಿಕ್ಷಕರೇ ಇಲ್ಲದೆ ತೊಂದರೆಯಾಗಿರುವುದನ್ನು ಒಪ್ಪಿಕೊಳ್ಳುತ್ತೇನೆ. ಕೆಲವು ಕಡೆ ಬಸ್ಸುಗಳೇ ಹೋಗುವುದಿಲ್ಲ. ನಡೆದುಕೊಂಡು ಹೋಗಬೇಕಾಗುತ್ತದೆ. ಇಂತಹ ತೊಂದರೆ ಇರುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಸರ್ಕಾರಿ ನೌಕರರಲ್ಲಿ ಎಲ್ಲಿಯವರೆಗೆ ಕಮಿಟ್‌ಮೆಂಟ್ ಬರುವುದಿಲ್ಲ, ಅಲ್ಲಿಯವರೆಗೆ ನಮ್ಮ ಸರ್ಕಾರ ಇರಲಿ, ನಿಮ್ಮ ಸರ್ಕಾರ ಇರಲಿ ಯಾವ ಕಾರ್ಯಕ್ರಮವನ್ನೂ ಜನತೆಗೆ ಮುಟ್ಟಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಇವತ್ತು ಪೋಲೀಸ್ ಸಿಬ್ಬಂದಿ ಬಗ್ಗೆ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಅದು ಏನಾಗಿದೆ ಎಂದರೆ There is inadequancy of Police personnel ಇವತ್ತು ತರಬೇತಿ ಆಗಲಿ ಅಥವಾ ಮಾಡರ್ನೈಸೇಷನ್ ಆಗಲಿ, ಅದನ್ನು ಯಾವ ಪ್ರಮಾಣದಲ್ಲಿ ನಾವು ಇಂಪ್ಲಿಮೆಂಟ್ ಮಾಡಬೇಕಾಗಿತ್ತು ಅದನ್ನು ನಾವು ಮಾಡಿಲ್ಲ. ಇವತ್ತು ನಮ್ಮ ಮುಂದೆ ಧರ್ಮವೀರ ಕಮೀಷನ್ ವರದಿ ಏನಿದೆ, ಅದರ ರೆಕಮೆಂಡೇಷನ್ ಅನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಮಾನ್ಯ ರಾಜ್ಯಪಾಲ ಭಾಷಣದ ೯ನೇ ಪ್ಯಾರಾದಲ್ಲಿ ಮತ್ತು ೧೧ನೇ ಪ್ಯಾರಾದಲ್ಲಿ ಏನು

ಹೇಳುತ್ತಾರೆಂಬುದನ್ನು ನೋಡಿದರೆ, it is totally contrary. In para-9 it is stated:

> "Eversince the assumption of office by my Government the Law and Order has been effectively maintained in the State except for few instances."

In para-11, it is totally contrary. It reads thus :

> "In the past few months there has been some increase in the instance of dacoities specially in the outlying areas in Bangalore."

ಒಂದು ಕಡೆ ಲಾ ಅಂಡ್ ಆರ್ಡರ್ ಪರಿಸ್ಥಿತಿಯನ್ನು ಸುಧಾರಿಸಿದ್ದೇವೆಂದು ಹೇಳುತ್ತಾರೆ. ಮತ್ತೊಂದು ಕಡೆ ಡಕಾಯಿತಿಗಳ ಸಂಖ್ಯೆ ಹೆಚ್ಚಾಗಿದೆ ಎಂದು ಹೇಳುತ್ತಾರೆ. ಅಂದರೆ ಇದರ ಬಗ್ಗೆ ಸರ್ಕಾರದ ನಿಲುವು ಏನು ? ಈ ಬಗ್ಗೆ ನಾನು ಒಂದು ಸಲಹೆ ಮಾಡಿದ್ದೆ. ಡಕಾಯಿತಿಗಳು ಏನು ಬರುತ್ತಿದ್ದಾರೆ, ವೀರಪ್ಪನ್ ಆಗಲಿ ಮತ್ತೊಬ್ಬನಾಗಲಿ, ಇವರು ಒಂದು ರಾಜ್ಯಕ್ಕೆ ಸೀಮಿತವಾಗಿಲ್ಲ. ಕರ್ನಾಟಕದವರು ಕೇರಳಕ್ಕೆ ಹೋಗುತ್ತಾರೆ, ಕೇರಳದವರು ಮದ್ರಾಸಿಗೆ ಹೋಗುತ್ತಾರೆ, ಮಹಾರಾಷ್ಟ್ರದವರು ಕರ್ನಾಟಕಕ್ಕೆ ಬರುತ್ತಾರೆ. ಯಾವ ಪ್ರಕಾರ ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಡಕಾಯಿತಿಗಳು ಹೋಗುತ್ತಾರೆ ಅದೇ ಪ್ರಕಾರ ಇವತ್ತಿನ ದಿವಸ ಬೆಂಗಳೂರು ಬಹಳ ದೊಡ್ಡ ನಗರವಾಗಿದೆ, ವಿಸ್ತಾರವಾಗಿದೆ. ಪ್ರತಿ ದಿವಸ ಪತ್ರಿಕೆಗಳಲ್ಲಿ ಇಂತಹ ಕಡೆ ಡಕಾಯಿತಿ ಆಗಿದೆ ಎಂದು ಓದುತ್ತೇವೆ. ಇದು ಖಾಯಂ ಆಗಿ ನಡೆಯುತ್ತಿರುವುದರಿಂದ ರಾಜ್ಯ ಮಟ್ಟದಲ್ಲಿ ಅಥವಾ ಸದರ್ನ್ ಇಂಡಿಯಾ ಲೆವೆಲ್‌ನಲ್ಲಿ ಎಫೆಕ್ಟೀವ್ ಆಗಿ ಚೆಕ್ ಮಾಡುವುದಕ್ಕೆ ಸಾಧ್ಯವೇ ಎಂದು ಮುಖ್ಯ ಮಂತ್ರಿಗಳನ್ನು ಕೇಳಿದಾಗ ಅದಕ್ಕೆ ಉತ್ತರ ಬರಲಿಲ್ಲ. ಇದರ ಬಗ್ಗೆ ಪರಿಶೀಲನೆ ಮಾಡಬೇಕೆಂದು ತಮ್ಮ ಮೂಲಕ ನಾನು ಅವರನ್ನು ವಿನಂತಿಸಿಕೊಳ್ಳುತ್ತೇನೆ. ಇದಕ್ಕಾಗಿ ನಾವು ಆಧುನಿಕ ಆಯುಧಗಳನ್ನು ಉಪಯೋಗಿಸಬೇಕಾಗಿದೆ, ಡಕಾಯಿತಿಗಳು ಏನು ಬರುತ್ತಾರೆ, ಅವರು ಹೇಳಿ ಕೇಳಿ ಬರುವುದಿಲ್ಲ. ಆದ್ದರಿಂದ ಆಧುನಿಕ ರೀತಿಯಲ್ಲಿ ಪೋಲೀಸರಿಗೆ ಒಳ್ಳೆಯ ತರಬೇತಿಯನ್ನು ಕೊಡಬೇಕಾಗುತ್ತದೆ ಮತ್ತು ಆಧುನಿಕ ಉಪಕರಣಗಳನ್ನು ಅವರಿಗೆ ಸರಬರಾಜು ಮಾಡಬೇಕಾಗುತ್ತದೆ. ಇವೊತ್ತಿನ ಪೋಲೀಸ್ ವ್ಯವಸ್ಥೆ ಹೇಗಿದೆ ಎಂದರೆ, That has become the only weakest link in the Police administration.

ಕಾನ್‌ಸ್ಟೇಬಲ್ ಬಗ್ಗೆ ನಮಗೆಲ್ಲಾ ಅಭಿಪ್ರಾಯ ಏನು ಬಂದಿದೆ ? 5 ರೂಪಾಯಿ ಮಾಮೂಲಿ ಕೊಟ್ಟರೆ ಬಿಟ್ಟುಬಿಡುತ್ತಾರೆ ಎಂಬ ಅಭಿಪ್ರಾಯ ಬಂದಿದೆ. ನಾವು ಬಾಂಬೆ ಪೋಲೀಸರು ಎಫೆಕ್ಟೀವ್ ಎಂದು ಹೇಳುತ್ತೇವೆ. ನಮ್ಮ ಪೋಲೀಸರು ಏತಕ್ಕೆ ಆ ರೀತಿ ಕೆಲಸ ಮಾಡುತ್ತಿಲ್ಲ ? ಏಕೆಂದರೆ ಮಾರಲ್ ಹೋಗಿಬಿಟ್ಟಿದೆ. ಕಾನ್‌ಸ್ಟೇಬಲ್ ಎಂದರೆ ಐದು ರೂಪಾಯಿ 10 ರೂಪಾಯಿಗೆ ಕೆಲಸ ಮಾಡುತ್ತಾರೆ ಎಂಬ ಭಾವನೆ ಬಂದಿದೆ. ಅದು ಹೋಗಬೇಕಾಗಿದೆ. ಅದು ಹೋಗಬೇಕಾದರೆ ಅತನ ಸ್ಟ್ಯಾಂಡರ್ಡ್ ಆಫ್ ಲೀವಿಂಗ್‌ನಲ್ಲಿ ಇಂಪ್ರೂವ್‌ಮೆಂಟ್ ಆಗ ಬೇಕಾಗಿದೆ. ಅವರಿಗೆ ಸರಿಯಾದ ಸಂಬಳ, ಸರಿಯಾದ ಟ್ರೈನಿಂಗ್, ಸರಿಯಾದ ಹೌಸಿಂಗ್ ಫೆಸಲಿಟೀಸ್ ಕೊಡಬೇಕಾಗುತ್ತದೆ. ಆದ್ದರಿಂದ ಪೋಲೀಸ್ ಇಲಾಖೆಯಲ್ಲಿ ಚುರುಕುತನ ತರಬೇಕಾದರೆ ಸರಿಯಾದ ಇನ್‌ಫ್ರಾಸ್ಟ್ರಕ್ಚರ್ ಕೊಡುವ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು. ಆರೋಪಿಗಳಿಗೆ ಚಾರ್ಜ್‌ಷೀಟ್ ಕೊಡುವ ಜವಾಬ್ದಾರಿ ಪೋಲೀಸರಿಗೆ ಸೇರಿದ್ದು. ಆದರೆ ಇವತ್ತು ಅವರು ಏನು ಹೇಳುತ್ತಿದ್ದಾರೆಂದರೆ ಕಾಗದ ಇಲ್ಲ. ಇಂಕ್ ಇಲ್ಲ, ಕಾರ್ಬನ್ ಇಲ್ಲ, ಪೆನ್ಸಿಲ್ ಇಲ್ಲ ಎಂದು ಹೇಳುತ್ತಿದ್ದಾರೆ. ಇದರಿಂದ ಆರೋಪಿಗಳಿಗೆ ಕೋರ್ಟ್‌ನಲ್ಲಿ ಛಾರ್ಜ್‌ಷೀಟ್ ಕೊಡುತ್ತಿದ್ದಾರೆ. ಇಂಥ ಒಂದು ಪರಿಸ್ಥಿತಿಗೆ ಪೋಲೀಸ್ ಇಲಾಖೆ ಬಂದಿದೆ. ಆದ್ದರಿಂದ ಈ ಒಂದು ಇಲಾಖೆಯಲ್ಲಿ ಹೆಚ್ಚಿನ ಚುರುಕುತನ ತರಲಿಕ್ಕೆ ಸರ್ಕಾರ ಪ್ರಯತ್ನ ಮಾಡಬೇಕು. ತದನಂತರ ನಾನು ಭೂಸುಧಾರಣಾ ಕಾಯಿದೆಗೆ ಬರುತ್ತೇನೆ. ಇದಕ್ಕೆ ಕೆಲವು ತಿದ್ದುಪಡಿ ತರುತ್ತೇವೆಂದು ಹೇಳಿದರು. ಸಂತೋಷ, ತರಲಿ. ಆದರೆ ಅಪಲೇಟ್ ಟ್ರಿಬ್ಯುನಲ್ ವಿಷಯ ಬಂದಾಗ ಆ ಕಡೆಯ ಕೆಲವು ಮಾನ್ಯ ಸದಸ್ಯರು ಅದನ್ನು ಅಬಾಲಿಷ್ ಮಾಡಿ ಎಂದು ಹೇಳಿದರು. ಮಾಡುವುದಾದರೆ ಮಾಡಿ. ಆದರೆ ಅಪಲೇಟ್ ಟ್ರಿಬ್ಯುನಲ್ ಅಸ್ತಿತ್ವಕ್ಕೆ ಏತಕ್ಕೆ ಬಂತು ? ರಾಮಕೃಷ್ಣ ಹೆಗಡೆಯವರಿಗೆ, ವೀರಪ್ಪ ಮೊಯಿಲಿಯವರಿಗೆ, ಕೆ. ಎಚ್. ಪಾಟೀಲರಿಗೆ ತರಬೇಕು ಎಂದು ಇಷ್ಟ ಇರಲಿಲ್ಲ. ಈ ಮ್ಯಾಟರ್ ಸುಪ್ರೀಂ ಕೋರ್ಟಿಗೆ ಹೋದಾಗ, ಅವರು ಸಲಹೆ ಮಾಡಿದರು. ಲ್ಯಾಂಡ್ ಟ್ರಿಬ್ಯುನಲ್ ಆರ್ಡರ್ ಮೇಲೆ, ಹೈಕೋರ್ಟಿಗೆ ರಿಟ್ ಹೋಗಬೇಕಾಗಿತ್ತು. ಅದಕ್ಕಿಂತ ಮುಂಚೆ

ಒಂದು ಬೇರೆ ವ್ಯವಸ್ಥೆ ಮಾಡಿ ಎಂದು ಹೇಳಿದಾಗ ಡಿಸ್ಟ್ರಿಕ್ಟ್ ಅಪಲೇಟ್ ಟ್ರಿಬ್ಯುನಲ್ ಜಾರಿಗೆ ಬಂತು. ಒಂದು ವೇಳೆ ಅನ್ಯಾಯ ಆದರೆ ಅಬಾಲಿಷ್ ಮಾಡಿ. ಕಾರಣ ಇಲ್ಲದೆ ಸುಮ್ಮನೆ ಅಬಾಲಿಷ್ ಮಾಡುವುದರಿಂದ ಯಾವ ಕಾರ್ಯಕ್ರಮವನ್ನೂ ಜಾರಿಗೆ ತರುವುದಕ್ಕಾಗುವುದಿಲ್ಲ, ದಯಮಾಡಿ ಇದರ ಬಗ್ಗೆ ಒಂದು ಸರ್ವೆ ಮಾಡಿ, ಎಷ್ಟು ಕೇಸಸ್ ಅಪಲೇಟ್ ಟ್ರಿಬ್ಯುನಲ್‌ಗೆ ಬಂತು ಎಂಬ ಬಗ್ಗೆ ಸರ್ವೆ ಮಾಡಬೇಕು. ಅಲ್ಲೂ ಕೆ. ಎ. ಎಸ್. ಅಧಿಕಾರಿ ಇದ್ದಾರೆ. ಜವಾಬ್ದಾರಿ ಸ್ಥಾನದ ಅಧಿಕಾರಿಗಳಿದ್ದಾಗ ಸುಮ್ಮನೆ ಅದರ ಬಗ್ಗೆ ಹೇಳಬಾರದು. ಸ್ಟ್ಯಾಟಿಸ್ಟಿಕ್ಸ್‌ನಿಂದ ಕನ್‌ವಿನ್ಸ್ ಮಾಡಬೇಕಾಗುತ್ತದೆ. ಎಷ್ಟು ಕೇಸಸ್ ಲ್ಯಾಂಡ್ ಟ್ರಿಬ್ಯುನಲ್‌ನಿಂದ ಅಪಲೇಟ್ ಟ್ರಿಬ್ಯುನಲ್‌ಗೆ ಹೋಯಿತು, ಎಷ್ಟು ರೈತರ ಪರವಾಗಿ ಹೋಯಿತು, ಎಷ್ಟು ರೈತರ ವಿರುದ್ಧವಾಗಿ ಆಯಿತು ಎಂಬ ಬಗ್ಗೆ ಮಾನ್ಯ ಮಂತ್ರಿಗಳು ಹಾಗೂ ಸರ್ಕಾರ ತಿಳಿದುಕೊಳ್ಳಬೇಕು. ನಂತರ ನಿರ್ಧಾರ ತೆಗದುಕೊಳ್ಳಬೇಕು. ಮತ್ತೊಂದು ವಿಚಾರ ಏನೆಂದರೆ ಯಾರ ಆದಾಯ ವಾರ್ಷಿಕವಾಗಿ ೧೨ ಸಾವಿರ ರೂಪಾಯಿ ಇರುತ್ತದೆ ಆತನಿಗೆ ಅಗ್ರಿಕಲ್ಚರಲ್ ಲ್ಯಾಂಡ್ ಕೊಂಡುಕೊಳ್ಳುವುದಕ್ಕೆ ಬರುವುದಿಲ್ಲ ಎಂದು ಕಾಯಿದೆ ಮಾಡಿದ್ದಾರೆ. ೧-೩-೧೯೭೪ ರಲ್ಲಿ ದೇವರಾಜ ಅರಸು ಅವರು ಇಂಥ ಒಂದು ಕ್ರಾಂತಿಕಾರಿ ಕಾಯಿದೆ ತಂದಾಗ ಈ ಪ್ರಾವಿಜನ್ ಸರಿಯಿತ್ತು. ಆದರೆ ಇವತ್ತು ಏನಾಗಿದೆ? ವಿಧಾನ ಸೌಧದಲ್ಲಿ ಕೆಲಸ ಮಾಡುವ ಒಬ್ಬ ಪ್ಯೂನ್ ಸಂಬಳ ಎರಡೂವರೆಯಿಂದ ೩ ಸಾವಿರ ರೂಪಾಯಿವರೆಗೂ ಹೆಚ್ಚಿದೆ. ಆದ್ದರಿಂದ ೧೨ ಸಾವಿರ ಇನ್‌ಕಂ ಲಿಮಿಟ್‌ಗೆ ಮಹತ್ವ ಉಳಿದಿಲ್ಲ. ಲ್ಯಾಂಡ್ ರಿಫಾರ್ಮ್ಸ್ ಲೆಜಿಸ್ಲೇಷನ್‌ನಲ್ಲಿ ಮಹಾರಾಷ್ಟ್ರ ಪ್ರೋಗ್ರೆಸೀವ್ ಸ್ಟೇಟ್. ಅಲ್ಲಿ ಯಾವುದೂ ರಿಸ್ಟ್ರಿಕ್ಷನ್ಸ್ ಇಲ್ಲ. ಏತಕ್ಕಿಲ್ಲ ಅಂದರೆ ಅಲ್ಲಿ ಸೀಲಿಂಗ್ ಲಿಮಿಟ್ ಇದೆ, ಎಷ್ಟೇ ಆರ್ಥಿಕವಾಗಿ ಸಮಾನವಾಗಿದ್ದರೂ ಕೂಡ ೫೪ ಎಕರೆ ಮಾತ್ರ ಕೊಳ್ಳಬಹುದು ಎಂದು ಅಲ್ಲಿದೆ. ಅದರ ಮೇಲೆ ಒಂದು ಗುಂಟೆ ಕೂಡ ಜಾಸ್ತಿ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಈ ಒಂದು ರಿಸ್ಟ್ರಿಕ್ಷನ್ ನಮ್ಮಲ್ಲಿರುವುದರಿಂದ ಹಳ್ಳಿಗಳಲ್ಲಿ ಕೂಲಿ ಮಾಡುವುದಕ್ಕೆ ಜನ ಸಿಗುತ್ತಿಲ್ಲ. ಎಲ್ಲರೂ ಅರ್ಬನ್ ಪ್ರದೇಶದ ಕಡೆ ಆಕರ್ಷಿತರಾಗುತ್ತಿದ್ದಾರೆ. ಇಂಥ ಒಂದು ಪರಿಸ್ಥಿತಿಯಲ್ಲಿ ನಿಜವಾಗಿ ಕೃಷಿ ರಂಗದಲ್ಲಿ ಹೊಸ ಕ್ರಾಂತಿ ತರಬೇಕಾದರೆ ಇಂಥ ರಿಸ್ಟ್ರಿಕ್ಷನ್ಸ್ ಇರಬಾರದು. ಆ ಸಲುವಾಗಿ ೧೨ ಸಾವಿರ ರೂಪಾಯಿ ರಿಸ್ಟ್ರಿಕ್ಷನ್ ಇರುವುದನ್ನು ಜಾಸ್ತಿ ಮಾಡುತ್ತೀರೋ ಅಥವಾ ತೆಗೆಯುತ್ತೀರೋ ಎಂದು ತಮ್ಮ ಮುಖಾಂತರ ಸರ್ಕಾರವನ್ನು ನಾನು ಕೇಳಿಕೊಳ್ಳುತ್ತಿದ್ದೇನೆ. ಇವೊತ್ತು ಕೈಗಾರಿಕಾ ವಿಚಾರದಲ್ಲಿ ಯಾವ ಪ್ರಕಾರ ಅದು ಕೆಲಸ ಮಾಡುತ್ತಿದೆ ಎಂಬ ಬಗ್ಗೆ ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದೀರಿ. ಅದನ್ನು ಮಾಡಿ. ಪ್ರತಿ ವರ್ಷ ನೂರಾರು ಕೋಟಿ ರೂಪಾಯಿಗಳನ್ನು ಸರ್ಕಾರ ಇಂಡಸ್ಟ್ರೀಸ್‌ಗೆ ಇನ್‌ವೆಸ್ಟ್ ಮಾಡಿ, ಪ್ರತಿ ವರ್ಷ ನಷ್ಟ ಅನುಭವಿಸುವುದಕ್ಕೆ ಸಾಧ್ಯವಾಗುವುದಿಲ್ಲ, ಆದರೆ ರಾಷ್ಟ್ರೀಕರಣದ ಬಗ್ಗೆ ಕಮಿಟ್‌ಮೆಂಟ್ ಏನಿದೆ ಅದು ಹೋಗಬಾರದು. ಪ್ರತಿ ಹಂತದಲ್ಲಿ ಎಲ್ಲವನ್ನೂ ಪ್ರೈವೇಟ್ ಜನರ ಕೈಗೆ ಕೊಡುತ್ತೇವೆಂದರೆ ಅದು ದೊಡ್ಡ ತಪ್ಪಾಗುತ್ತದೆ

ಇವತ್ತು ನಾವು ಪ್ರತಿಯೊಂದು ಇಂಡಸ್ಟ್ರಿಯನ್ನೂ ತೆಗೆದುಕೊಂಡು ವಿಚಾರ ಮಾಡಬೇಕಾಗುತ್ತದೆ. ಈ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಚೆನ್ನಾಗಿ ಹೇಳಿದ್ದಾರೆ. ರಾಜ್ಯದಲ್ಲಿ ಸತತವಾಗಿ ೫-೬ ವರ್ಷಗಳ ಕಾಲ ಬರಗಾಲ ಬಂದಿದ್ದರಿಂದ ಕೈಗಾರಿಕಾ ಬೆಳವಣಿಗೆಗೆ ತೊಂದರೆ ಆಯಿತು ಎಂದಿದ್ದಾರೆ. ಬರಗಾಲದಿಂದ ವಿದ್ಯುತ್ ಉತ್ಪಾದನೆ ಕುಂಠಿತವಾದ್ದರಿಂದ ಕೈಗಾರಿಕೆಗಳ ಬೆಳವಣಿಗೆ ಕಡಿಮೆಯಾಯಿತು. ಇವತ್ತು ಕೈಗಾರಿಕೆಗಳನ್ನು ಹೆಚ್ಚು ಮಾಡಬೇಕಾದರೆ ಇನ್‌ಫ್ರಾಸ್ಟ್ರಕ್ಚರ್ ಹೆಚ್ಚು ಮಾಡಬೇಕಾಗುತ್ತದೆ ಇವತ್ತು ಹಿಂದುಳಿದ ಪ್ರದೇಶಗಳಲ್ಲಿ ಹೆಚ್ಚು ಹೆಚ್ಚು ಇನ ಫ್ರಾಸ್ಟ್ರಕ್ಚರ್ ಕಲ್ಪಿಸಿ ಕೈಗಾರಿಕೆಗಳ ಬೆಳವಣಿಗೆಗೆ ಹೆಚ್ಚು ಆದ್ಯತೆ ಕೊಡಬೇಕಾಗುತ್ತದೆ. ಇವತ್ತು ಎಲ್ಲರೂ ಬೆಂಗಳೂರು, ಹುಬ್ಬಳ್ಳಿ, ಬೆಳಗಾಂನಲ್ಲಿ ಕೈಗಾರಿಕೆ ತೆರೆಯಲು ಮುಂದೆ ಬರುತ್ತಾರೆ. ಯಾರೂ ಗುಲ್ಬರ್ಗಾಕ್ಕೆ, ಕಾರವಾರಕ್ಕೆ ಹೋಗುವುದಿಲ್ಲ. ಇವತ್ತು ಸೀಬರ್ಡ್‌ನಂತಹ ಯೋಜನೆ ಕಾರವಾರದಲ್ಲಿ ಬಂದರೂ ಜನ ಅಲ್ಲಿ ಹೋಗುವುದಕ್ಕೆ ಇಷ್ಟಪಡುವುದಿಲ್ಲ. ಆದ್ದರಿಂದ ಇವತ್ತು ಅಲ್ಲಿ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಇವತ್ತು ಎಲೆಕ್ಟ್ರಾನಿಕ್ಸ್‌ನಲ್ಲಿ ಸಾಫ್ಟ್‌ವೇರ್‌ಗೆ ಸಾಕಷ್ಟು ಬೇಡಿಕೆ ಇದೆ. ಎಷ್ಟೋ ಜನ ಈ ಉದ್ಯಮದಲ್ಲಿ ಎಕ್ಸ್‌ಪೋರ್ಟ್ ಕೂಡಾ ಮಾಡುತ್ತಿದ್ದಾರೆ. ಆದರೆ ಈ ಇಂಡಸ್ಟ್ರೀ ಬೆಳೆಯದೇ ಇರುವುದಕ್ಕೆ ಕಾರಣ ಏನು ಎಂಬುದನ್ನು ಸಹಾ ನೋಡಬೇಕು. ಇವತ್ತು ಈ ಬಗ್ಗೆ ನಮ್ಮ ಸರ್ಕಾರದ ಪಾಲಿಸಿ ಏನು ಇದೆ ಅದು ಕೂಡಾ ಬದಲಾವಣೆ ಆಗಬೇಕು. ನಾನು ನಮ್ಮ ಅರ್ಥ ಸಚಿವರಿಗೆ ಈ ಬಗ್ಗೆ ಹೇಳಿದೆ. ಇವತ್ತು ಏನು ಮಲ್ಟಿ ಪಾಯಿಂಟ್ ಟ್ಯಾಕ್ಸ್ ಹಾಕಿದ್ದೀರಿ ಇದರಿಂದ ನಮ್ಮ ಕೈಗಾರಿಕಾ ಬೆಳವಣಿಗೆಗೆ ತೊಂದರೆ ಆಗುತ್ತಿದೆ. ಇವತ್ತು ಗೋವಾ, ಮಹಾರಾಷ್ಟ್ರ, ಆಂಧ್ರದಲ್ಲಿ ಸಿಂಗಲ್ ಪಾಯಿಂಟ್ ಟ್ಯಾಕ್ಸ್ ಇದೆ. ನೀವು ಮಲ್ಟಿ ಪಾಯಿಂಟ್‌ನ್ನು ಯಾವ ಆಧಾರದ ಮೇಲೆ ಮಾಡಿದಿರಿ ಎಂಬುದನ್ನು ಹೇಳಬೇಕು. ನಾವು ಒಂದು ತಿಂಗಳಿಗೆ ಒಂದು ಸಾವಿರ ಕೈಗಾರಿಕೆಗಳನ್ನು ಮಾಡಬೇಕೆಂದು ಮಾಡಿದೆವು. ಇದರಲ್ಲಿ ನಾವು ಸಣ್ಣ ಕೈಗಾರಿಕೆಗಳಿಗೆ ಪ್ರಾಧಾನ್ಯತೆಯನ್ನು ಕೊಟ್ಟಿದ್ದೇವೆ. ಇವತ್ತು ಸಣ್ಣ ಸಣ್ಣ ಕೈಗಾರಿಕೆಗಳ

ಅಭಿವೃದ್ಧಿಗೆ ದೊಡ್ಡ ದೊಡ್ಡ ಕೈಗಾರಿಕೆಗಳೂ, ಸಾರ್ವಜನಿಕ ಉದ್ದಿಮೆಗಳು ಸಹಾ ತಮ್ಮ ತಮ್ಮ ಪಾತ್ರ ವಹಿಸಬೇಕಾಗುತ್ತದೆ. ಇವತ್ತು ದೊಡ್ಡ ದೊಡ್ಡ ಕೈಗಾರಿಕೋದ್ಯಮಿಗಳು ನಮ್ಮ ಸಣ್ಣ ಸಣ್ಣ ಕೈಗಾರಿಕೆಗಳು ತಯಾರು ಮಾಡುವ ಮೆಟೀರಿಯಲ್ಸ್‌ನ್ನು ತೆಗೆದುಕೊಳ್ಳದೇ ಹೊರಗಡೆಯಿಂದ ಅವನ್ನು ತರಿಸಿಕೊಳ್ಳುತ್ತಾರೆ. ಸರ್ಕಾರ ಇದನ್ನು ಮೊದಲು ಬಂದ್ ಮಾಡಬೇಕು ಎಂದು ನಾನು ಹೇಳುತ್ತೇನೆ. ಇವತ್ತು ನಮ್ಮ ರಾಜ್ಯದಲ್ಲಿನ ಸಣ್ಣ ಕೈಗಾರಿಕೆಗಳು ಬೆಳೆಯ ಬೇಕಾಗಿರುವುದರಿಂದ, ಇವುಗಳಲ್ಲಿ ತಯಾರಾಗುವ ಮೆಟೀರಿಯಲ್ಸ್‌ನ್ನು ನಮ್ಮ ರಾಜ್ಯದ ದೊಡ್ಡ ದೊಡ್ಡ ಕೈಗಾರಿಕೆಗಳು ಕೊಂಡು ಕೊಳ್ಳುವಂತೆ ಮಾಡಬೇಕು. ನಮ್ಮಲ್ಲಿರುವ ಕೈಗಾರಿಕೆಗಳು, ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಹಾಗೂ ಸರ್ಕಾರಿ ಇಲಾಖೆಗಳು ಈ ಸಣ್ಣ ಕೈಗಾರಿಕೆಗಳಲ್ಲಿ ಉತ್ಪತ್ತಿಯಾಗುವ ವಸ್ತುಗಳನ್ನೇ ಕೊಂಡುಕೊಳ್ಳುವಂತಾಗ ಬೇಕು. ಒಂದು ವೇಳೆ ಅವಕ್ಕೆ ಬೇಕಾದ ಉತ್ಪನ್ನ ಸಿಗದಿದ್ದರೆ ಮಾತ್ರ ಬೇರೆ ರಾಜ್ಯಗಳಿಂದ ತರಿಸಿ ಕೊಳ್ಳಬಹುದು. ಇವತ್ತು ನಾವು ಎಷ್ಟೇ ಶೆಡ್‌ಗಳನ್ನು ಕಟ್ಟಿಸಿದರು ಅವು ಮಾರಾಟ ಆಗುತ್ತಾ ಇಲ್ಲ. ಇವತ್ತು ನಾವು ಮುಖ್ಯವಾಗಿ ಇನ್‌ಫ್ರಾಸ್ಟ್ರಕ್ಚರ್ ನಿರ್ಮಾಣ ಮಾಡಿಕೊಡಬೇಕು. ಅದು ನೀರಿನ ವ್ಯವಸ್ಥೆ ಇರಬಹುದು, ವಿದ್ಯುತ್ ವ್ಯವಸ್ಥೆ ಇರಬಹುದು. ಅವನ್ನು ಕೊಟ್ಟರೆ ಜನರೂ ಇವುಗಳನ್ನು ಕೊಳ್ಳಲು ಮುಂದೆ ಬರುತ್ತಾರೆ. ಇವತ್ತು ಕೈಗಾರಿಕೆ ಸ್ಥಾಪನೆ ಬಗ್ಗೆ ಸಿಂಗಲ್ ವಿಂಡೋ ಸಿಸ್ಟಮ್ ಇದೆ. ಆದರೆ ಅದರಿಂದ ಸರಿಯಾದ ಕೆಲಸ ಕಾರ್ಯಗಳು ಆಗುತ್ತಾ ಇಲ್ಲ. ಇವತ್ತು ಒಂದು ಕೈಗಾರಿಕೆ ಸ್ಥಾಪನೆ ಮಾಡಲು ಒಂದರಿಂದ ಎರಡು ವರ್ಷಗಳು ಹಿಡಿಯುತ್ತಿದ್ದು ಆ ಸಮಯದಲ್ಲಿ ನೂರಾರು ಕಡೆ ಓಡಾಡಬೇಕಾಗುತ್ತದೆ. ಅಷ್ಟು ಹೊತ್ತಿಗೆ ಆತ ಏನಾಗಿರಬೇಕು ? ಆದ್ದರಿಂದ ಇವತ್ತು ಸಿಂಗಲ್ ವಿಂಡೋ ಏಜೆನ್ಸಿ ಏನಿದೆ ಅದನ್ನು ಎಫೆಕ್ಟೀವ್ ಆಗಿ ಜಾರಿ ಮಾಡಬೇಕಾಗಿದೆ. ಅದರಿಂದ ಜನರಿಗೆ ಏನಾದರೂ ಸಹಾಯ ಆಗುತ್ತದೆ. ಮಾನ್ಯ ಕೆ. ಹೆಚ್. ಪಾಟೀಲರು ಒಂದು ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ಇವತ್ತು ನಿರುದ್ಯೋಗ ಸಮಸ್ಯೆ ನಿವಾರಣೆ ಆಗಬೇಕಾದರೆ ಗ್ರಾಮಾಂತರ ಪ್ರದೇಶದಲ್ಲಿ ಆರ್ಥಿಕ ಉನ್ನತಿ ಆಗಬೇಕಾದರೆ ಪ್ರತಿಯೊಂದು ತಾಲ್ಲೂಕಿನಲ್ಲಿ ಆಗ್ರೋ ಇಂಡಸ್ಟ್ರೀಸ್ ಪ್ರಾರಂಭ ಮಾಡ ಬೇಕೆಂದು ಹೇಳಿದ್ದಾರೆ. ಇವತ್ತು ಕೇಂದ್ರ ಸರ್ಕಾರ ತನ್ನ ಮುಂಗಡ ಪತ್ರದಲ್ಲಿ ಗ್ರಾಮಾಂತರ ಪ್ರದೇಶದ ಅಭಿವೃದ್ಧಿಗೆ ಹೆಚ್ಚಿನ ಮಹತ್ವ ಕೊಟ್ಟಿದ್ದು ಅದರ ಅಡಿಯಲ್ಲಿ ಇಂತಹ ಕೈಗಾರಿಕೆಗಳನ್ನು ಗ್ರಾಮಾಂತರ ಪ್ರದೇಶದಲ್ಲಿ ಪ್ರಾರಂಭ ಮಾಡುವುದಕ್ಕೆ ಸಾಕಷ್ಟು ಅವಕಾಶ ಇದೆ. ಅದರ ಲಾಭ ಪಡೆದುಕೊಂಡ ಹಿಂದುಳಿದ ಪ್ರದೇಶಗಳಲ್ಲಿ ಆಗ್ರೋ ಇಂಡಸ್ಟ್ರೀಸ್ ಪ್ರಾರಂಭ ಮಾಡಬೇಕು. ಈ ಕೈಗಾರಿಕೆ ಪ್ರಾರಂಭ ಮಾಡುವುದರಿಂದ ಎಷ್ಟೋ ಜನರಿಗೆ ಉದ್ಯೋಗ ಕೊಡುವುದಕ್ಕೆ ಅವಕಾಶವಾಗುತ್ತದೆ. ಇವತ್ತು ಏನು ಕೆಎಸ್‌ಎಫ್‌ಸಿ ಒಂದು ಒಳ್ಳೆಯ ಕೆಲಸ ಮಾಡಿದೆ ಅದಕ್ಕೆ ನಾನು ಅಭಿನಂದಿಸುತ್ತೇನೆ. ಇವತ್ತು ಅವರು ೧೦೦೦೦ ಕೋಟಿ ಮೇಲೆ ಸಾಲ ಕೊಟ್ಟಿದ್ದಾರೆ. ಇಂತಹ ಒಳ್ಳೆಯ ಕೆಲಸ ಕೇವಲ ಇದರೊಂದರಿಂದಲ್ಲ, ಬೇರೆ ಬೇರೆ ಸಂಸ್ಥೆಗಳ ಮುಖಾಂತರ ಕೂಡಾ ಮಾಡಬೇಕಾಗಿದೆ. ಆ ದೃಷ್ಟಿಯಿಂದ ನಾನು ಇದನ್ನು ಅಭಿನಂದಿಸುತ್ತಿದ್ದೇನೆ. ಇನ್ನು ರೀಹ್ಯಾಬಿಲಿಟೇಷನ್ ಆಫ್ ಸಿಕ್ ಇಂಡಸ್ಟ್ರೀಸ್ ಬಗ್ಗೆ ಹೇಳುವುದಾದರೆ, ಒಂದೂವರೆ ವರ್ಷಗಳ ಹಿಂದೆ ಈ ಬಗ್ಗೆ ನಾವು ಏನು ನಿರ್ಣಯ ತೆಗೆದುಕೊಂಡಿದ್ದೆವು, ಅದು ಇನ್ನೂ ಕೂಡಾ ಇಂಪ್ಲಿಮೆಂಟ್ ಆಗಿಲ್ಲ. ಹೀಗಾದರೆ ಯಾವ ಪ್ರಕಾರ ಇಂಡಸ್ಟ್ರೀಸ್ ಬೆಳೆಯು ವುದಕ್ಕಾಗುತ್ತದೆ? ಇವತ್ತು ಕೈಗಾರಿಕಾ ಬೆಳವಣಿಗೆಗೆ ಏನು ಅವಶ್ಯಕತೆ ಇದೆಯೋ ಅದನ್ನು ಒದಗಿಸುವ ಬಗ್ಗೆ ಸರ್ಕಾರ ಗಮನ ಕೊಡಬೇಕು. ಇನ್ನು ಫುಟ್‌ವೇರ್ ಮೇಲೆ ೮ ಪರ್ಸೆಂಟ್ ಟ್ಯಾಕ್ಸ್ ಹಾಕಿದ್ದೀರಿ. ಹಿಂದೆ ೩೦ ರೂಪಾಯಿವರೆಗಿನ ಫುಟ್‌ವೇರ್‌ಗಳಿಗೆ ಟ್ಯಾಕ್ಸ್ ಇರಲಿಲ್ಲ.

೨–೩೦ ಪಿ.ಎಂ.

ಆಂಧ್ರಪ್ರದೇಶದಲ್ಲಿ ಇಲ್ಲ, ಕೇರಳದಲ್ಲಿ ಇಲ್ಲ. ಮಹಾರಾಷ್ಟ್ರದಲ್ಲಿ ಇಲ್ಲ. ಈಗ ನೀವು ೮ ಪರ್ಸೆಂಟ್ ಟ್ಯಾಕ್ಸ ಹಾಕಿದ್ದೀರಿ, ಹೀಗಾದರೆ ಯಾವ ಪ್ರಕಾರ ಕೈಗಾರಿಕೆ ಉಳಿಯುತ್ತದೆ? ಸಾವಿರಾರು ಜನ ಬಡವರು ಈ ಕೈಗಾರಿಕೆಯಲ್ಲಿ ಕೆಲಸ ಮಾಡುತ್ತಾರೆ. ನೀವು ತೆರಿಗೆ ಜಾಸ್ತಿ ಮಾಡಿದರೆ ಯಾವ ಪ್ರಕಾರ ಈ ಕೈಗಾರಿಕೆ ಬೆಳೆಯ ಬೇಕು ಹಾಗಾಗಿ ಮಾತನಾಡುವುದು ಒಂದು ಮಾಡುವುದು ಒಂದು ಆದರೆ ಯಾವುದೇ ಒಂದು ಗುರಿಯನ್ನು ಮುಟ್ಟಲಿಕ್ಕೆ ಸಾಧ್ಯವಿಲ್ಲ. ಆ ದೃಷ್ಟಿಯಿಂದ ಸರ್ಕಾರದ ಟ್ಯಾಕ್ಸೇಷನ್ ಏನಿದೆ, ಅದನ್ನು ಕಡಿಮೆ ಮಾಡಿ ಯಾವ ಪ್ರಕಾರ ಇಂಡಸ್ಟ್ರಿಗಳು ಬೆಳೆಯಬೇಕೆನ್ನುವ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ನೀರಾವರಿಯ ಬಗ್ಗೆ ಹೇಳಿದ್ದಾರೆ. ಕೃಷ್ಣಾ ಕಾವೇರಿ ಜಲಾನಯನ ಪ್ರದೇಶಗಳಿಗೆ ಸಾಕಷ್ಟು ಹಣವನ್ನು ಕೊಡಿ ಸಂತೋಷ. ಆದರೆ ಮಲೆನಾಡು ಜಿಲ್ಲೆಗಳಿಗೆ ಕೋಲಾರ ಜಿಲ್ಲೆಗೆ ಕೃಷ್ಣಾ ಮತ್ತು ಕಾವೇರಿ ನೀರನ್ನು ತೆಗೆದುಕೊಂಡು ಬರುತ್ತೀರಾ? ಇಲ್ಲಿ ಲಿಫ್ಟ್ ಇರಿಗೇಷನ್‌ಗೆ ಆದ್ಯತೆ ಕೊಡಬೇಕಾಗುತ್ತದೆ ಇಂತಹ ಕಡೆಗಳಿಗೆ ಮೈನರ್ ಇರಿಗೇಷನ್‌ಗೆ ಆದ್ಯತೆ ಕೊಡಬೇಕಾಗುತ್ತದೆ. ಮೈನರ್ ಇರಿಗೇಷನ್‌ಗೆ ಹಣ

ಕೊಟ್ಟಿರುವುದು ಎಲ್ಲೂ ಕಾಣಿಸುತ್ತಿಲ್ಲ. ಲಿಫ್ಟ್ ಇರಿಗೇಷನ್ ಮತ್ತು ಮೈನರ್ ಇರಿಗೇಷನ್ ಯೋಜನೆಗಳಿಗೆ ಎಲ್ಲಿ ಹಣ ಕೊಟ್ಟಿದ್ದೀರಿ? ನಾವು ಅಧಿಕಾರದಲ್ಲಿದ್ದಾಗ ಲಿಫ್ಟ್ ಇರಿಗೇಷನ್ ಕಾರ್ಪೋರೇಷನ್ ಮಾಡಿ ತಪ್ಪು ಮಾಡಿದ್ದೇವೆ. ಲಿಫ್ಟ್ ಇರಿಗೇಷನ್ ಮಾಡಬೇಕಾದರೆ ರೈತರು ಮೊದಲೇ ೨೦ ಪರ್ಸೆಂಟ್ ಮತ್ತು ೩೦ ಪರ್ಸೆಂಟ್ ಹಣ ಕೊಡಬೇಕೆಂದು ಹೇಳಿದ್ದಾರೆ. ಅದು ಸಾಧ್ಯವಿಲ್ಲ. ಕಾವೇರಿ ಮತ್ತು ಕೃಷ್ಣಾ ಯೋಜನೆಗಳಿಗೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ನೀರು ಕೊಡುತ್ತೀರಿ. ಮೊದಲು ನೀರು ಕೊಟ್ಟು ಆಮೇಲೆ ರೈತರಿಂದ ಹಣ ತೆಗೆದುಕೊಳ್ಳುತ್ತೀರಿ. ನಮ್ಮ ಜಿಲ್ಲೆಗಳಲ್ಲಿ ಲಿಫ್ಟ್ ಇರಿಗೇಷನ್ ಮಾಡಬೇಕಾದರೆ ಯೋಜನೆ ಮಾಡುವುದಕ್ಕೆ ಮೊದಲೇ ಹಣ ಕೊಡಿ ಅಂದರೆ ಯಾವ ನ್ಯಾಯ? ಲಿಫ್ಟ್ ಇರಿಗೇಷನ್ ಕಾರ್ಪೋರೇಷನ್ ಮೊದಲು ಅಬಾಲಿಷ್ ಆಗಬೇಕು. ಇದರಿಂದ ಎಷ್ಟೋ ರೈತರಿಗೆ ನೀರಾವರಿಯ ಅನಾನುಕೂಲತೆಯಾಗಿದೆ. ಇದು ಯಾವ ನ್ಯಾಯ? ರೈತರಿಗೆ ನ್ಯಾಯವನ್ನು ದೊರಕಿಸಲಿಕ್ಕೆ ಸಾಧ್ಯವಾಗಿಲ್ಲ. ಅಂಡರ್ ಗ್ರೌಂಡ್ ವಾಟರ್ ಬಗ್ಗೆ ಒಂದು ಸರ್ವೆ ಮಾಡಿದ್ದಾರೆ. ಎಲ್ಲೆಲ್ಲಿ ಅಂಡರ್ ಗ್ರೌಂಡ್ ವಾಟರ್ ಇದೆ ಅದರ ಬಗ್ಗೆ ಸರ್ಕಾರ ಏನು ಒಂದು ಕಾರ್ಯಕ್ರಮ ತೆಗೆದುಕೊಂಡಿದೆ ಎಂಬುದು ನಮಗೆ ತಿಳಿಯಬೇಕು. ರಾವ್‌ರವರು ಈ ಬಗ್ಗೆ ಬಹಳ ಅಭ್ಯಾಸ ಮಾಡಿ ಒಂದು ರಿಪೋರ್ಟ್ ತಯಾರು ಮಾಡಿದ್ದಾರೆ. ಆ ರಿಪೋರ್ಟ್‌ನ ಲಾಭ ನಮ್ಮ ರೈತರಿಗೆ ಸಿಗಬೇಕಾದರೆ ಸರ್ಕಾರ ರಿಪೋರ್ಟನ್ನು ಪರಿಶೀಲನೆ ಮಾಡಿ ಅದರ ಲಾಭವನ್ನು ರೈತರಿಗೆ ಮುಟ್ಟಿಸಲಿಕ್ಕೆ ಪ್ರಯತ್ನ ಮಾಡಬೇಕಾಗುತ್ತದೆ. ಇವೊತ್ತು ಎಷ್ಟೋ ಸಣ್ಣ ಸಣ್ಣ ಟ್ಯಾಂಕುಗಳಿವೆ. ಅವುಗಳ ಡೀಸಿಲ್ಟಿಂಗ್ ಆಗಬೇಕಾಗಿದೆ. ಅದರ ಬಗ್ಗೆ ಸರ್ಕಾರ ಕಾರ್ಯಕ್ರಮ ಹಾಕಿಕೊಳ್ಳಬೇಕು. ಐದಾರು ವರ್ಷಗಳ ಕಾಲ ನಾವು ಬರಗಾಲದ ಛಾಯೆಯಲ್ಲಿದ್ದೆವು. ಇವತ್ತು ಸಹ ಆ ಪರಿಸ್ಥಿತಿ ನಿರ್ಮಾಣವಾಗಿದೆ. ಬೆಂಗಳೂರಿನಲ್ಲಿ ಇಷ್ಟೊತ್ತಿಗೆ ಎರಡು ಮೂರು ಮಳೆಯಾಗಬೇಕಾಗಿತ್ತು. ರಾಜ್ಯದಲ್ಲಿ ಎಲ್ಲೂ ಮಳೆಯಾಗಿಲ್ಲ. ದನಕರುಗಳಿಗೆ ನೀರಿಲ್ಲ, ಮೇವಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರ ಕಣ್ಣು ತೆರೆದು ಕೆಲಸ ಮಾಡಬೇಕಾಗುತ್ತದೆ. ಡೀಸಿಲ್ಟಿಂಗ್ ಕೆಲಸವನ್ನು ತೆಗೆದುಕೊಂಡರೆ ನೀರು ಜಾಸ್ತಿ ಕೆರೆಗಳಿಗೆ ಬರುತ್ತದೆ ಮತ್ತು ಜನರಿಗೆ ಉದ್ಯೋಗಾವಕಾಶ ಆಗಬಹುದು. ಆ ದೃಷ್ಟಿಯಿಂದ ಸರ್ಕಾರ ಕೆಲಸ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಬರಗಾಲದ ಛಾಯೆ ನಮಗೆ ಕಾಣಿಸುತ್ತಾ ಇದೆ. ಆದ್ದರಿಂದ ಸರ್ಕಾರ ಕೂಡಲೇ ಕ್ರಮ ತೆಗೆದುಕೊಳ್ಳಬೇಕು. ಸರ್ಕಾರ ಈ ಬಗ್ಗೆ ಏನೂ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಕುಡಿಯಲು ನೀರು ಇಲ್ಲ ದನಕರುಗಳಿಗೆ ಮೇವು ಇಲ್ಲ ಎಂದು ನಮಗೆ ಟೆಲಿಫೋನ್ ಮತ್ತು ಟೆಲಿಗ್ರಾಫ್‌ಗಳು ಬರುತ್ತಿವೆ. ಸರ್ಕಾರ ಇದರ ಬಗ್ಗೆ ಯಾವುದೇ ಕಾರ್ಯಕ್ರಮವನ್ನು ಹಾಕಿಕೊಂಡಿದ್ದು ನಮಗೆ ಗೊತ್ತಾಗುತ್ತಿಲ್ಲ.

ಇನ್ನು ಶಿಕ್ಷಣ ಇಲಾಖೆಯ ಬಗ್ಗೆ ಹೇಳುವುದಾದರೆ, ಶಿಕ್ಷಣ ಇಲಾಖೆಯಲ್ಲಿ ನಾವು ಸ್ಕೂಲ್ ರೂಮ್‌ಗಳನ್ನು ಕಟ್ಟುತ್ತೇವೆಂದು ಹೇಳಿದ್ದಾರೆ ಬಹಳ ಸಂತೋಷ. ನಮ್ಮಲ್ಲಿ ಮೊದಲೇ ಶಿಕ್ಷಣದಲ್ಲಿ ಬೇಸಿಕ್ ನೀತಿಯೇ ತಪ್ಪಾಗಿದೆ. ಯೂನಿವರ್ಸಿಟಿ ಎಜುಕೇಶನ್‌ಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಟ್ಟಿದ್ದೇವೆ. ಹೀಗಾಗಿ ಪ್ರೈಮರಿ ಮತ್ತು ಸೆಕೆಂಡರಿ ಎಜುಕೇಶನ್ ಅನ್ನು ಟೋಟಲಿ ನಾವು ನೆಗ್ಲೆಕ್ಟ್ ಮಾಡಿದ್ದೇವೆ. ಇದು ಹಿಂದು ಮುಂದಾಗಬೇಕಾಗಿದೆ. ಫೌಂಡೇಶನ್ ಸರಿಯಾಗಿ ಹಾಕದಿದ್ದರೆ ಯೂನಿವರ್ಸಿಟಿ ಎಜುಕೇಶನ್ ಏತಕ್ಕೆ ನಮಗೆ ಬೇಕು? ಹೀಗಾಗಿ ಇವತ್ತು ಕೇವಲ ೩೭ ಪರ್ಸೆಂಟ್ ಜನ ಅಕ್ಷರಸ್ಥರು ಇದ್ದಾರೆ. ೬೩ ಪರ್ಸೆಂಟ್ ಜನ ಈ ರಾಜ್ಯದಲ್ಲಿ ಅನಕ್ಷರಸ್ಥರು ಇದ್ದಾರೆ. ವಯಸ್ಕರ ಶಿಕ್ಷಣದ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಏನೂ ಕಾಣಿಸುತ್ತಾ ಇಲ್ಲ. ವಯಸ್ಕರ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆಯನ್ನು ಮತ್ತು ಹೆಚ್ಚಿನ ಒತ್ತನ್ನು ಕೊಡಬೇಕಾಗಿದೆ. ೮೦೦ರಿಂದ ೯೦೦ ಕೋಟಿ ರೂಪಾಯಿಗಳನ್ನು ಪ್ರತಿ ವರ್ಷ ಈ ಶಿಕ್ಷಣ ಇಲಾಖೆಗೆ ಖರ್ಚು ಮಾಡುತ್ತಿದ್ದೇವೆ. ಆದರೆ ಇದರಲ್ಲಿ ಶೇಕಡ ೯೭ ಪರ್ಸೆಂಟ್ ಹಣ ಕೇವಲ ಅಲ್ಲಿ ಕೆಲಸ ಮಾಡತಕ್ಕ ನೌಕರರ ಸಂಬಳಕ್ಕೆ ಕೊಡುತ್ತಿದ್ದೇವೆ. ಈ ಕಾರಣದಿಂದ ಇವತ್ತು ಇನ್‌ಫ್ರಾಸ್ಟ್ರಕ್ಚರ್ ಡೆವಲಪ್ ಮಾಡಲಿಕ್ಕೆ ಹಣವಿಲ್ಲ. ಮೇಂಟೆನೆನ್ಸ್‌ಗೆ ಹಣವಿಲ್ಲ. ಆ ದೃಷ್ಟಿಯಿಂದ ಸರ್ಕಾರ ಹೊಸ ಸ್ಕೂಲ್‌ಗಳನ್ನು ಕಟ್ಟಲಿಕ್ಕೆ ಕಾಲೇಜುಗಳನ್ನು ಕಟ್ಟಲಿಕ್ಕೆ ಐಟಿಐ ಬಿಲ್ಡಿಂಗ್‌ಗಳನ್ನು ಕಟ್ಟಲಿಕ್ಕೆ ಹಣ ಕೊಡುವುದರ ಜೊತೆಗೆ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್ ಮಾಡಬೇಕು. ಪ್ರಾಥಮಿಕ ಶಿಕ್ಷಣ ಮತ್ತು ಮಾಧ್ಯಮಿಕ ಶಿಕ್ಷಣಕ್ಕೆ ಹೆಚ್ಚಿನ ಹಣಕಾಸಿನ ಅವಕಾಶವನ್ನು ಮಾಡಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಅರ್ಬನ್ ವಾಟರ್ ಸಪ್ಲೈ ಬಗ್ಗೆ ಹೇಳಿದರು. ೨೨ ಟೌನ್‌ಗಳಿಗೆ ನಾವು ನೀರು ಕೊಡುವ ಯೋಜನೆಯನ್ನು ಹಾಕಿಕೊಂಡಿದ್ದೇವೆ ಎಂದು. ಈ ಯೋಜನೆಗಳಿಗೆ ಮೊದಲು ಈಗಾಗಲೇ ಕೈಗೊಂಡಿರುವ ಯೋಜನೆಗಳ ಕೆಲಸವನ್ನು ಮೊದಲು ಮುಗಿಸಬೇಕು. ನಮ್ಮ ಕಾರ್ಯಕ್ರಮ ಏನಿತ್ತು, ಅದು ಕೇಂದ್ರ ಸರ್ಕಾರದ ಕಾರ್ಯಕ್ರಮ. ಅಂದರೆ ೧೯೯೦ರೊಳಗೆ ಎಲ್ಲರಿಗೂ ಕುಡಿಯುವ ನೀರಿನ ಅಭಾವವನ್ನು ದೂರ ಮಾಡುವ ಕಾರ್ಯಕ್ರಮ ಇತ್ತು. ಆದರೆ ಇವತ್ತು ಏನಾಗಿದೆ ಎಂದರೆ, ಅರ್ಬನ್ ಸೆಂಟರ್‌ಗಳಲ್ಲಿ ಇವತ್ತು ನೀರಿನ ಅಭಾವ ಇಲ್ಲವೆಂದು ಸರ್ಕಾರ ಹೇಳಿದೆ.

ಆದರೆ ದಾವಣಗೆರೆ, ಹಳಿಯಾಳ ಹೀಗೆ ಪ್ರತಿಯೊಂದು ಕಡೆ ಇವತ್ತು ಕುಡಿಯುವ ನೀರಿನ ಅಭಾವ ಇದೆ, ಗದಗ ಬೆಟಗೇರಿಯಲ್ಲಿನ ನೀರಿನ ಸಮಸ್ಯೆ ಬಗ್ಗೆ ನಿನ್ನೆಯ ದಿವಸ ಪಾಟೀಲ್ ಸಾಹೇಬರು ಹೇಳಿದರು. ಈಗ ನಮ್ಮಲ್ಲಿ ೨೨೫ ಟೌನ್‌ಗಳು ಇವೆ. ವಿಶ್ವ ಬ್ಯಾಂಕಿನಿಂದಾಗಲೀ, ಎಲ್.ಐ.ಸಿ.ಯಿಂದಾಗಲೀ ಎಲ್ಲೆಲ್ಲಿಂದ ಹಣ ತರಲಿಕ್ಕೆ ಸಾಧ್ಯ ಇದೆ, ಅಲ್ಲಿಂದ ತರಲಿಕ್ಕೆ ಪ್ರಯತ್ನ ಮಾಡಬೇಕಿತ್ತು. ಇವತ್ತು ತಾವು ಹೇಳುತ್ತೀರಿ. ೨೦ ಸಾವಿರಕ್ಕಿಂತ ಮೇಲ್ಪಟ್ಟು ಜನಸಂಖ್ಯೆ ಇರುವ ಟೌನ್ ಇದ್ದರೆ, ಮುನಿಸಿಪಾಲಿಟಿಯಿಂದ ಕಾಂಟ್ರಿಬ್ಯೂಶನ್ ಕೊಡಬೇಕು ಎಂದು ಮುನಿಸಿಪಾಲಿಟಿಗಳ ಪರಿಸ್ಥಿತಿ ಹೇಗಿದೆ ಎಂದು ತಮಗೆ ಗೊತ್ತಿದೆ. ನನಗೆ ಚೆನ್ನಾಗಿ ಗೊತ್ತಿದೆ. ಮುನಿಸಿಪಾಲಿಟಿಗಳು ಕಾಂಟ್ರಿಬ್ಯೂಟ್ ಮಾಡುವುದಿಲ್ಲ. ಮತ್ತೆ ಯಾವ ತರಹದಿಂದ ಕುಡಿಯುವ ನೀರಿನ ಯೋಜನೆ ತರುವುದಕ್ಕೆ ಸಾಧ್ಯ? ಆದ್ದರಿಂದ ಹೆಚ್ಚಿನ ಮಹತ್ವವನ್ನು ಸರ್ಕಾರ ಇದಕ್ಕೆ ಕೊಡಬೇಕಾಗಿದೆ. ನಾನು ಒಂದೇ ಒಂದು ಮಾತನ್ನು ಕೃಷಿ ಇಲಾಖೆ ಬಗ್ಗೆ ಹೇಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇವತ್ತು ನಮ್ಮ ಎಕ್ಸ್‌ಟೇನ್‌ಷನ್ ಸರ್ವಿಸಸ್‌ನ್ನು ಸ್ಟ್ರೆಂಗ್ತನ್ ಮಾಡಬೇಕಾಗಿದೆ. ನಾನು ಕೃಷಿ ಮಂತ್ರಿ ಆಗಿದ್ದೆ. ನನಗೆ ಗೊತ್ತು. ಯಾವ ಪ್ರಕಾರ ಇಂಡಸ್ಟ್ರೀಸ್‌ನಲ್ಲಿ ಸಿಂಗಲ್ ವಿಂಡೋ ಸಿಸ್ಟಮ್ ಇದೆ, ಅದೇ ತರಹ ಕೃಷಿ ಇಲಾಖೆಯಲ್ಲಿ ಸಹ ಕ್ರಿಯೇಟ್ ಮಾಡಬೇಕಾಗುತ್ತದೆ. ಅದೇ ರೀತಿ ಫರ್ಟಿಲೈಸರ್ಸ್ ಇರಬಹುದು, ಸೀಡ್ಸ್ ಇರಬಹುದು, ಇನ್‌ಪುಟ್ಸ್ ಇರಬಹುದು, ಅವನ್ನು ರೈತನ ಮನೆತನಕ ಮುಟ್ಟಿಸುವ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕಾಗುತ್ತದೆ. land is scarce. ಉತ್ಪಾದನೆ ಹೆಚ್ಚಾಗಿಲ್ಲವೆಂದು ನಾವು ಹೇಳುತ್ತೇವೆ. ದೊಡ್ಡ ಪ್ರಮಾಣದಲ್ಲಿ ಉತ್ಪಾದನೆ ಹೆಚ್ಚು ಆಗಬೇಕಾದರೆ ನಾವು ಎಕ್ಸ್‌ಟೆನ್ಷನ್ ಆಕ್ಟಿವಿಟಿಯನ್ನು ಸ್ಟ್ರೆಂಥನ್ ಮಾಡಬೇಕಾಗುತ್ತದೆ. ಒಳ್ಳೆಯ ಬೀಜ, ಒಳ್ಳೆಯ ಗೊಬ್ಬರದ ಬಗ್ಗೆ ರೈತರಿಗೆ ಹೇಳಬೇಕು. ಇಂಟರ್‌ಕ್ರಾಪಿಂಗ್‌ಗೆ ಹೆಚ್ಚು ಮಹತ್ವ ಕೊಡಬೇಕಾಗುತ್ತದೆ. ಇದ್ದ ಭೂಮಿಯಲ್ಲೇ ಹೆಚ್ಚಿನ ಉತ್ಪಾದನೆ ಕಂಡುಕೊಳ್ಳಬೇಕಾದರೆ ಇಂಟರ್ ಕ್ರಾಪಿಂಗ್‌ಗೆ ಹೆಚ್ಚಿನ ಮಹತ್ವ ಕೊಟ್ಟರೆ ಸಾಧ್ಯವಾಗುತ್ತದೆ. ಇನ್ನು ಕ್ರಾಪ್ ಇನ್‌ಶೂರೆನ್ಸ್ ಬಗ್ಗೆ ನಾನು ಕೃಷಿ ಮಂತ್ರಿಯಾಗಿದ್ದಾಗ ಕೇಂದ್ರ ಸರ್ಕಾರಕ್ಕೆ ಹೇಳಿದ್ದೆ. ಏನೆಂದರೆ, ತಾಲ್ಲೂಕನ್ನು ಒಂದು ಯೂನಿಟ್ ಆಗಿ ಮಾಡಿದ್ದೀರಿ ಇದರಿಂದ ರೈತರಿಗೆ ಅನಾನುಕೂಲವಾಗುತ್ತದೆ ಎಂದು ಮಂಡಲ್ ಅನ್ನು ಯೂನಿಟ್ ಆಗಿ ಮಾಡಿ ಎಂದು ಹೇಳಿದೆ. ಆದರೆ ನಮ್ಮ ಭಜನ್‌ಲಾಲ್ ಅವರು ಒಂದು ಹೆಜ್ಜೆ ಮುಂದೆ ಹೋಗಿ ಮಂಡಲ್ ಎಂದು ಏತಕ್ಕೆ ಹೇಳುತ್ತೀರಿ, ನಾವು ವಿಲೇಜ್ ಅನ್ನು ಒಂದು ಯೂನಿಟ್ ಮಾಡುತ್ತೇವೆಂದು ಹೇಳಿದರು, ವಿಲೇಜ್‌ನ್ನು ಯೂನಿಟ್ ಮಾಡಿದರೆ ನೋಡಿಕೊಳ್ಳಲು ನಮ್ಮಲ್ಲಿ ಸಾಕಷ್ಟು ಸಿಬ್ಬಂದಿ ಇಲ್ಲ ಹಾಗೂ ಹಣ ಇಲ್ಲವೆಂದು ಹೇಳಿದರೂ ಸಹ ಅವರು ಮಾಡುತ್ತೇವೆಂದು ಹೇಳಿ ಆ ಬಗ್ಗೆ ಒಂದು ಸ್ಟೇಟ್‌ಮೆಂಟ್ ಸಹ ಕೊಟ್ಟರು. ಆದರೆ ನೀವು ವಿಲೇಜ್ ಒಂದು ಯೂನಿಟ್ ಎಂದು ಮಾಡಲಿಲ್ಲ. ಅಥವಾ ಮಂಡಲ್ ಒಂದು ಯೂನಿಟ್ ಎಂದು ಮಾಡಲಿಲ್ಲ. ತಾಲ್ಲೂಕನ್ನು ಯೂನಿಟ್ ಆಗಿ ಮಾಡಿದ್ದೀರಿ. ಹೀಗಾಗಿ ಇವತ್ತು ಕೇಂದ್ರ ಸರ್ಕಾರದ ಜವಾಬ್ದಾರಿ ಇದ್ದರೂ ಸಹ ರಾಜ್ಯ ಸರ್ಕಾರ ನವರು ಕೇಂದ್ರದ ಮೇಲೆ ಒತ್ತಾಯ ತರಬೇಕಾಗುತ್ತದೆ. ಈ ಕ್ರಾಪ್ ಇನ್ಶೂರೆನ್ಸ್‌ನಿಂದ ಎಷ್ಟೋ ಜನರಿಗೆ ಸಹಾಯವಾಗಿದೆ? ನಮ್ಮ ಸಿರ್ಸಿ ತಾಲ್ಲೂಕಿನಲ್ಲಿ ಬನವಾಸಿ ಕಡೆ ಬೆಳೆ ಹಾಳಾಗಿದ್ದರೆ, ಮತ್ತೊಂದು ಕಡೆ ಹಾಳಾಗಿಲ್ಲ. ತಾಲ್ಲೂಕು ಒಂದು ಯೂನಿಟ್ ಮಾಡಿದರೆ ರೈತರಿಗೆ ಅನ್ಯಾಯವಾಗಿದೆ. ಆದ್ದರಿಂದ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತಂದು ಮಂಡಲ್ ಅನ್ನು ಯೂನಿಟ್ ಎಂದು ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಆಗ ಮಾತ್ರ ಕ್ರಾಪ್ ಇನ್‌ಶೂರೆನ್ಸ್‌ನಿಂದ ರೈತರಿಗೆ ಉಪಯೋಗ ಆಗಬಹುದು. ಇನ್ನು ಕೊನೆಯದಾಗಿ ಈ ಫಾರೆಸ್ಟ್ ಬಗ್ಗೆ ಹೇಳಬೇಕಾಗಿದೆ. ಇವತ್ತು ನಮ್ಮ Forest Conservati n Act of 1980 ಎಂದು ಏನು ಮಾಡಿದ್ದಾರೆ, ಇದರಿಂದ ತೊಂದರೆ ಏನಾಗಿದೆ ಎಂದು ಯಾರೂ ವಿಚಾರ ಮಾಡುವುದಕ್ಕೆ ತಯಾರಿಲ್ಲ. ನನಗೆ ಎನ್‌ವೈರನ್‌ಮೆಂಟ್ ಬೇಕು. ಅದಕ್ಕೆ ಹೆಚ್ಚಿನ ಮಹತ್ವ ಕೊಟ್ಟಿಲ್ಲ. Sec. 2 of Forest Conservation Act of 1980. ಇದರ ಬಗ್ಗೆ ವಿಚಾರ ಮಾಡಬೇಕಾಗಿದೆ. ಯಾವಾಗ ಪ್ರಪೋಸಲ್ ಮಾಡಿ ರಾಜ್ಯ ಸರ್ಕಾರ ಕಳಿಸಿದರೂ ಕೇಂದ್ರ ಸರ್ಕಾರ ಕ್ಲಿಯರ್ ಮಾಡುವುದಿಲ್ಲ. ಈ ಆಕ್ಟ್ ಪ್ರಕಾರ ರಿಜೆಕ್ಟ್ ಮಾಡಿದ್ದೇವೆ ಎಂದು ಹೇಳುತ್ತಾರೆ. ಇವತ್ತು ನಮ್ಮ ಜಿಲ್ಲೆಯಲ್ಲಿ ಏನಾಗಿದೆ ಎಂದರೆ, ಸ್ಕೂಲ್ ಬಿಲ್ಡಿಂಗ್ ಕಟ್ಟಬೇಕಾದರೆ ಫಾರೆಸ್ಟ್ ಲ್ಯಾಂಡ್ ಬೇಕು, ಕಾಲೇಜು ಬಿಲ್ಡಿಂಗ್ ಕಟ್ಟಬೇಕಾದರೆ ಫಾರೆಸ್ಟ್ ಲ್ಯಾಂಡ್ ಬೇಕು.

ಆಸ್ಪತ್ರೆ ಬಿಲ್ಡಿಂಗ್ ಕಟ್ಟಬೇಕಾದರೂ ಫಾರೆಸ್ಟ್ ಲ್ಯಾಂಡ್ ಬೇಕು. ನಮ್ಮಲ್ಲಿ ರೆವಿನ್ಯೂ ಲ್ಯಾಂಡ ಇಲ್ಲ. ಹೀಗಾಗಿ ಇವತ್ತು ಮಲೆನಾಡು ಜಿಲ್ಲೆಯ ಎಲ್ಲಾ ಅಭಿವೃದ್ಧಿ ಕಾರ್ಯಗಳು ಕುಂಠಿತ ಆಗಿದೆ. ಯಲ್ಲಾಪುರದಲ್ಲಿ ಕೆ.ಎಸ್.ಆರ್.ಟಿ.ಸಿ. ಡಿಪೋ ಬೇಕೆಂದು ಮಾನ್ಯ ಸಿಂಧ್ಯರವರು ಇದ್ದಾಗ ಕೇಳಿದ್ದೆವು, ಅವರು ಸ್ಯಾಂಕ್ಷನ್ ಕೂಡ ಮಾಡಿದ್ದರು. ಆದರೆ, ಅಲ್ಲಿ ಇನ್ನೂ ಕೆಲಸ ಆಗಿಲ್ಲ. ಅಲ್ಲಿ ಏನೇನೂ ಇಲ್ಲ,

ಗಿಡ ಇಲ್ಲ, ಮರ ಇಲ್ಲ. ರೆಕಾರ್ಡ್‌ನಲ್ಲಿ ಮಾತ್ರ ಫಾರೆಸ್ಟ್ ಲ್ಯಾಂಡ್ ಎಂದು ಇದೆ. ರಾಜ್ಯಸರ್ಕಾರ, ಕೇಂದ್ರಸರ್ಕಾರದ ಮೇಲೆ ಒತ್ತಾಯ ತಂದು, ಈ ಫಾರೆಸ್ಟ್ ಲ್ಯಾಂಡ್ ಪಾಲಿಸಿ ಏನಿದೆ, ಅದನ್ನು ಪುನರ್ ಪರಿಶೀಲನೆ ಮಾಡುವುದಕ್ಕೆ ಒತ್ತಾಯ ಮಾಡಬೇಕಾಗುತ್ತದೆ. ನಮ್ಮಂಥ ಜಿಲ್ಲೆ ಡೆವಲಪ್‌ಮೆಂಟ್ ಆಗಬೇಕಾದರೆ, ಕೆಲವು ಏರಿಯಾ ನೀವು ಎನ್‌ಮಾರ್ಕ್ ಮಾಡಬೇಕಾಗುತ್ತದೆ. ನೀವು ಎಲ್ಲಿಯವರೆಗೆ ಎನ್‌ಮಾರ್ಕ್ ಮಾಡುವುದಿಲ್ಲ, ಅಲ್ಲಿಯವರೆಗೆ ಆ ಜಿಲ್ಲೆಯ ಅಭಿವೃದ್ಧಿ ಸಾಧ್ಯವಾಗುವುದಿಲ್ಲ. ಇವತ್ತು ನಮ್ಮ ದೇಶದಲ್ಲಿ ೪೪ ಪರ್ಸೆಂಟ್ land under agriculture, 22% under forest. Thonsands of acres, lakhs of acres are lying barren. ನಮ್ಮ ಪಹಣಿಯಲ್ಲಿ ಫಾರೆಸ್ಟ್ ಲ್ಯಾಂಡ್ ಎಂದು ಇದ್ದರೂ ಆದರೆ ಅಲ್ಲಿ ಗಿಡ ಇಲ್ಲ, ಮರ ಇಲ್ಲ. ಹೀಗಾಗಿ ಕೇಂದ್ರ ಸರ್ಕಾರದಲ್ಲೂ ಹಣ ಇಲ್ಲ, ರಾಜ್ಯಸರ್ಕಾರದಲ್ಲೂ ಹಣ ಇಲ್ಲ, ಇಂಡಸ್ಟ್ರೀಸ್ ಮಾಡುವುದಕ್ಕೆ ಇಂಡಸ್ಟ್ರೀಸ್ ಕಟ್ಟುವುದಕ್ಕೆ ಅವಕಾಶ ಕೊಡುವುದಿಲ್ಲ. ಇದು ಬದಲಾವಣೆ ಆಗಬೇಕಾದರೆ ಫಾರೆಸ್ಟ್ ಪಾಲಿಸಿಯನ್ನು ರಿವ್ಯೂ ಮಾಡಬೇಕು. ಎಲ್ಲೆಲ್ಲಿ ಸಾಧ್ಯವಿದೆ, ಕೇಂದ್ರಸರ್ಕಾರ, ರಾಜ್ಯಸರ್ಕಾರ ತನ್ನದೇ ಹಣದಿಂದ ಫಾರೆಸ್ಟ್ ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಕು. ಇಲ್ಲದೇ ಹೋದರೆ ಸಾಧ್ಯವಿಲ್ಲ. ಕೇಂದ್ರಸರ್ಕಾರ, ರಾಜ್ಯಸರ್ಕಾರದ ಕಡೆ ಎಲ್ಲೆಲ್ಲಿ ಹಣ ಇಲ್ಲವೋ ಅಲ್ಲಲ್ಲಿ ನಾವು ಪ್ರೈವೇಟ್ ಸೆಕ್ಟಾರಿಗೆ ಹೆಚ್ಚಿನ ಮಹತ್ವ ಕೊಡಬೇಕಾಗುತ್ತದೆ. ಯಾವ ಪ್ರಕಾರ, captive generation power ಮಾಡಲಿಕ್ಕೆ ನಾವು ಅವಕಾಶ ಮಾಡಿಕೊಟ್ಟಿದ್ದೇವೆ, ಆ ಪ್ರಕಾರ, forest industries captive raw-material generate ಮಾಡುವುದಕ್ಕೆ ನಾವು ಆಕ್ಟ್ ಪಾಸ್ ಮಾಡಬೇಕಾಗುತ್ತದೆ. ಇದರಿಂದ ಎನ್‌ವೈರ್ನಮೆಂಟ್ ಹಾಳಾಗುವುದಿಲ್ಲ. ಇದರಿಂದ ಎಂಪ್ಲಾಯ್‌ಮೆಂಟ್ ಕೊಟೇಷನ್ ಬಿಲ್ಡಪ್ ಆಗುತ್ತದೆ. ಆದ್ದರಿಂದ ಈ ಬಗ್ಗೆ ರಾಜ್ಯಸರ್ಕಾರ, ಕೇಂದ್ರ ಸರ್ಕಾರವನ್ನು ಕೇಳಿಕೊಳ್ಳಬೇಕು ಈ ರೀತಿ ಮಾಡುವುದರಿಂದ ಟ್ರೀಗ್ರೋಸ್ ಹೆಚ್ಚಾಗಿ, ಎನ್‌ವೈರ್ನ್‌ಮೆಂಟ್ ಕ್ರಿಯೇಟ್ ಆಗುತ್ತದೆ. ಅದರ ಸಲುವಾಗಿ ರಾಜ್ಯಸರ್ಕಾರ, ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತಂದು ಈ ಫಾರೆಸ್ಟ್ ಪಾಲಿಸಿಯನ್ನು ರಿವ್ಯೂ ಮಾಡಬೇಕೆಂದು ಮತ್ತೊಮ್ಮೆ ಹೇಳಿ, ರಾಜ್ಯಪಾಲರ ಭಾಷಣಕ್ಕೆ ನನ್ನ ವಿರೋಧವನ್ನು ಸೂಚಿಸಿ, ನಾಲ್ಕು ಮಾತನಾಡಲು ಅವಕಾಶ ಕೊಟ್ಟ ತಮಗೆ ನನ್ನ ಧನ್ಯವಾದಗಳನ್ನು ಅರ್ಪಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು.—ಈಗ ಶಿವರಾಮೇಗೌಡರು ದಯಮಾಡಿ ತಮ್ಮ ಭಾಷಣವನ್ನು ೧೦ ನಿಮಿಷದಲ್ಲಿ ಮುಗಿಸಬೇಕು, ಇಲ್ಲದೆ ಹೋದರೆ ಎಲ್ಲರಿಗೂ ಅವಕಾಶ ಸಿಗುವುದಿಲ್ಲ.

† ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ).—ಸನ್ಮಾನ್ಯ ಸಭಾಧ್ಯಕ್ಷರೇ, ನಾವು ೫ ಜನರ ಪರವಾಗಿ ಬರೆದುಕೊಟ್ಟಿದ್ದೇವೆ ಆದ್ದರಿಂದ ೧೦ ನಿಮಿಷಕ್ಕೆ ಸೀಮಿತ ಮಾಡಿದರೆ ಆಗುವುದಿಲ್ಲ. ೫ ಜನಕ್ಕೆ ೫೦ ನಿಮಿಷ ಕೊಡಬೇಕು, ಯೋಚನೆ ಮಾಡಿ ತಾವು ಏನು ತೀರ್ಪು ಕೊಡುತ್ತೀರೋ ಅದಕ್ಕೆ ನಾವು ಬದ್ಧರಾಗುತ್ತೇವೆ.

ಉಪಾಧ್ಯಕ್ಷರು.—ಇವತ್ತು ಕೊನೆಯ ದಿವಸ, ಆದಷ್ಟು ಸಮಯದ ಮಿತಿಯನ್ನು ಗಮನಿಸಿ, ಆದಷ್ಟು ಬೇಗ ಮುಗಿಸಿ.

ಶ್ರೀ ಎಲ್. ಆರ್. ಶಿವರಾಮೇಗೌಡ — ಸಭಾಧ್ಯಕ್ಷರೇ. ೧೫-೩-೯೦ರಂದು ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾಡಿದಂಥ ರಾಜ್ಯಪಾಲರ ಭಾಷಣಕ್ಕೆ ನನ್ನ ವಂದನೆಗಳನ್ನರ್ಪಿಸುತ್ತೇವೆ. ಮಾನ್ಯ ರಾಜ್ಯಪಾಲರು ತಮ್ಮ ಭಾಷಣವನ್ನು ಓದುತ್ತಿರತಕ್ಕ ಸಂದರ್ಭದಲ್ಲಿ, ೧೪-೩-೯೦ರಂದು ಬೆಂಗಳೂರಿನಲ್ಲಿ ನಡೆದ ಏರ್ ಬಸ್ ದುರಂತದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಏರ್‌ಬಸ್ ದುರಂತ ನಡೆದ ಸಂದರ್ಭದಲ್ಲಿ ಈ ಬೆಂಗಳೂರು ನಗರದಲ್ಲಿದ್ದ ಆಸ್ಪತ್ರೆಗಳು, ಬೆಂಗಳೂರು ನಗರದಲ್ಲಿದ್ದಂಥ ಅಗ್ನಿಶಾಮಕ ದಳ, ಗೃಹರಕ್ಷಕ ದಳ ಪೋಲೀಸ್ ಇಲಾಖೆ, ಮತ್ತು ಬೆಂಗಳೂರು ನಗರ ಪಾಲಿಕೆ, ಈ ಎಲ್ಲಾ ಸಂಸ್ಥೆಗಳ ನೌಕರರಿಗೆ ನಾವು ನಮನಗಳನ್ನು ಹೇಳಬೇಕೆಂದು ಅವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಒಂದು ಮಾತನ್ನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ತಮ್ಮ ಮೂಲಕ ಹೇಳಬಯಸುತ್ತೇನೆ. ಆ ದಿನ ಏರ್‌ಬಸ್ ದುರಂತ ನಡೆದ ಸಂದರ್ಭದಲ್ಲಿ ಸರ್ಕಾರಿ ನೌಕರರ ಸಂಪು ನಡೆಯುತ್ತಿತ್ತು. ಆ ಸಂದರ್ಭದಲ್ಲಿ ಬಹುಶಃ ಈ ನೌಕರರ ಸಂಪು ನಡೆಯುತ್ತಿದ್ದು, ಏರ್ ಬಸ್ ದುರಂತದಲ್ಲಿ ಮಡಿದ ಮತ್ತು ಗಾಯಾಳುಗಳಾದ ದೇಹಗಳನ್ನು ನಗರದ ಸರ್ಕಾರಿ ಆಸ್ಪತ್ರೆ ವಿಕ್ಟೋರಿಯಾಕ್ಕೆ ತಂದು ಹಾಕಿದಾಗ, ಈ ಆಸ್ಪತ್ರೆಯಲ್ಲಿ ಯಾವುದೇ ನೌಕರರು ಬಂದು, ಹೆಣಗಳನ್ನಾಗಲೀ, ಅಥವಾ ಗಾಯಾಳುಗಳನ್ನಾಗಲೀ ಮುಟ್ಟತಕ್ಕ ಕೆಲಸಕ್ಕೆ ಕೈಹಾಕಲಿಲ್ಲ. ವಾಲಂಟರಿಯಾಗಿ, ಜನಗಳೇ ಬಂದು ಕಷ್ಟದಲ್ಲಿರತಕ್ಕ ಆ ಜನಗಳನ್ನು ಸುರಕ್ಷತೆ ಮಾಡಿದ್ದನ್ನು ನಾವೆಲ್ಲರೂ ಕಣ್ಣಿನಿಂದ ಕಂಡಿದ್ದೇವೆ. ಅದಕ್ಕಾಗಿ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ ಮತ್ತು ಪ್ರಾರ್ಥನೆ ಮಾಡುತ್ತೇನೆ. ಈ ಆರೋಗ್ಯ ಇಲಾಖೆಯಲ್ಲಿ ಡಾಕ್ಟರುಗಳ

ಏನಿದ್ದಾರೆ, ಆರೋಗ್ಯ ಸೇವಾ ಸಿಬ್ಬಂದಿ ಏನಿದ್ದಾರೆ, ಇವರನ್ನು ಅಗತ್ಯ ಸೇವಾ ನಿಯಮದೊಳಗೆ ಸೇರಿಸಿ, ಯಾವುದೇ ಸಂದರ್ಭದಲ್ಲಿ ಸಹಿತ ಇವರು ಮುಷ್ಕರದಲ್ಲಿ ಭಾಗವಹಿಸಕೂಡದು ಎಂಬುದನ್ನು ಅಗತ್ಯ ಸೇವಾ ನಿಯಮದಲ್ಲಿ ಈ ಆರೋಗ್ಯ ಇಲಾಖೆಯನ್ನು ಸೇರಿಸಬೇಕೆಂದು ಹೇಳುತ್ತೇನೆ, ಅವರ ಕಷ್ಟಸುಖ ಕೇಳಿಕೊಳ್ಳುವುದಕ್ಕೆ ಬೇರೆ ದಾರಿ ಇದೆ......

ಶ್ರೀ ಬಸವರಾಜ ರಾಯರೆಡ್ಡಿ.—ಮಾನ್ಯ ಉಪಾಧ್ಯಕ್ಷರೇ. ಆ ಕಡೆ ಯಾರೂ ನೋಟ್ ಮಾಡಿಕೊಳ್ಳುತ್ತಾ ಇಲ್ಲ. ಪ್ರತಿ ದಿವಸ ಇದೇ ರೀತಿಯಾದರೆ ಗತಿ ಏನು? ಇದರಿಂದ ಏನು ಪ್ರಯೋಜನ? ಮಾನ್ಯಸದಸ್ಯರು ಆರೋಗ್ಯ ಇಲಾಖೆ ಬಗ್ಗೆ ಹೇಳುತ್ತಿದ್ದಾರೆ. ಆ ಕಡೆ ಯಾರೂ ಸಚಿವರು ಇಲ್ಲ ಎಂದರೆ ಹೇಗೆ. ಇಲ್ಲದೇಹೋದರೆ ಇನ್ನೂ ಸ್ವಲ್ಪ ಮಂತ್ರಿಗಳನ್ನು ಮಾಡುವುದಕ್ಕೆ ಹೇಳಿ. ದಯಮಾಡಿ ಈಗ ಮಂತ್ರಿಗಳನ್ನು ದಯಮಾಡಿ ಕರೆಸಿ.

ಶ್ರೀ ಟಿ. ಎಂ. ಮಂಜುನಾಥ್.—ಅವರು ಹೇಳಿದ್ದೆಲ್ಲಾ ರೆಕಾರ್ಡ್ ಆಗುತ್ತಿದೆ. ಅವರು ಹೇಳಿದ್ದನ್ನೆಲ್ಲಾ ಸರ್ಕಾರದವರು ನೋಡುತ್ತಾರೆ ತಾವೇಕೆ ತಲೆಕೆಡಿಸಿಕೊಳ್ಳುತ್ತೀರಿ.

ಶ್ರೀ ಬಸವರಾಜ ರಾಯರೆಡ್ಡಿ.—ಅದು ನನಗೂ ಗೊತ್ತಿದೆ. ಮಾನ್ಯ ಮಂತ್ರಿಗಳನ್ನು ಸಭೆಗೆ ಕರೆಸಿ.

ಉಪಾಧ್ಯಕ್ಷರು.—ಬರುತ್ತಾರೆ, ಅವರನ್ನು ಕರೆಸುತ್ತೇನೆ, ತಾವು ಮಾತನಾಡಿ.

ಶ್ರೀ ಎಲ್. ಆರ್, ಶಿವರಾಮೇಗೌಡ.—ಇಲ್ಲಿ ಎಲ್ಲವೂ ರೆಕಾರ್ಡ್ ಆಗುತ್ತದೆ, ಅದನ್ನು ನೋಡಿ, ಆನಂತರ ಮಂತ್ರಿಗಳು ನಮಗೆ ಉತ್ತರ ಕೊಡುತ್ತಾರೆ. ಭಾರತ ಸರ್ಕಾರದ ಸಿಬ್ಬಂದಿ ಆಯ್ಕೆ ಆಯೋಗವು, ಬೆಂಗಳೂರಿನಲ್ಲಿ ಉಪ ಪ್ರಾದೇಶಿಕ ಕಛೇರಿಯನ್ನು ತೆರೆದಿವೆ ಎಂದು ಹೇಳಿ ಈ ರಾಜ್ಯದ ಗಮನವನ್ನು ಮಾನ್ಯ ರಾಜ್ಯಪಾಲರು ಸೆಳೆದಿದ್ದಾರೆ. ಕನ್ನಡ ನಾಡಿನಲ್ಲಿ ಹುಟ್ಟಿದ ಮಕ್ಕಳಿಗೆ, ಸಾರ್ವಜನಿಕ ಉದ್ದಿಮೆಗಳಲ್ಲಿ ಕೆಲಸ ಕೊಡಬೇಕೆಂಬುದು ನಿಜ. ಆದರೆ, ನಮ್ಮ ದುರಾದೃಷ್ಟವಶಾತ್ ಸಾರ್ವಜನಿಕ ಉದ್ದಿಮೆಗಳಲ್ಲಿ ಇರುವವರೆಲ್ಲರೂ, ಪಾಂಡೆಗಳು, ರಾವ್‌ಗಳು, ಮಿಶ್ರಾಗಳು, ಹಾಗೂ ನಾಥ್‌ಗಳು ಇವರು ಹೊರ ರಾಜ್ಯದವರನ್ನೇ ಈ ಉದ್ದಿಮೆಗಳಲ್ಲಿ ಬೇರೆ ಬೇರೆ ನೌಕರರುಗಳನ್ನು ಸೇರಿಸಿ ಕೊಂಡಿದ್ದಾರೆ. ಇದರಿಂದ ಕನ್ನಡದ ಮಣ್ಣಿನ ಮಕ್ಕಳು ಏನಿದ್ದಾರೆ, ಅವರು ಈ ಕೈಗಾರಿಕೆಗಳಿಗೆ ಅರ್ಜಿ ಹಾಕಿಕೊಂಡರೆ, ಅವರಿಗೆ ಕೆಲಸ ಸಿಕ್ಕದೇ ಇರತಕ್ಕ ಪ್ರಸಂಗವನ್ನು ನಾವು ನೋಡುತ್ತಿದ್ದೇವೆ. ಉದಾಹರಣೆಗೆ ತಮಗೆ ಒಂದು ಉದಾಹರಣೆಯನ್ನು ತಮ್ಮ ಗಮನಕ್ಕೆ ತರುತ್ತೇನೆ. ಮೈಸೂರಿನಲ್ಲಿ ವಿಕ್ರಾಂತ್ ಎಂದು ಒಂದು ಕಂಪನಿ ಇದೆ. ಮಾನ್ಯ ಸಿಂಧ್ಯರವರು ಈ ಬಗ್ಗೆ ಬಹಳ ಚೆನ್ನಾಗಿ ಹೇಳಿದರು. ಅವರು ಮಂತ್ರಿಗಳಾಗಿದ್ದ ಕಾಲದಲ್ಲಿ ಒಬ್ಬರು ಎಂ.ಡಿ. ಯವರು ಇದ್ದರು, ಅವರು ಇವರ ಕೈಕೆಳಗೆ ಕೆಲಸ ಮಾಡಿದಂತವರು. ವಿಕ್ರಾಂತ್ ಫ್ಯಾಕ್ಟರಿಯಲ್ಲಿ ನಾಲ್ಕಾರು ತಿಂಗಳಿಂದೀಚೆಗೆ ಕೆಲಸಕ್ಕೆ ತೆಗೆದು ಕೊಂಡಿರುವವರ ಪೈಕಿ, ೧೦೦ಕ್ಕೆ ೯೫ ಪರ್ಸೆಂಟ್ ತಮಿಳಿಯನ್ಸ್ ತುಂಬಿರುವುದನ್ನು ನಾವು ನಮ್ಮ ಕಣ್ಣಿನಿಂದ ನೋಡಿದ್ದೇವೆ. ನಾವು ಬರೀ ಭಾಷಣದಲ್ಲಿ ಹೇಳುವುದಲ್ಲ, ಈ ಬಗ್ಗೆ ಇದು ಒಂದು ತೀರ್ಮಾನ ಆಗಬೇಕು. ಈ ರಾಜ್ಯದಲ್ಲಿ ಕನ್ನಡದ ಮಣ್ಣಿನ ಮಕ್ಕಳಿಗೆ ಕೆಲಸ ಕೊಡುತ್ತೇವೆ ಬೇರೆಯವರಿಗೆ ಕೊಡುವುದಿಲ್ಲ ಎಂಬ ಮಾತನ್ನು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ. ಈ ರಾಜ್ಯದಲ್ಲಿ ಮೊನ್ನೆತಾನೆ ರಾಜ್ಯಸರ್ಕಾರಿ ನೌಕರರ ಮುಷ್ಕರ ನಡೆಯಿತು. ಈ ವಿಚಾರದಲ್ಲಿ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸಬೇಕು. ಬಹಳ ದಿಟ್ಟತನದಿಂದ, ಧೈರ್ಯದಿಂದ ಈ ಸರ್ಕಾರಿ ನೌಕರರ ಸಂಪನ್ನು ಸರ್ಕಾರ ಎದುರಿಸಿತು ಎಂದು ಹೇಳಿದರೆ ತಪ್ಪಾಗುವುದಿಲ್ಲ. ಏತಕ್ಕಾಗಿ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಅವರು ಇದುವರೆಗೂ ಈ ರೀತಿ ಸಂಪನ್ನು ಮಾಡಿಕೊಂಡು ಸರ್ಕಾರವನ್ನು ಹೆದರಿಸಿಕೊಂಡು ಬರುತ್ತಿದ್ದರು. ೧೯೮೩ನೇ ಇಸವಿಯಲ್ಲಿ ೪೭೩ ಕೋಟಿ ರೂಪಾಯಿಗಳ ಸಂಬಳ ಇತ್ತು. ಇವತ್ತು ೧೯೯೦ನೇ ಇಸವಿಯಲ್ಲಿ ೧೭೭೦ ಕೋಟಿ ರೂಪಾಯಿಗಳ ಸಂಬಳ ಕೊಡುತ್ತಿದ್ದೇವೆ, ೧೭೭೦ ಕೋಟಿ ಸಂಬಳ ಕೊಟ್ಟರೂ ಕೂಡ ಅಭಿವೃದ್ಧಿ ಕೆಲಸ ಕಾರ್ಯಗಳು ಮುಂದುವರಿಯುತ್ತಿವೆಯೇ ಎಂದರೆ ಅದೂ ಇಲ್ಲ. ಯಾವ ಕೆಲಸಗಳೂ ಸಹಿತ ಮುಂದಕ್ಕೆ ಹೋಗಿಲ್ಲ, ಅಭಿವೃದ್ಧಿ ಕೆಲಸಗಳು ಚೆನ್ನಾಗಿ ಆಗುತ್ತಾ ಇಲ್ಲ. ಇವತ್ತು ಸಂಬಳ ಮಾತ್ರ ಹೆಚ್ಚು ಕೊಡತಕ್ಕ ವ್ಯವಸ್ಥೆ ಮಾಡುತ್ತಿದ್ದೇವೆ. ಒಂದು ಮಾತನ್ನು ಹೇಳುತ್ತೇನೆ ೧೯೮೩ರಿಂದ ೧೯೯೦ರ ವರೆಗೆ ೧,೩೦೦ ಕೋಟಿ ರೂಪಾಯಿಗಳು ಜಾಸ್ತಿ ಆಗಬೇಕಾದರೆ, ಹಿಂದೆ ೭ ವರ್ಷಗಳಿಂದ ಆಳ್ವಿಕೆ ಮಾಡಿದವರು, ನೌಕರರ ಜೊತೆಯಲ್ಲಿ ಶಾಮೀಲಾಗಿ, ರಾಜ್ಯದ ಬೊಕ್ಕಸವನ್ನು ಖಾಲಿ ಮಾಡಿದರು ಎಂದು ಹೇಳಿದರೆ ತಪ್ಪಾಗುವುದಿಲ್ಲ. ಒಂದು ಮಾತನ್ನು ಈ ಸಂದರ್ಭದಲ್ಲಿ ಕಳಕಳಿಯಿಂದ ಹಾಗೂ ಬಹಳ ವಿನಯದಿಂದ ಹೇಳಬೇಕಾಗುತ್ತದೆ. ನಮಗೆ ಸ್ವಾತಂತ್ರ್ಯ ಬಂದ ಮೇಲೆ ೧೯೮೩ನೇ ಇಸವಿಯವರೆಗೆ ೪೭೩ ಕೋಟಿ ಇದ್ದಂಥ ಸಂಬಳ ಕೇವಲ ೭ ವರ್ಷದ ಅವಧಿಯಲ್ಲಿ ೧೩೦೦ ಕೋಟಿ ಸಂಬಳ ಜಾಸ್ತಿ ಮಾಡಿದಂಥ ಕೀರ್ತಿ ನಮ್ಮ ಹಿಂದಿನ ಸರ್ಕಾರಕ್ಕೆ ಬಂತು. ನಮ್ಮ ಸರ್ಕಾರದವರು

ಈ ಸಂಪನ್ನು ಬಹಳ ದಿಟ್ಟತನದಿಂದ ಎದುರಿಸಿ ನಿವಾರಣೆ ಮಾಡಿದ್ದಾರೆ ಎಂದು ಹೇಳಿದರೆ ಅದು ತಪ್ಪಾಗುವುದಿಲ್ಲ. ಆದ್ದರಿಂದ ರಾಜ್ಯದ ಜನರು ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಇನ್ನು ಸರ್ಕಾರಿ ನೌಕರರ ಬಗ್ಗೆ ನಾನು ಒಂದು ಮಾತನ್ನು ಹೇಳಬೇಕಾಗುತ್ತದೆ. ಈ ನೌಕರರು ಬೆಂಗಳೂರಿನ ಬಹುಅಂತಸ್ತಿನ ಕಟ್ಟಡದಲ್ಲಿ ಯಾವುದೇ ಆಫೀಸ್‌ಗಳಿಗೆ ಬೆಳಗ್ಗೆಯಿಂದ ಹಿಡಿದು ಸಾಯಂಕಾಲದವರೆವಿಗೂ ಯಾರೇ ಫೋನ್ ಮಾಡಿ ಕೇಳಿದರೂ ಸಿಗುವುದಿಲ್ಲ. ಎಲ್ಲಿ ಹೋಗಿದ್ದಾರೆ ಎಂದು ಕೇಳಿದರೆ ಕಡೆಗೆ ಹೋಗಿದ್ದಾರೆ, ಮೀಟಿಂಗ್‌ಗೆ ಹೋಗಿದ್ದಾರೆ ಎಂದು ಹೇಳುತ್ತಾರೆ. ಅಧಿಕಾರಿಗಳನ್ನು ಯಾವುದೇ ಸಂದರ್ಭಗಳಲ್ಲಿ ಚುನಾಯಿತ ಪ್ರತಿನಿಧಿಗಳು ಫೋನ್‌ನಲ್ಲಿ ಮಾತನಾಡಿಸುವುದಕ್ಕೆ ಸೀಟ್‌ಗಳಲ್ಲಿ ಕುಳಿತುಕೊಂಡಿರುವುದಿಲ್ಲ ಆದಕ್ಕೆ ನಾನು ಒಂದು ಸಲಹೆಯನ್ನು ಕೊಡುತ್ತೇನೆ. ಅದೇನೆಂದರೆ ಬಹು ಅಂತಸ್ತಿನ ಕಟ್ಟಡದಲ್ಲಿರುವ ಕ್ಯಾಂಟೀನ್ ಅನ್ನು ಮುಚ್ಚಬೇಕು. ಬೆಳಿಗ್ಗೆ ಕ್ಯಾಂಟೀನ್ ತೆಗೆಯತಕ್ಕಂಥ ಪದ್ಧತಿಯನ್ನು ತಪ್ಪಿಸಿ ಮಧ್ಯಾಹ್ನ ಒಂದು ಗಂಟೆಯಿಂದ ೩ ಗಂಟೆಯವರೆಗೂ ತೆರೆದು ಅಧಿಕಾರಿಗಳು ಕುಳಿತುಕೊಂಡಿರುವ ಸ್ಥಾನಗಳಿಗೆ ಕಾಫಿ ಮತ್ತು ಟೀಯನ್ನು ಟ್ರಾಲಿಗಳಲ್ಲಿ ಕೊಡತಕ್ಕಂಥ ವ್ಯವಸ್ಥೆ ಮಾಡಬೇಕು. ಈ ಕ್ಯಾಂಟೀನ್‌ನ್ನು ಮೊದಲು ಮುಚ್ಚಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಏನೇ ತಪ್ಪು ಮಾಡಿದರೂ ಈ ಅಧಿಕಾರಿಗಳಿಗೆ ಯಾವುದೇ ಲಂಗು ಲಗಾಮು ಇಲ್ಲ. ಇವರು ತಪ್ಪು ಮಾಡಿದರೆ ನಿಯಮ ೨೦ಜಿ ಅನ್ನು ಅಳವಡಿಸಿ ಮನೆಗೆ ಕಳುಹಿಸಬೇಕು. ಆಗ ಆಡಳಿತದಲ್ಲಿ ಬಿಗಿ ಬರುತ್ತದೆ. ಒಳ್ಳೆಯ ಆಡಳಿತವನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಸರ್ಕಾರ ಒಳ್ಳೆಯ ಆಡಳಿತವನ್ನು ಬಿಗಿ ಆಡಳಿತವನ್ನು ಕೊಡಬೇಕಾದರೆ ನಿಯಮ ೨೦ಜಿನ್ನು ಅಳವಡಿಸಿ ತನಿಖೆ ಮಾಡಿ ಯಾರು ತಪ್ಪು ಮಾಡುತ್ತಾರೋ ಅಂತಹ ಅಧಿಕಾರಿಗಳನ್ನು ಒಂದು ದಿನಕ್ಕೆ ೧೦–೨೦ ಜನರನ್ನು ಮನೆಗೆ ಕಳುಹಿಸಿಕೊಡುವ ದಿಟ್ಟ ಹೆಜ್ಜೆಯನ್ನು ಸರ್ಕಾರ ತೆಗೆದುಕೊಂಡರೆ ಆಗ ಬಿಗಿ ಆಡಳಿತವನ್ನು ರಾಜ್ಯದ ಜನತೆಗೆ ಕೊಡಬಹುದು ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ರಾಜ್ಯದಲ್ಲಿ ಪೋಲೀಸ್ ವ್ಯವಸ್ಥೆ ಬಹಳ ಚೆನ್ನಾಗಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಪೋಲೀಸ್ ವ್ಯವಸ್ಥೆ ನಮ್ಮ ಮಾನ್ಯ ಸದಸ್ಯರಾದ ಚಂದ್ರೇಗೌಡರು ಮತ್ತು ಮಾನ್ಯ ಸಿಂಧ್ಯಾರವರು ಹಾಗೂ ಮಾನ್ಯ ಬೈರೇಗೌಡರ ಕಾಲದಲ್ಲಿ ಯಾವ ಪರಿಸ್ಥಿತಿ ಇತ್ತೋ ಅದೇ ಪರಿಸ್ಥಿತಿ ಇವತ್ತೂ ಇದೆ. ಏನೂ ಬದಲಾವಣೆ ಆಗಿಲ್ಲ ಎಂದು ಹೇಳುತ್ತೇನೆ. ತಾವೂ ಅಧಿಕಾರದಲ್ಲಿ ಇದ್ದವರು. ತಮಗೆ ಗೊತ್ತಿದೆ, ಪೋಲೀಸ್‌ನವರು ಲಂಚ ತೆಗೆದುಕೊಳ್ಳುತ್ತಾರೆಂದು ಕೇಳಿದ್ದೆವು. ಪೋಲೀಸ್ ಇನ್‌ಸ್ಪೆಕ್ಟರ್‌ಸ್ ಲಂಚ ತೆಗೆದುಕೊಳ್ಳುತ್ತಾರೆಂದು ಕೇಳಿದ್ದೆವು ಸರ್ಕಲ್ ಇನ್‌ಸ್ಪೆಕ್ಟರ್‌ಸ್ ಲಂಚ ತೆಗೆದುಕೊಳ್ಳುತ್ತಾರೆಂದು ಕೇಳಿದ್ದೆವು ಆದರೆ ಒಬ್ಬ ಪೋಲೀಸ್ ಮಹಾ ನಿರ್ದೇಶಕರು ಲಂಚ ತೆಗೆದುಕೊಳ್ಳುತ್ತಾರೆನ್ನುವುದನ್ನು

* * *

ನಾನು ಕೇಳಿರಲಿಲ್ಲ. ಇದು ಒಂದು ರೀತಿಯಲ್ಲಿ ಹಗಲು ದರೋಡೆಯಂತೆ ನಡೆದಿದೆ. ಈ ಬಗ್ಗೆ ದೊಡ್ಡ ಗಲಾಟೆ ನಡೆದಿದೆ. ಸಾರ್ವಜನಿಕ ಹಿತಾಸಕ್ತಿಯುಳ್ಳ ಒಬ್ಬ ವ್ಯಕ್ತಿ ಇವರ ವಿರುದ್ಧ ಕೋರ್ಟ್‌ನಲ್ಲಿ ಲಿಟಿಗೇಶನ್ ಫೈಲ್ ಮಾಡಿದ್ದಾರೆ. ನಾನು ಸರ್ಕಾರವನ್ನು ಕೇಳುತ್ತೇನೆ, ಇದರ ಬಗ್ಗೆ ತಾವು ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಎಂದು ? ಇವರೇ ಈ ರೀತಿ ಮಾಡಿದರೆ ಇನ್ನು ಸಬ್ ಇನ್‌ಸ್ಪೆಕ್ಟರ್ ಲಂಚ ತೆಗೆದುಕೊಂಡರೆ ಸರ್ಕಲ್ ಇನ್‌ಸ್ಪೆಕ್ಟರ್ ಲಂಚ ತೆಗೆದುಕೊಂಡರೆ ಪೋಲೀಸಿನವರು ಲಂಚ ತೆಗೆದುಕೊಂಡರೆ ಕೇಳುವುದಕ್ಕೆ ಆಗುತ್ತದೆ ಏನು ? ಇದರ ಬಗ್ಗೆ ಸಮಗ್ರವಾದ ತನಿಖೆ ಆಗಬೇಕು. ತಪ್ಪಿತಸ್ಥರ ಮೇಲೆ ಉಗ್ರವಾದ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ. ಭ್ರಷ್ಟಾಚಾರ ಇರಬೇಕು. ಆದರೆ ಅದು ಒಂದು ಸೀಮಿತವಾಗಿ ಇರಬೇಕು, ರಾಜಕಾರಣಿಗಳಿಗಾಗಲೀ, ಅಧಿಕಾರಿಗಳಿಗಾಗಲಿ, ಭ್ರಷ್ಟಾಚಾರಕ್ಕೆ ಒಂದು ಮಿತಿ ಇರಬೇಕು, ಭ್ರಷ್ಟಾಚಾರ ಎಂದರೆ......

ಶ್ರೀ ವಿನಯಕುಮಾರ್ ಸೊರಕೆ.—ತಾವು ಭ್ರಷ್ಟಾಚಾರ ಇರಬೇಕೆಂದು ಹೇಳುತ್ತೀರೇನು ?

(ಗೊಂದಲ)

ಉಪಾಧ್ಯಕ್ಷರು.—ಅದು ಅವರ ಅಭಿಪ್ರಾಯ ಬಿಡಿ.

ಶ್ರೀ ಎಸ್. ಆರ್. ಶಿವರಾಮೇಗೌಡ.—ನಾನು ನನ್ನ ಅಭಿಪ್ರಾಯವನ್ನು ಹೇಳಿದ್ದೇನೆ. ನಿಮ್ಮ ಅಭಿಪ್ರಾಯ ನೀವು ಹೇಳಿ. ರಾಜಕಾರಣ ಮಾಡುವಂತಹ ರಾಜಕಾರಣಿಗಳು ಭ್ರಷ್ಟಾಚಾರ ಮಾಡಬೇಕೆಂದು ಅಲ್ಲ. ಯಾವುದೇ ರಾಜಕಾರಣಿ ಆಗಲಿ ತಮ್ಮ ಅಪ್ಪ ಹಣ ಮಾಡಿದ್ದರಲ್ಲಿ ಅಥವಾ ತಾನು ಸ್ವಂತ ಸಂಪಾದನೆ ಮಾಡಿದ ಹಣದಲ್ಲಿ ರಾಜಕೀಯ ಮಾಡತಕ್ಕಂಥಾದ್ದಕ್ಕೆ ಆಗುವುದಿಲ್ಲ. ಭ್ರಷ್ಟಾಚಾರ ಎಲ್ಲಿಯವರೆಗೆ ಇರಬೇಕೆಂದರೆ ಅದಕ್ಕೆ ಒಂದು ಇತಿಮಿತಿ ಇರಬೇಕಾಗುತ್ತದೆ.***

---

* Expunged as ordered by the chair.

ಶ್ರೀ ಆರ್. ವಿ. ದೇಶಪಾಂಡೆ.—ಏನು ಮಾತನಾಡುತ್ತಿದ್ದೀರಿ ನೀವು......

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ.—ಏನು ಮಾತನಾಡುತ್ತಿದ್ದೀರಾ ? ....

(ಗೊಂದಲ)

ಉಪಾಧ್ಯಕ್ಷರು.—ರೆಕಾರ್ಡ್ ಮಾಡಿಕೊಳ್ಳಬೇಡಿ.

(ಗೊಂದಲ)

x x x

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ಏನು ಮಾತನಾಡಿದ್ದಾರೆ ಆ ಪದವನ್ನು ನಾನು ಕಡತದಿಂದ ತೆಗೆಯುವಂತೆ ಹೇಳಿದ್ದೇನೆ. ಉಳಿದ ವಿಷಯ ಅವರು ಏನೇ ಮಾತನಾಡಿದರೂ ರೆಕಾರ್ಡ್ ಮಾಡಬೇಡಿ.

x x x

(ಮಾನ್ಯ ಅಧ್ಯಕ್ಷರಾದ ಶ್ರೀ ಎಸ್.ಎಂ. ಕೃಷ್ಣರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರು.—ಮಾನ್ಯ ಸದನದ ಇನ್ನೊಬ್ಬ ಸದಸ್ಯರ ಮೇಲೆ ಯಾವುದಾದರು ಆಪಾದನೆಯನ್ನು ಮಾಡತಕ್ಕಂಥ ಕಾಲದಲ್ಲಿ ಅದಕ್ಕೆ ನಮ್ಮ ರೂಲ್ಸ್‌ನಲ್ಲಿ ಒಂದು ವಿಧಾನ ಇದೆ. ಆ ವಿಧಾನದ ಪ್ರಕಾರ ಅಧ್ಯಕ್ಷರಿಗೆ ಮೊದಲೇ ಬರೆದುಕೊಟ್ಟು ಅವರ ಪರವಾನಿಗೆ ಪಡೆದು ಅನಂತರ ಇನ್ನೊಬ್ಬ ಸದಸ್ಯರ ಮೇಲೆ ನೀವು ದೋಷಾರೋಪಣೆ ಮಾಡಬಹುದು. ಏಕಾ ಏಕಿ ಯಾರೋ ಒಬ್ಬರು ಮಾನ್ಯ ಸದಸ್ಯರು ವಿದೇಶದಲ್ಲಿ ಹಣ ಇಟ್ಟಿದ್ದಾರೆ, ಮುಂತಾದ ಆರೋಪಗಳು ಏನಿವೆ ಅವು ತೀವ್ರ ಸ್ವರೂಪದಂಥ ಆರೋಪಗಳು. ಮಾನ್ಯ ಸದಸ್ಯರು ಅಂಥಾದ್ದಕ್ಕೆ ಕೈಹಾಕಬಾರದು. ಅಂಥಾದ್ದು ಏನಾದರೂ ನಿಮ್ಮ ಹತ್ತಿರ ರುಜುವಾತು ಮಾಡತಕ್ಕಂಥ ಸಾಕ್ಷ್ಯ, ಪುರಾವೆಗಳು ಇದ್ದರೆ ಅವಕ್ಕೆ ವಿಧಿ ಇದೆ, ವಿಧಾನ ಇದೆ. ಅದರ ಪ್ರಕಾರ ಮಾಡಬಹುದು. ಆದ್ದರಿಂದ ಅದನ್ನು ನಾನು ಕಡತದಿಂದ ತೆಗೆದುಹಾಕಿದ್ದೇನೆ. *

ಶ್ರೀ ಎಲ್.ಆರ್. ಶಿವರಾಮೇಗೌಡ.—ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇಲ್ಲವೆಂದು ಹೇಳುವುದಿಲ್ಲ. ನಾನು ಒಬ್ಬರ ಮೇಲೆ ನೇರವಾಗಿ ಹೇಳಿದ್ದಲ್ಲ. ಹೆಗಡೆಯವರ ಸರ್ಕಾರದಲ್ಲಿ ಈ ತರಹ ನಡೆಯಿತೆಂದು ಹೇಳಿದ್ದೇನೆ. ನಾನು ಯಾರಿಗೂ ಸಹಿತ ಹೇಳಲಿಲ್ಲ. ಹೆಗಡೆಯವರ ಸರ್ಕಾರದಲ್ಲಿ ಈ ತರಹ ವಿದೇಶಕ್ಕೆ ಹೋಗಿ ಹಣ ಇಡತಕ್ಕಂಥ ಮಟ್ಟಕ್ಕೆ ಹೋದರು ಅನ್ನತಕ್ಕಂಥ ಮಾತನ್ನು ಹೇಳಿದ್ದೇನೆ. ಅದನ್ನು ಡಿಪೆಂಡ್ ಮಾಡಿಕೊಳ್ಳುತ್ತೇನೆ. ಅವರ ಮೇಲೆ ನಾನು ಹೇಳಲಿಲ್ಲ. ಅವರಿಗೂ ಮಾತನಾಡುವುದಕ್ಕೆ ಅವಕಾಶ ಇದೆ. ನನಗಿರತಕ್ಕಂಥ ಹಕ್ಕನ್ನು ನೀವು ಕಸಿದುಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಸಿ. ಬೈರೇಗೌಡ.—ಆ ಹಣ ಬೋಫೋರ್ಸ್‌ನಿಂದ ಬಂದಿದ್ದಾ ? ಅಥವಾ ಎಲ್ಲಿಂದ ಬಂದಿದ್ದು ಅದು ? ಅದನ್ನು ನೀವು ಹೇಳಿ.

(ಗೊಂದಲ)

Mr. SPEAKER.—I have ruled that it will not form part of the proceedings. I have expunged it...... ಈಗ ತಾವು ಮುಂದಿನ ವಿಷಯಕ್ಕೆ ಹೋಗಿ.

ಶ್ರೀ ಎಲ್.ಆರ್. ಶಿವರಾಮೇಗೌಡ.—ಮಾನ್ಯ ಅಧ್ಯಕ್ಷರೆ, ಈಗ......

ಅಧ್ಯಕ್ಷರು.—ಈಗ ಮಾನ್ಯ ಪಾಟೀಲರು ಏನೋ ಹೇಳುತ್ತಾರೆ.

ಶ್ರೀ ಕೆ.ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ತಾವು ನಿಯಮದ ಪ್ರಕಾರ ರೂಲಿಂಗ್ ಕೊಟ್ಟಿದ್ದೀರಿ. ಯಾವುದೇ ಒಬ್ಬ ಮಾನ್ಯ ಸದಸ್ಯರ ಮೇಲೆ ಬೇರೆ ಒಬ್ಬರು ಸದಸ್ಯರು ಆರೋಪ ಮಾಡುವಂಥ ಸಂದರ್ಭದಲ್ಲಿ ಈ ಸದನದ ಡೆಕೋರಮ್ ಬಿಟ್ಟು ಹೋಗುವುದು ಸೂಕ್ತವಲ್ಲ. ಆದ್ದರಿಂದ, ಈಗ ಮಾತನಾಡುತ್ತಿರುವಂಥ ಸದಸ್ಯರಿಗೆ ಪ್ರಾರ್ಥನೆ ಮಾಡುತ್ತೇನೆ. ಯಾರ ಮನಸ್ಸಿಗೂ ನೋವು ಆಗದ ಹಾಗೆ ಯಾವುದೂ ಕೆಟ್ಟ ಶಬ್ದಗಳನ್ನು ಆಡದ ಹಾಗೆ ಮಾತನಾಡಬೇಕು. ಬರೀ ಭ್ರಷ್ಟಾಚಾರ ಆಗಿದೆ ಎಂದರೆ

---

x Matter is expunged as ordered by the Chair

ಅದು ದೊಡ್ಡ ತಪ್ಪಲ್ಲ. ಅಷ್ಟು ಹೇಳಬೇಕೆ ವಿನಹ ಯಾವುದಾದರೂ ಒಬ್ಬ ವ್ಯಕ್ತಿಗೆ ಚುಚ್ಚಿ ಮಾತನಾಡಿದರೆ ಅದು ಗಾಜಿನ ಮನೆಯೊಳಗೆ ಇದ್ದವರಿಗೆ ಕಲ್ಲು ಹೊಡೆದಂತೆ ಆಗುತ್ತದೆ. ಆದ್ದರಿಂದ ಆ ರೀತಿ ಮಾತನಾಡಬಾರದೆಂದು ಹೇಳುತ್ತೇನೆ.

ಡಾ. ಎನ್.ಬಿ. ಸಂಜಪ್ಪ.—ಈ ಸರ್ಕಾರದಲ್ಲಿ ೩ ಕೋಟಿ ರೂಪಾಯಿಗಳ ವ್ಯವಹಾರವನ್ನು ಗುಸು ಗುಸು ರೂಪದಲ್ಲಿ ಮಾಡಿದೆ ಎಂದು ಹೇಳುವ ರೀತಿಯಲ್ಲೇ ಅವರು ಇದನ್ನು ಮಾತನಾಡಿದ್ದಾರೆ. ಅದರಲ್ಲಿ ಅಬ್ಜಕ್ಷನ್ ಏನೂ ಇಲ್ಲ.

ಅಧ್ಯಕ್ಷರು.—ಅದೆಲ್ಲಾ ಹಳೆಯ ಕಥೆ. ಅದೆಲ್ಲವನ್ನು ಕಡತದಿಂದ ತೆಗೆದು ಹಾಕಲಾಯಿತು.

ಶ್ರೀ ಡಿ.ಬಿ. ಚಂದ್ರೇಗೌಡ.—ಅವರು ಸ್ಪೀಕರ್‌ಗೇ ಏನು ಮಾಡಬೇಕೆಂದು ಗೈಡ್ ಮಾಡುತ್ತಿದ್ದಾರೆ ಅದನ್ನು ತಾವು ಸ್ವೀಕರಿಸಿ.

ಶ್ರೀ ಎಲ್.ಆರ್. ಶಿವರಾಮೇಗೌಡ.—ನಾನು ಸಂಪೂರ್ಣವಾಗಿ ವಾಪಸ್ ತೆಗೆದುಕೊಳ್ಳುತ್ತೇನೆ. ಇಲ್ಲ ಅಂತ ಅಲ್ಲ. ಭ್ರಷ್ಟಾಚಾರ ಇವತ್ತು ಪೋಲೀಸ್ ಮಹಾ ನಿರ್ದೇಶಕರ ಮನೆಯಲ್ಲಿ ನಡೆಯುತ್ತಿದೆ ಯೆಂಬ ಮಾತನ್ನು......

ಅಧ್ಯಕ್ಷರು.—ಭ್ರಷ್ಟಾಚಾರದ ಬಗ್ಗೆ ಸಾಕಷ್ಟು ಹೇಳಿದ್ದೀರಿ. ಆದ್ದರಿಂದ ಮುಂದಿನ ವಿಷಯಕ್ಕೆ ಹೋಗಿ, ಯಾವಾಗಲೂ ಫಾರ್ವರ್ಡ್ ಲುಕಿಂಗ್ ಆಗಿರಬೇಕು.

ಶ್ರೀ ಎಲ್.ಆರ್. ಶಿವರಾಮೇಗೌಡ.—ಇವತ್ತು ಇವರು ಮಾಡಿರತಕ್ಕಂತಾದ್ದನ್ನು ನೆನಸಿಕೊಂಡರೆ ಎಲ್ಲವೂ ಅರ್ಥವಾಗುತ್ತದೆ. ಆಮೇಲೆ ಮಾನ್ಯ ಅಧ್ಯಕ್ಷರೇ, ಪೋಲೀಸ್ ಇಲಾಖೆಗೆ ಬಹಳ ಕಾಯಕಲ್ಪ ಕೊಡುತ್ತೇವೆ ಎನ್ನುವ ಮಾತನ್ನು ರಾಜ್ಯಪಾಲರು ಅವರ ಭಾಷಣದಲ್ಲಿ ಹೇಳಿದ್ದಾರೆ. ಇವತ್ತಿನ ದಿವಸಗಳಲ್ಲಿ ಪೋಲೀಸ್ ಇಲಾಖೆಯಲ್ಲಿ ಹಳೇ ಕಾಲದ ವೈರ್‌ಲೆಸ್, ಹಳೇ ಕಾಲದ ವಾಹನಗಳು, ಹಳೇ ಕಾಲದ ಗನ್‌ಗಳು ಇವೆ. ಅದೇ ಡಕಾಯಿತರುಗಳಲ್ಲಿ, ಬೆಳಿಗ್ಗೆಯಿಂದ ಚರ್ಚೆ ಮಾಡಿದ ವೀರಪ್ಪನ್ ತಂಡದವರಲ್ಲಿ ಇವರುಗಳಿಂದ ಉನ್ನತವಾದಂಥ ವೈರ್‌ಲೈಸ್ ಸೆಟ್, ಉನ್ನತವಾದಂಥ ವಾಹನ, ಉನ್ನತವಾದಂಥ ಮೆಷಿನ್ ಗನ್‌ಗಳು ಅವರಲ್ಲಿವೆ ಎಂಬುದನ್ನು ನಾವು ಮನಗಾಣುತ್ತಿದ್ದೇವೆ. ಆದ್ದರಿಂದ ರಾಜ್ಯ ಮಟ್ಟದಲ್ಲಿ ಐ.ಜಿ.ಪಿ., ಡಿ.ಐ.ಜಿ., ಗಳ ಸಂಖ್ಯೆಯನ್ನು ಹೆಚ್ಚು ಮಾಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಸರ್ಕಾರ ಇನ್ನು ಮುಂದೆ ಹೆಚ್ಚು ಪೋಲೀಸ್ ಸ್ಟೇಷನ್‌ಗಳನ್ನು ಮಾಡುತ್ತೇವೆಂದು ಹೇಳಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಅದರಲ್ಲೂ ಕೈಗಾರಿಕೆಗಳು ಎಲ್ಲಿ ಜಾಸ್ತಿ ಬೆಳೆಯುತ್ತಿವೆಯೋ ಅಂಥಾ ಪ್ರದೇಶಗಳಲ್ಲಿ ಹೆಚ್ಚಿನ ಸಂಖ್ಯೆಗಳಲ್ಲಿ ಪೋಲೀಸ್ ಸ್ಟೇಷನ್‌ಗಳನ್ನು ಪ್ರಾರಂಭ ಮಾಡಬೇಕೆಂದು ಮತ್ತು ಅದಕ್ಕೆ ಹೆಚ್ಚಿನ ಶಕ್ತಿಯನ್ನು ಕೊಡತಕ್ಕಂಥ ಕೆಲಸ ಆಗಬೇಕು ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

೩.೦೦ ಪಿ. ಎಂ.

ದಿನಬೆಳಗಾದರೆ ಪತ್ರಿಕೆಯನ್ನು ನೋಡಿದಾಗ ನಮಗೆ ಎದ್ದು ಕಾಣಿಸುವುದು, ರಾಜ್ಯದಲ್ಲಿ ಅಲ್ಲಲ್ಲಿ ನಡೆಯುತ್ತಿರುವ ಡಕಾಯಿತಿ ಕೊಲೆ, ಸುಲಿಗೆ ಮುಂತಾದ ಪ್ರಕರಣಗಳು, ಹಾಗೂ ಲಕ್ಷಾಂತರ ರೂಪಾಯಿಗಳ ಲೂಟಿ, ವಂಚನೆ, ಮುಂತಾದ ದುಷ್ಕೃತ್ಯಗಳ ಸುದ್ದಿಯನ್ನು ನಾವು ತಪ್ಪದೆ ನೋಡುತ್ತೇವೆ.

ಅಧ್ಯಕ್ಷರು.—ನಾವು ನಿಗದಿತ ವೇಳೆಯಲ್ಲಿ ಚರ್ಚೆಯನ್ನು ಮುಗಿಸಬೇಕಾಗಿದೆ. ಸಮಯದ ಕೊರತೆ ಇದೆ. ಬಹಳ ಜನ ಮಾನ್ಯ ಸದಸ್ಯರು ಮಾತನಾಡುವ ಕಾತುರತೆಯನ್ನು ತೋರಿಸಿದ್ದಾರೆ. ಈಗಾಗಲೇ ತಾವು ೧೫ ನಿಮಿಷಗಳ ಕಾಲ ಮಾತನಾಡಿದ್ದೀರಿ. ಆದುದರಿಂದ ದಯವಿಟ್ಟು ಕ್ಲುಪ್ತ ಕಾಲದಲ್ಲಿ ಮುಗಿಸಿ.........

ಶ್ರೀ ಎಲ್.ಆರ್. ಶಿವರಾಮೇಗೌಡ.—ಸಮಯದ ಕುರಿತು ನಮಗೆ ಸ್ವಲ್ಪ ಕರುಣೆ ತೋರಿಸಬೇಕು. ಸರಕಾರಿ ನೌಕರರ ನಿವೃತ್ತಿ ವಯಸ್ಸನ್ನು ೫೫ ಕ್ಕೆ ಇಳಿಸುವ ಪ್ರಸ್ತಾಪವಿದೆ ಎಂದು ಹೇಳಿದ್ದಾರೆ. ಇದು ಬಹಳ ಒಳ್ಳೆಯ ಕೆಲಸವಾಗುತ್ತದೆ. ಆದುದರಿಂದ ಮೊದಲು ಆ ಕೆಲಸವನ್ನು ಸರಕಾರದವರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಪ್ರಪಂಚದ ಬಹುತೇಕ ಕಡೆಗಳಲ್ಲಿ ೫–೧೦ ವರ್ಷಗಳ ಅವಧಿಗೆ ಕಾಂಟ್ರಾಕ್ಟ್ ಆಧಾರದಮೇಲೆ ಕೆಲಸಕ್ಕೆ ನೇಮಿಸಿಕೊಳ್ಳುತ್ತಾರೆ. ಆದರೆ ನಮ್ಮಲ್ಲಿ ಈ ಪದ್ಧತಿಯು ೬೦–೫೦ ವರ್ಷಗಳ ತನಕ ಕೆಲಸ ಮಾಡುವಂಥಾದ್ದು ಇದೆ. ಇದನ್ನು ತಪ್ಪಿಸಬೇಕು. ನಿವೃತ್ತಿ ವಯಸ್ಸನ್ನು ೫೫ ಕ್ಕೆ ಇಳಿಸಿದರೆ ಲಕ್ಷಾಂತರ ಜನ ನಿರುದ್ಯೋಗಿಗಳು ಏನು ಬೀದಿಯಲ್ಲಿ ಇದ್ದಾರೆ ಅವರಿಗೆ ಉದ್ಯೋಗವನ್ನು ಒದಗಿಸಿಕೊಟ್ಟ ಹಾಗೆ ಆಗುತ್ತದೆ. ಆದ್ದರಿಂದ ದಯವಿಟ್ಟು ಈ ಬಗ್ಗೆ ಸರಕಾರ ಪರಿಶೀಲಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ತುಂಡು ಭೂಮಿ ಕಾಯಿದೆಯನ್ನು ರದ್ದು ಪಡಿಸ ಬೇಕೆಂದು ಕೇಳಿಕೊಳ್ಳುತ್ತೇನೆ.

ಇದರಿಂದ ಸಂಬಂಧಪಟ್ಟವರಿಗೆ ಬಹಳಷ್ಟು ತೊಂದರೆಯಾಗಿದ್ದು ಸರಕಾರದವರು ಅಂಥವರಿಗೆ ಅನುಕೂಲ ಮಾಡಿ ಕೊಡುವ ದೃಷ್ಟಿಯಿಂದ ಆ ಕಾಯಿದೆಯನ್ನು ರದ್ದುಪಡಿಸುವ ಬಗ್ಗೆ ಸೂಕ್ತ ಕ್ರಮವನ್ನು ತೆಗೆದು ಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೆಯೇ ಲ್ಯಾಂಡ್ ಟ್ರಿಬ್ಯುನಲ್ ಕಮಿಟಿಗಳಿಗೆ ಜಾಗ್ರತೆ ನಾಮಕರಣಗಳನ್ನು ಮಾಡಿ. ಜಮೀನುಗಳ ಬಗ್ಗೆ ಏನು ಕೋಲಾಹಲ ನಡೆಯುತ್ತಿದೆ, ಅದನ್ನು ತಪ್ಪಿಸಲು ಸೂಕ್ತ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ರಾಜ್ಯದಲ್ಲಿ ಸರಕಾರಿ ಸ್ವಾಮ್ಯದ ಉದ್ದಿಮೆಗಳಲ್ಲಿ ೨೨ ಉದ್ದಿಮೆಗಳು ಸುಮಾರು ೯೦೦ಕೋಟಿ ರೂಪಾಯಿಗಳಷ್ಟು ನಷ್ಟವನ್ನು ಉಂಟುಮಾಡಿವೆ ಎಂಬುದು ನಮಗೆ ತಿಳಿದು ಬರುತ್ತದೆ. ಕೆ.ಎಸ್.ಡಿ.ಸಿ. ಮತ್ತು ಮೈಸೂರ್ ಪೇಪರ್ ಮಿಲ್ಸ್ ಮುಂತಾದವುಗಳಿಗೆ ನಾವು ಎಷ್ಟು ಹಣ ಖರ್ಚು ಮಾಡಿದರೂ ಕೂಡ ಅವುಗಳನ್ನು ನಷ್ಟದ ಅವಸ್ಥೆಯಿಂದ ಮೇಲೆತ್ತುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಇದರ ಬಗ್ಗೆ ತೀವ್ರವಾದ ಕ್ರಮ ತೆಗೆದುಕೊಂಡು ಅದನ್ನು ನವೀಕರಣ ಮಾಡಿ ಅದರಲ್ಲಿ ಉಂಟಾಗುತ್ತಿರುವ ೯೦೦ ಕೋಟಿ ರೂಪಾಯಿಗಳ ನಷ್ಟವನ್ನು ತಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ. ಅಂತೆಯೇ ಅಲ್ಲಿಗೆ ಐ.ಎ.ಎಸ್, ಐ.ಪಿ.ಎಸ್, ಅಧಿಕಾರಿಗಳನ್ನು ವ್ಯವಸ್ಥಾಪಕರನ್ನಾಗಿ ಮಾಡುವ ಕ್ರಮವನ್ನು ನಿಲ್ಲಿಸಿ ಆ ಸ್ಥಳಗಳಿಗೆ ಸಮಾಜದಲ್ಲಿ ಅರಿತು ನುರಿತಂಥ ಜನರೇನಿದ್ದಾರೆ ಅವರನ್ನು ನೇಮಿಸ ಬೇಕು. ಆಗ ಅಂತಹ ಜನರು ಭ್ರಷ್ಟಾಚಾರ ಮಾಡಲು ಮುಂದಾಗುವುದಿಲ್ಲ ಮತ್ತು ಅವರಿಗೆ ಸಮಾಜದ ಭಯ ಇರುತ್ತದೆ. ಅದಕ್ಕಾಗಿ ಇಂಥ ಖಾಸಗಿ ವ್ಯಕ್ತಿಗಳನ್ನು, ಕೆ.ಇ.ಬಿ. ಗೆ ಕೆ.ಎಸ್.ಆರ್.ಟಿ.ಸಿ.ಗೆ ನೇಮಿಸುವ ಬಗ್ಗೆ ಸರಕಾರದವರು ಪರ್ಯಾಲೋಚಿಸಬೇಕೆಂದು ಕೇಳಿಕೊಳ್ಳುತ್ತೇನೆ ಪ್ರಜಾಪ್ರಭುತ್ವದಲ್ಲಿ ಅಧಿಕಾರವನ್ನು ಹಂಚಿಕೊಳ್ಳಬೇಕು. ಆಗ ಮಾತ್ರ ಪ್ರಜಾಪ್ರಭುತ್ವಕ್ಕೆ ನಿಜವಾದ ಮಹತ್ವ ಬರುತ್ತದೆ. ಜವಾಹರ್ ರೋಜ್‌ಗಾರ್ ಯೋಜನೆಗೆ ಬಹಳ ಉತ್ತೇಜನ ಕೊಡುತ್ತೇವೆ ಎಂದು ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಇದಕ್ಕಾಗಿ ೩೦೦ ಕೋಟಿ ರೂಪಾಯಿಗಳನ್ನು ಆಯವ್ಯಯದಲ್ಲಿ ಇಟ್ಟುಕೊಂಡಿದ್ದಾರೆ. ಈ ಕುರಿತಾಗಿ ಒಂದು ಮಾತನ್ನು ಹೇಳಬೇಕಾಗುತ್ತದೆ, ** ಇದರಿಂದಾಗಿ ಗ್ರಾಮಾಂತರಗಳಲ್ಲಿ ಯಾವುದೇ ಅಭಿವೃದ್ಧಿ ಕೆಲಸಕಾರ್ಯಗಳು ಆಗುತ್ತಾ ಇಲ್ಲ. ಅದಕ್ಕಾಗಿ ಜಿಲ್ಲಾ ಪರಿಷತ್‌ನ ಆಡಿಟ್‌ನ್ನು ಮತ್ತು ಮಂಡಲ ಪಂಚಾಯತ್‌ಗಳ ಆಡಿಟ್‌ನ್ನು ಸರಕಾರದವರೇ ನಡೆಸುವ ವ್ಯವಸ್ಥೆ ಆಗಬೇಕು. ಹಾಗೆ ಮಾಡಿದರೆ ಈ ಜನರು ಕಳೆದ ಮೂರು ವರ್ಷಗಳಲ್ಲಿ ಮಾಡಿದ ಸುಲಿಗೆಯೆಲ್ಲಾ ಹೊರಗೆ ಬರುವ ಸಾಧ್ಯತೆ ಇದೆಯೆಂಬ ಮಾತನ್ನು ನಾನು ಹೇಳುತ್ತಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ.—ಚುನಾಯಿತ ಸಂಸ್ಥೆಗಳ ಬಗ್ಗೆ ಚುನಾಯಿತ ಅಧ್ಯಕ್ಷರ ಬಗ್ಗೆ ಹೀಗೆ ಬಾಲಾಸಗಟು ಆಪಾದನೆ ವಿಧಾನ ಸಭೆಯಲ್ಲಿ ನಡೆದರೆ ತಾವಾದರೂ ಇದನ್ನು ಸರಿಪಡಿಸದಿದ್ದರೆ it goes on record. It speaks of elected representatives. I will only appeal to you to restrict the Member not make such a blanket allegatiors.

MR. SPEAKER.—Generalised comments, condemning............ನೀವು ಆಗಲೇ ಈ ಬಗ್ಗೆ ಯಾವುದೋ ಕೇಸ್ ನಡೆಯುತ್ತಿದೆ ಎಂದು ಹೇಳಿದಿರಿ. ಆದ್ದರಿಂದ ಆ ಬಗ್ಗೆ ಇಲ್ಲಿ ಹೇಳಿದರೆ ಅದು ಸಬ್-ಜ್ಯುಡೀಸ್ ಆಗುತ್ತದೆ ಎಂಬುದು ಸಹ ತಮಗೆ ಗೊತ್ತು. ಆದ್ದರಿಂದ ನೀವೇ ಈ ಬಗ್ಗೆ ಒಂದು ತೀರ್ಮಾನಕ್ಕೆ ಬರುವುದು ಒಳ್ಳೆಯದು. ಪೋಲೀಸ್ ಮಹಾನಿರ್ದೇಶಕರ ಮನೆಯೊಳಗೆ ೫೦-೬೦ ಲಕ್ಷ ರೂಪಾಯಿಗಳ ಭ್ರಷ್ಟಾಚಾರ ನಡೆದಿದೆ ಎಂದು ನೀವೇ ಹೇಳುತ್ತೀರಿ. ಈ ಬಗ್ಗೆ ಒಂದು ಕೇಸ್ ಸಹ ನಡೆಯುತ್ತಿದೆ ಎಂದೂ ಸಹ ನೀವೇ ಹೇಳುತ್ತಿದ್ದೀರಿ. ಇದು ಒಂದಕ್ಕೊಂದು ತದ್ವಿರುದ್ಧ ಆಗುತ್ತದೆ. ಆದ್ದರಿಂದ ಅದನ್ನು ಸಹ ಕಡತದಿಂದ ತೆಗೆದು ಹಾಕುತ್ತೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಅಂತಹ ಗಹನವಾದ ವಿಚಾರವನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ ಎಂದರೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ. ಕೇಸ್ ಹಾಕಿದ್ದಾರೆ ಎಂದು ಹೇಳಿದೆ. ಈ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂದು ನಾನು ಕೇಳಿದೆ.

ಅಧ್ಯಕ್ಷರು.—ಕೇಸ್ ಇದೆ ಎಂದರೆ ಅದು ಸಬ್ ಜ್ಯುಡೀಸ್ ಆಗುತ್ತದೆ. ಆದ್ದರಿಂದ ಆ ಬಗ್ಗೆ ಮಾತನಾಡಬಾರದು.

SRI D.B. CHANDRE GOWDA.—Hon'ble Member made allegations against the DGP of the State. He cannot defend himself.........

MR. SPEAKER,—You must specifically point out.........ಇಂಥಿಂಥ ಕಡೆ ನಡೆದಿದೆ ಎಂದು ನೇಮ್ ಮಾಡಿ ಹೇಳಿ. ಎಲ್ಲಾ ಮಂಡಲ ಪಂಚಾಯತ್‌ಗಳಲ್ಲಿ ಮತ್ತು ಎಲ್ಲಾ ಜಿಲ್ಲಾ ಪರಿಷತ್‌ಗಳಲ್ಲಿ ಅವ್ಯವಹಾರ ನಡೆದಿದೆ ಎಂದು ಜನರಲ್ ಆಗಿ ಹೇಳುವುದಕ್ಕೆ ಬದಲು ಇಂತಹ ಕಡೆ ನಡೆದಿದೆ

ಎಂದು ಹೇಳಿ. ಹೆಸರುಗಳನ್ನು ಹೇಳಿ ಅಂತಹ ಕಡೆ ಆಡಿಟ್ ಮಾಡಿಸಿ ಎಂದು ಹೇಳಿ. Even with reference to that I was listening to your speech.........

ಶ್ರೀ ಎಲ್.ಆರ್. ಶಿವರಾಮೇಗೌಡ.—ರೋಜ್‌ಗಾರ್ ಯೋಜನೆಯಲ್ಲಿ ನೂರಕ್ಕೆ ೬೦ ಭಾಗ ಹಣ ಪೋಲಾಗಿದೆ. ನಾನು ಜಿಲ್ಲಾ ಪರಿಷತ್ ಸದಸ್ಯನಾಗಿ ನನ್ನ ಕಣ್ಣಿಂದ ನೋಡಿದ್ದೇನೆ. ಅವರು ಹಣ ಹಂಚಿಕೊಳ್ಳಲಿ ಎಂದು ಹಿಂದಿನವರು ಬಿಟ್ಟುಬಿಟ್ಟಿದ್ದಾರೆ. ಹಾಗಿದ್ದರೆ ಕೊನೆಗೆ ೧೯೯೦ನೇ ಏಪ್ರಿಲ್ ಮಧ್ಯಭಾಗದ ಹೊತ್ತಿಗೆ ರಾಜ್ಯದ ಮೂರನೇ ಹಿಂದುಳಿದ ವರ್ಗಗಳ ಆಯೋಗ ವರದಿ ಸಲ್ಲಿಸುತ್ತದೆ ಯೆಂದು ರಾಜ್ಯಪಾಲರು ಹೇಳಿದ್ದಾರೆ. ಈ ಆಯೋಗದ ನೇಮಕವೇ ಪೂರ್ವಗ್ರಹ ಪೀಡಿತವಾದದೆಂದು ನನಗನ್ನಿಸುತ್ತದೆ. ಏಕೆಂದರೆ ಇದೇ ಚಿನ್ನಪ್ಪರೆಡ್ಡಿಯವರು ಸುಪ್ರೀಂಕೋರ್ಟ್‌ನಲ್ಲಿ ಜಡ್ಜ್ ಆಗಿದ್ದವರು. ಅವರ ಬಗ್ಗೆ ನನಗೆ ಅಪಾರವಾದ ಗೌರವವಿದೆ. ಆದರೆ, ಅವರೇ ಹೇಳಿದ್ದಾರೆ.........

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು).—ಅಧ್ಯಕ್ಷರೇ, ಇನ್ನು ಮೂರ್ನಾಲ್ಕು ದಿವಸದಲ್ಲಿ ಅವರ ರಿಪೋರ್ಟ್ ಬರುತ್ತಿದೆ. ಆದ್ದರಿಂದ ಚಿನ್ನಪ್ಪ ರೆಡ್ಡಿ ಅವರ ಬಗ್ಗೆ ಅಡ್ವರ್ಸ್ ಕಾಮೆಂಟ್ಸ್ ಮಾಡ ಬಾರದೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಅಡ್ವರ್ಸ್ ಕಾಮೆಂಟ್ಸ್ ಮಾಡಬೇಡಿ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಅವರ ಬಗ್ಗೆ ನಾನು ಮಾತನಾಡುತ್ತಿಲ್ಲ. ಅವರ ಆಯೋಗದ ನೇಮಕದ ಬಗ್ಗೆ ಮಾತನಾಡುತ್ತಿದ್ದೇನೆ. ವೆಂಕಟಸ್ವಾಮಿ ಆಯೋಗದವರು ತಮ್ಮ ವರದಿ ಕೊಟ್ಟ ಮೇಲೆ ಸರ್ಕಾರ ಆ ವರದಿಯ ಬಗ್ಗೆ ಇಡೀ ರಾಜ್ಯದಲ್ಲಿ ಬಂದಂಥ ವಿರೋಧವನ್ನು ನೋಡಿ ಚಿನ್ನಪ್ಪರೆಡ್ಡಿಯವರ ಆಯೋಗವನ್ನು ನೇಮಕ ಮಾಡಿದರು. ಒಂದು ಮಾತು ಹೇಳುತ್ತೇನೆ. ಏನು ಚಿನ್ನಪ್ಪರೆಡ್ಡಿಯವರು ಸುಪ್ರೀಂ ಕೋರ್ಟ್‌ನಲ್ಲಿ ನ್ಯಾಯಾಧೀಶರ ಪೀಠದಲ್ಲಿ ಕೂತಿದ್ದಾಗ ಕರ್ನಾಟಕ ರಾಜ್ಯ ದಲ್ಲಿ ಆಯೋಗ ನೇಮಕ ಮಾಡಿದ್ದಾರಲ್ಲ, ಅದನ್ನು ಮಲ್ಟಿಮೆಂಬರ್ ಆಯೋಗ ಮಾಡಬೇಕು, ಬಹು ಸಂಖ್ಯಾತರು ಇರುವಂತಹ ಆಯೋಗವನ್ನು ಮಾಡಬೇಕೆಂದು ಅವರೇ ತೀರ್ಪು ಕೊಟ್ಟಿದ್ದರು. ಇದಕ್ಕೆ ಒಂದು ಹಿನ್ನೆಲೆ ಇದೆ ಸ್ವಾಮಿ ಇದನ್ನು ನಾನು ಹೇಳಲೇಬೇಕಾಗಿದೆ. ಯಾರು ಬೇಕಾದರೂ ವಿರೋಧ ಮಾಡಲಿ, ನಾನು ಇದರ ಹಿನ್ನೆಲೆ ಹೇಳಲೇಬೇಕಾಗಿದೆ. ಈ ಪೂರ್ವಗ್ರಹ ಪೀಡಿತವಾದ ಆಯೋಗ ಏನಿದೆಯೋ, ಈ ಆಯೋಗದ ಹಿನ್ನೆಲೆಯಲ್ಲಿ ಒಂದು ದೊಡ್ಡ ಶಕ್ತಿ ಇದೆ. ಈ ಶಕ್ತಿಯ ಬಗ್ಗೆ ಹೇಳಲು ತಾವು ನನಗೆ ಅಪ್ಪಣೆ ಕೊಡಬೇಕು. ಏನೆಂದರೆ ನಮಗೆಲ್ಲರಿಗೂ ತಿಳಿದಿರುವಂತೆ * * * *

(ಗೊಂದಲ)

SRI BASAVARAJ RAYA REDDY.—Sir, on a Point of order.

MR. SPEAKER.—I uphold your point of order. I am upholding it even before you make the point of order. I am upholding your point of order.

(ಗೊಂದಲ)

ಶ್ರೀ ಬಸವರಾಜ್ ರಾಯುರೆಡ್ಡಿ.—ಬಾಟ್ಲಿಂಗ್ ಪ್ರಕರಣದ್ದೆಲ್ಲಾ ಕಡತದಿಂದ ತೆಗೆಸಿಹಾಕಿ. ಏಕೆಂದರೆ ಅದು ಒಳ್ಳೆಯ.........

MR. SPEAKER.—Any comments to say that Mr. Justice ಚಿನ್ನಪ್ಪ ರೆಡ್ಡಿಯವರು ಸುಪ್ರೀಂ ಕೋರ್ಟ್ ನ್ಯಾಯಾಧೀಶರಾಗಿದ್ದರು, ಅವರಿಗೆ ಕೆಲಸವನ್ನು ಕೊಡಿಸಿದ್ದಾರೆ, ಅವರ ಒಂದು ಡಿಸಿಷನನ್ನು ಹಿಂದೆ ಕೊಟ್ಟರು. ಇವೆಲ್ಲಾ attributing motives of a very grave nature ಆದ್ದರಿಂದ It cannot become part of the Proceedings and then Mr Justice Chinnappa Reddy is also not here to defend himself. Therefore, we should exercise atmost restraint.

ಶ್ರೀ ಎಲ್.ಆರ್. ಶಿವರಾಮೇಗೌಡ.—ಚಿನ್ನಪ್ಪರೆಡ್ಡಿಯವರದ್ದು ತಪ್ಪು ಇದೆ ಎಂದು ನಾನು ಹೇಳುತ್ತಿಲ್ಲ. ತಪ್ಪು ಇದೆ ಎಂದು ಕೂಡಾ ನಾನು ವಾದವನ್ನು ಮಾಡುತ್ತಿಲ್ಲ. ಚಿನ್ನಪ್ಪ ರೆಡ್ಡಿ ಯವರನ್ನು ಯಾರು ನೇಮಕ ಮಾಡಿದರು, ಅವರ ಕೈವಾಡ ಇದೆ ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದೇನೆ.

* Matter is expunged as ordered by the Chair.

ಅಧ್ಯಕ್ಷರು.—ಕೈವಾಡ, undue interference, using such words............

(INTERRUPTION)

ಶ್ರೀ ಎಲ್.ಆರ್. ಶಿವರಾಮೇಗೌಡ.—ರಾಮಕೃಷ್ಣ ಹೆಗಡೆಯವರ ಕೈವಾಡ ಇದರೊಳಗೆ ಇದೆ ಎಂದು ಹೇಳುತ್ತೇನೆ. ಬೇಕಾದರೆ ಅವರು ಬಂದು ಯಾವಾಗ ಬೇಕಾದರೂ ಡಿಫೆಂಡ್ ಮಾಡಿಕೊಳ್ಳಲಿ. ಅವರು ಈ ಮನೆಯ ಸದಸ್ಯರೂ ಕೂಡಾ ಆಗಿದ್ದಾರೆ.

ಅಧ್ಯಕ್ಷರು.—ಇವತ್ತು ಶಿವರಾಮೇಗೌಡರು ಸರಿಯಾಗಿ ಬಲಗಡೆ ಎದ್ದರೋ ಎಡಗಡೆ ಎದ್ದರೋ ಗೊತ್ತಾಗುತ್ತಿಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ.—ನಾನು ಯಾವ ಕಡೆ ಎದ್ದರೂ ಚಿಂತೆ ಇಲ್ಲ. ನಮ್ಮನ್ನು ಉಳಿಸುವುದಕ್ಕೆ ನೀವು ಇದ್ದೀರಿ. ಆದರ ಬಗ್ಗೆ ಏನೂ ತೊಂದರೆ ಇಲ್ಲ.

MR. SPEAKER.—I would appeal to your good sense to pender. ಸ್ವಲ್ಪ ನೀವೇ ಯೋಚನೆ ಮಾಡಿ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಇವರು ಮಾಡಿರುವ ತಪ್ಪನ್ನು ಹೀಗೆ ನೀವು ಮುಚ್ಚಿಕೊಂಡು ಹೋದರೆ ಹೇಗೆ ?

ಅಧ್ಯಕ್ಷರು.—ಮುಚ್ಚಿಕೊಂಡು ಹೋಗತಕ್ಕಂಥ ಪ್ರಶ್ನೆ ಅಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಇದರ ಹಿಂದೆ ಅವರ ಕೈವಾಡ ಇಲ್ಲ ಎಂದು ಅವರು ಡಿಫೆಂಡ್ ಮಾಡಿಕೊಳ್ಳಲಿ.

ಅಧ್ಯಕ್ಷರು.—ಇದು ಪ್ರೊಪ್ರೈಟರಿ ಪ್ರಶ್ನೆ. ಸದನದ ಪ್ರಶ್ನೆ, ರೂಲ್ಸ್ ಪ್ರಶ್ನೆ. ನಾವು ಸದನದ ಚೌಕಟ್ಟಿನಲ್ಲಿ ಹೋಗಬೇಕಾಗುತ್ತದೆ. ಬೇಕಾದರೆ ಶ್ರೀಮತಿ ನಾಗರತ್ನಮ್ಮನವರನ್ನು ಕೇಳೋಣ ಅವರು ಈ ಬಗ್ಗೆ ಏನು ಹೇಳುತ್ತಾರೆಂದು.

ಅಧ್ಯಕ್ಷರು.—ಆಯಿತು ತಾವು ಜಾಗ್ರತೆ ಮುಗಿಸಿ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಆದುದರಿಂದ ನಾನು ಈ ಹಿನ್ನೆಲೆಯಲ್ಲಿ ಹೇಳಿದರೆ ಬಹುಶಃ ನಮ್ಮ ಸ್ನೇಹಿತರುಗಳಿಗೆ ಮನ ನೋಯುತ್ತದೆ. ತಪ್ಪಾಗಿದೆ, ತಪ್ಪಾಗಿಲ್ಲ ಎಂದು ಹೇಳುವ ಹಾಗೆ ಇಲ್ಲ. ಅವರಿಗೆ ಈ ಸಂದರ್ಭದಲ್ಲಿ ಇದನ್ನು ಜ್ಞಾಪಕ ಮಾಡಿ ಏನು ಅನ್ಯಾಯ ನಡೆಯಿತಲ್ಲಾ ಎಂದು ಹೇಳದೇ ಹೋದರೆ, ಅದು ಹೇಗೆ ಆಗುತ್ತದೆ ಎಂಬ ದೃಷ್ಟಿಯಿಂದ ಹೇಳುತ್ತಿದ್ದೇನೆ.

ಅಧ್ಯಕ್ಷರು.—ಈಗ ಸಮಯ ಮೂರುಕಾಲು ಗಂಟೆ ಆಯಿತು ತಾವು ಚರ್ಚೆ ಪ್ರಾರಂಭ ಮಾಡಿ ಅರ್ಧ ಗಂಟೆ ಆಯಿತು, ತಾವು ಜಾಗ್ರತೆ ಮುಗಿಸಿ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಇವತ್ತು ನೇರವಾಗಿ ಚಿನ್ನಪ್ಪರೆಡ್ಡಿಯವರ ಆಯೋಗ ಪೂರ್ವಾಗ್ರಹ ಪೀಡಿತವಾಗಿದೆ, ದಯಮಾಡಿ ಇದನ್ನು.. ...

ಅಧ್ಯಕ್ಷರು.—ಅವರು ಇನ್ನೂ ರಿಪೋರ್ಟನ್ನೇ ಕೊಟ್ಟಿಲ್ಲವಲ್ಲಾ ? ಮತ್ತೆ ಏತಕ್ಕೆ ಹೇಳುತ್ತಿದ್ದೀರಿ?

ಶ್ರೀ ಎಲ್. ಆರ್. ಶಿವರಾಮೇಗೌಡ.—ನಾನು ವರದಿಯ ಮೇಲೆ ಚರ್ಚೆ ಮಾಡುತ್ತಿಲ್ಲ. ದಯಮಾಡಿ ತಾವು ಅರ್ಥಮಾಡಿಕೊಳ್ಳಿ.

ಅಧ್ಯಕ್ಷರು.—ಮತ್ತೆ ಪೂರ್ವಾಗ್ರಹ ಪೀಡಿತವಾಗಿದೆ ಎಂದು ಹೇಳುತ್ತಿದ್ದೀರಿ.

ಶ್ರೀ ಎಲ್, ಆರ್. ಶಿವರಾಮೇಗೌಡ.—ನಾನು ವರದಿಯ ಮೇಲೆ ಚರ್ಚೆಯನ್ನು ಮಾಡುತ್ತಿಲ್ಲ. ಅವರ ವರದಿಯನ್ನು ನಾನು ಕೇಳುತ್ತಿಲ್ಲ. ಚಿನ್ನಪ್ಪರೆಡ್ಡಿಯವರ ಆಯೋಗ ಪೂರ್ವಾಗ್ರಹಪೀಡಿತವಾಗಿದೆ ಎನ್ನತಕ್ಕಂತಹ ವಾದವನ್ನು ನಾನು ಮಾಡುತ್ತಿದ್ದೇನೆ.

ಅಧ್ಯಕ್ಷರು.—ಅಷ್ಟನ್ನು ಮಾತ್ರ ಹೇಳಿ ಸಾಕು.

ಶ್ರೀ ಎಲ್. ಆರ್. ಶಿವರಾಮೇಗೌಡ.—ಆದ್ದರಿಂದ ಇದು ವೀರೇಂದ್ರಪಾಟೀಲರ ಸರ್ಕಾರದ ಕೂಸಲ್ಲ. ಈ ಕೂಸು ಅವರದು., ಇವರು ಆ ಕೂಸನ್ನು ಎತ್ತಿಕೊಳ್ಳುವುದು ಬೇಡ ಆದುದರಿಂದ ದಯಮಾಡಿ ಸರ್ಕಾರವು ಇದನ್ನು ಒಪ್ಪದೇ ಈ ಒಂದು ವರದಿಯನ್ನು ನಿಲ್ಲಿಸಬೇಕು ಎಂದು ತಮ್ಮ ಮೂಲಕ ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದಾದ ಮೇಲೆ ಕೊನೆಯದಾಗಿ ಲೋಕಾಯುಕ್ತದ ಬಗ್ಗೆ ಒಂದು ಮಾತನ್ನು ಹೇಳಬೇಕಾಗುತ್ತದೆ.

ಅಧ್ಯಕ್ಷರು.—ಪುನಃ......

ಶ್ರೀ ಎಲ್. ಆರ್. ಶಿವರಾಮೇಗೌಡ.—ನಾನು ಹೇಳಿದ್ದಕ್ಕೆಲ್ಲಾ ಈ ರೀತಿ ಮಾಡಿದರೆ ಏನು ಮಾಡುವುದು ಹೇಳಿ ? ಗ್ರಾಮೀಣ ಪ್ರದೇಶದಲ್ಲಿರತಕ್ಕಂಥ ರೈತರಿಗೆ ಒಂದು ಐ.ಪಿ. ಸೆಟ್‌ಗೆ ಕರೆಂಟನ್ನು ಕೊಡಿ ಎಂದು ಹೇಳಿದರೆ ಬಜೆಟ್‌ನಲ್ಲಿ ದುಡ್ಡನ್ನು ಕೊಡುವುದಕ್ಕೆ ಹಿಂದುಮುಂದು ನೋಡುತ್ತಿದ್ದೀರಿ. *** ಯಾರಾದರೂ ತಪ್ಪು ಮಾಡುವಂಥ ಅಧಿಕಾರಿಗಳನ್ನು ಹಿಡಿದು ಸದೆಬಡಿದಿದ್ದಾರೆಯೇ ? ಇಂಥವುಗಳನ್ನು ನಾನು ನೋಡಲೇ ಇಲ್ಲ. ಲೋಕಾಯುಕ್ತದವರು ಅಧಿಕಾರಿಗಳನ್ನು ಹಿಡಿದ ಬಗ್ಗೆ ದಿನ ಪತ್ರಿಕೆಯಲ್ಲಿ ದಿನಾಲು ನೋಡುತ್ತೇವೆ. ಲೋಕಾಯುಕ್ತದವರು ಸಬ್ ಇನ್ಸ್‌ಪೆಕ್ಟರ್ ಒಬ್ಬರನ್ನು ಹಿಡಿದರೆಂದು ಪತ್ರಿಕೆಯಲ್ಲಿ ಬರುತ್ತದೆ ಇವೊತ್ತು ಯಾವ ಮಟ್ಟಕ್ಕೆ ಲೋಕಾಯುಕ್ತ ಹೋಗಿದೆ ***

ಅಧ್ಯಕ್ಷರು.—ನೀವು ಹೊಸ ಸದಸ್ಯರು.

ಶ್ರೀ ಎಲ್. ಆರ್. ಶಿವರಾಮೇಗೌಡ.—ಇದ್ದ ವಿಚಾರ ಹೇಳಲು ಹೊಸ ಸದಸ್ಯರಾದರೆ ಏನು ಹಳೆಯ ಸದಸ್ಯರಾದರೆ ಏನು ? ನಾವು ಸತ್ಯಾಂಶ ಹೇಳುವುದು ಬೇಡವೇ ? ಇಷ್ಟೊಂದು ಹುಳುಕನ್ನು ಹೇಳಬೇಡಿ ಅಂದರೆ ಹೇಳುವುದಿಲ್ಲ. ನಾನು ಸುಮ್ಮನೆ ಕುಳಿತುಕೊಳ್ಳುತ್ತೇನೆ. ಈ ಲೋಕಾಯುಕ್ತ ಎಂಬುದು ಈ ರಾಜ್ಯದ *** ತಾವು ಅಧ್ಯಕ್ಷರು, ನುರಿತವರು, ವಿಚಾರ ಶೀಲರು ಆಗಿದ್ದೀರಿ. ತಾವೇ ಹೇಳಿ ಸನ್ಮಾನ್ಯ ಚಂದ್ರೇಗೌಡರು ಈ ವಿಷಯದಲ್ಲಿ ಮಾತನಾಡಲಿ, ನಾನು ಒಪ್ಪಿಕೊಳ್ಳುತ್ತೇನೆ.

MR. SPEAKER.—I am expunging the comments which you have ** made against Lokayuktha.

ಶ್ರೀ ಎಲ್. ಆರ್. ಶಿವರಾಮೇಗೌಡ.—ತಾವು ಈ ತರಹದ ನಿಲುವು ತೆಗೆದುಕೊಳ್ಳುತ್ತಾ ಇರುವುದು. ಏಕೆಂದು ನನಗೆ ಅರ್ಥವಾಗುತ್ತಿಲ್ಲ. ಈ ರಾಜ್ಯದಲ್ಲಿ ಲೋಕಾಯುಕ್ತ ಬಿಳಿ ಆನೆ ಅಲ್ಲವಾ ಅಥವಾ ಉಂಟಾ ಎಂಬುದು ನನ್ನ ಪ್ರಶ್ನೆ.

ಅಧ್ಯಕ್ಷರು.—ಬಿಳಿ ಆನೆಯೋ ಅಥವಾ ಕರಿ ಆನೆಯೋ, ಅದು ಬೇರೆ ವಿಚಾರ. ನೀವು ಲೋಕಾಯುಕ್ತದ ಬಗ್ಗೆ......

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರಾದ ಶಿವರಾಮೇಗೌಡರು ಹೊಸ ಸದಸ್ಯರು, ಹೊಸದಾಗಿ ಚುನಾವಣೆಯಲ್ಲಿ ಗೆದ್ದು ಬಂದಿದ್ದಾರೆ. ಕಡತದಲ್ಲಿ ಯಾವ ವಿಷಯಗಳು ಉಳಿಯುತ್ತದೆ, ಯಾವುದು ಉಳಿಯುವುದಿಲ್ಲ ಎಂದು ಅವರಿಗೆ ಗೊತ್ತಿಲ್ಲದೆ ಅವರು ಒಂದೇ ಸಮನೆ ಮಾತನಾಡುತ್ತಿದ್ದಾರೆ. ನಾವು ತಮ್ಮ ಮೂಲಕ ಅವರಲ್ಲಿ ಪ್ರಾರ್ಥನೆ ಮಾಡುತ್ತೇನೆ ಏನೆಂದರೆ ಕಡತದಲ್ಲಿ ಉಳಿಯುವಂತಹ ವಿಷಯಗಳ ಬಗ್ಗೆ ಒಂದು ಐದು ನಿಮಿಷ ಮಾತನಾಡಲಿ ಎಂದು.

(ಗೊಂದಲ)

ಶ್ರೀ ಎಲ್. ಆರ್. ಶಿವರಾಮೇಗೌಡ.—ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲೆ ಭಾಷಣ ಮಾಡುವುದನ್ನು ನಾನು ನಿನ್ನೆಯಿಂದ ನೋಡಿದೆ. ನಾವು ಏನಾದರೂ ಹೇಳಬೇಕು. ಇವರ್‍ಯಾರೂ ಸಹಿತ ಟೀಕೆ ಮಾಡುವುದಿಲ್ಲ. ಈ ಕಡೆಯುವರು ಏನೇ ಹೇಳಿದರೂ ರಿವರ್ಸ್ ಆಗಿ ಆ ಕಡೆಯಿಂದ ನುಗ್ಗಿ ಬಿಡುತ್ತಾರೆ. ಸರ್ಕಾರದ ಪರವಾಗಿರುವ ಅವರೂ ಸಹ ಏನೂ ಹೇಳುವುದಿಲ್ಲ. ಆದ್ದರಿಂದ ನಾನು ಹೇಳದಿದ್ದರೆ ಹೇಗೆ ಎಂದು ನಾನು ಇಂತಹ ವಿಷಯಗಳನ್ನೇ ಮಾತನಾಡಬೇಕೆಂದು ನಾನು ಆಯ್ಕೆ ಮಾಡಿಕೊಂಡು ಬಂದಿದ್ದೇನೆ. ಕಡತದಲ್ಲಿ ಏನು ಉಳಿಯದಿದ್ದರೂ ಬೇಡ, ಸರ್ಕಾರದ ಬಿಳಿ ಆನೆ ಹೇಗೆ ಇದೆ ಎಂದು ಸಮಾಜಕ್ಕೆ ಅರ್ಥ ಆಗಲಿ. ಇದನ್ನೂ ಕಡತದಿಂದ ತೆಗೆಯುವುದಾದರೆ ನಾನು ಬೇರೆ ಏನೂ ಹೇಳುವುದಕ್ಕಾಗುವುದಿಲ್ಲ.

ಶ್ರೀ ಬಸವರಾಜರಾಯರೆಡ್ಡಿ.—ಲೋಕಾಯುಕ್ತಕ್ಕೆ ಇದನ್ನು ಕೊಟ್ಟಿದ್ದಾರೋ ಅಥವಾ ಇಲ್ಲವೋ ಗೊತ್ತಿಲ್ಲ.

ಶ್ರೀ ಎನ್. ಗುರುಪಾದಪ್ಪ.—ಇವೊತ್ತು ಮಾನ್ಯ ಶಿವರಾಮೇಗೌಡರು ಎಡ ಮಗ್ಗಲಲ್ಲಿ ಎದ್ದು ಬಂದಿದ್ದಾರೆ, ಇನ್ನೊಂದು ದಿವಸ ಬಲ ಮಗ್ಗುಲಲ್ಲಿ ಎದ್ದು ಬಂದು ಮಾತನಾಡಲಿ ಆಗ ಅವರ ಎಲ್ಲಾ ಮಾತುಗಳೂ ಕಡತಕ್ಕೆ ಹೋಗುತ್ತದೆ.

*** Not recorded as ordered by the Speaker

ಶ್ರೀ ಎಲ್. ಆರ್. ಶಿವರಾಮೇಗೌಡ.—ನಾನು ನೇರವಾಗಿ ಆಪಾದನೆ ಮಾಡಿದ್ದೇನೆ. ಅಂತಹ ಬಹಳ ಕ್ಲಿಷ್ಟವಾದ ವಿಷಯ ಕಡತಕ್ಕೆ ಹೋಗಬಾರದು ಎಂದಾಗ ನಾನು ಸಹ ಅದಕ್ಕೆ ಸಮ್ಮತಿಸಿದ್ದೇನೆ. ಆದರೆ ಒಂದು ಮಾತನ್ನು ಈ ಸಂದರ್ಭದಲ್ಲಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ರಾಜ್ಯದ ಹಣ ಪೋಲು ಆಗುತ್ತಿದೆ. ಈ ಸರ್ಕಾರ ಹೊಸದಾಗಿ ಅಧಿಕಾರಕ್ಕೆ ಬಂದು ಈಗಾಗಲೇ ನಾಲ್ಕು ತಿಂಗಳಾಯಿತು ಇಷ್ಟು ಸರ್ಕಾರದ ದುಡ್ಡು ತಿನ್ನತಕ್ಕಂಥ ಸಂಸ್ಥೆಗಳನ್ನು ಸರಿಪಡಿಸಬೇಕು. ನಾವು ಎಲ್ಲವನ್ನೂ ಸರಿಪಡಿಸುವುದಕ್ಕೆ ಆಗುವುದಿಲ್ಲ, ನಾನು ಇದನ್ನು ಒಪ್ಪುತ್ತೇನೆ ಆದರೆ ನೇರವಾಗಿ ಕೋಟಿಗಟ್ಟಲೆ ಹಣ ತಿನ್ನುತ್ತಿರತಕ್ಕಂಥ ಇಂತಹವರನ್ನು ಸದೆ ಬಡಿಯದಿದ್ದರೆ ರಾಜ್ಯದ ಬೊಕ್ಕಸಕ್ಕೆ ಸೇರುವ ಹಣದಲ್ಲಿ ನಷ್ಟ ಆಗುವುದಿಲ್ಲವೇ ಎಂಬ ಮಾತನ್ನು ಈ ಸಂದರ್ಭದಲ್ಲಿ ಕೇಳಬೇಕಾಗುತ್ತದೆ. ಇಂತಹ ನೇರವಾದ ವಿಷಯಗಳು ಕಡತಕ್ಕೆ ಹೋಗಬಾರದು ಎಂದು ತಾವು ಸರಿಯಾಗಿ ಹೇಳಿದ್ದೀರಿ. ನಾನು ಇನ್ನೂ ಒಂದೆರಡು ವಿಚಾರಗಳನ್ನು ಹೇಳುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ್.—ಶಿವರಾಮೇಗೌಡರೇ, ಸದೆ ಬಡಿಯಬೇಕಾಗಿದ್ದರೆ ಬ್ಯಾಟರಿ ತೆಗೆದುಕೊಂಡು ಹುಡುಕಬೇಕಾಗಿದೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಎಲ್ಲರೂ ಹಳ್ಳಿಯಲ್ಲಿ ಚೆನ್ನಾಗಿ ಮಾತನಾಡುತ್ತಾರೆ. ಲೋಕಾಯುಕ್ತದ ಬಗ್ಗೆ ಹಳ್ಳಿಯ ಮಟ್ಟದಲ್ಲಿ ಕೂಡ ಜನರು ಮಾತನಾಡುತ್ತಿದ್ದಾರೆ. ಲೋಕಾಯುಕ್ತ ಏನು ಮಾಡುತ್ತಿದೆ, ಕುಲದೀಪ್ ಸಿಂಗ್ ಆಯೋಗ ಏನು ಮಾಡುತ್ತಿದೆ, ರೇವ್‌ಜಿತ್ ಪ್ರಕರಣದ ಆಯೋಗ ಏನು ಮಾಡುತ್ತಿದೆ, ಇವಕ್ಕೆಲ್ಲಾ ಎಷ್ಟು ದುಡ್ಡು ಖರ್ಚಾಗುತ್ತದೆ, ಇದರಿಂದ ಪ್ರಯೋಜನ ಆಗುತ್ತಿದೆಯೇ ಅಥವಾ ಇಲ್ಲವೇ ಎಂದು ಗ್ರಾಮೀಣ ಮಟ್ಟದ ಜನರು ಸಹ ಅರ್ಥ ಮಾಡಿಕೊಳ್ಳುತ್ತಿದ್ದಾರೆ. ಗ್ರಾಮೀಣ ಮಟ್ಟದ ಜನರು ಬಹಳ ಬುದ್ಧಿವಂತರು ಆದ್ದರಿಂದ ಇದಕ್ಕೆಲ್ಲಾ ಅವಕಾಶ ಕೊಡಬಾರದು. ೧೭೭ ಜನ ಸದಸ್ಯರನ್ನು ಗೆಲ್ಲಿಸಿರತಕ್ಕ ನಾಡಿನ ಜನತೆ ಊರಿನಲ್ಲಿದ್ದಾರೆ.

ಒಬ್ಬ ಮಾನ್ಯ ಸದಸ್ಯರು.—೧೭೭ ಅಲ್ಲ ಶಿವರಾಮೇಗೌಡರೆ, ೧೮೪......

ಶ್ರೀ ಕೆ. ಶಿವರಾಮೇಗೌಡ.—೧೮೪ ಜನರನ್ನು ಗೆಲ್ಲಿಸಿರತಕ್ಕವರು ಇಂತಹ ವಿಚಾರಗಳ ಬಗ್ಗೆ ಯೋಚನೆ ಮಾಡುತ್ತಿದ್ದಾರೆ. ಇಂಥಾದ್ದನ್ನೆಲ್ಲಾ ಹೇಗೆ ಸದೆ ಬಡಿಯುತ್ತಾರೆಯೋ ಎಂದು ಯೋಚನೆ ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ನಾನು ವೀರೇಂದ್ರ ಪಾಟೀಲರನ್ನು ಅಭಿನಂದಿಸಬೇಕಾಗುತ್ತದೆ. ಏಕೆಂದರೆ ಈ ಏಕ್ಸೈಜ್ ಲಾಬಿಯನ್ನು ಮಟ್ಟ ಹಾಕುವಂತಹ ದಿಟ್ಟತನವನ್ನು ಸನ್ಮಾನ್ಯ ವೀರೇಂದ್ರ ಪಾಟೀಲರ ಸರ್ಕಾರ ತೆಗೆದುಕೊಂಡಿದೆ. ಅದೇ ರೀತಿ ಇದನ್ನು ಸಹ ಸದೆ ಬಡಿಯುವ ಕ್ರಮವನ್ನೂ ತೆಗೆದುಕೊಳ್ಳಬೇಕಾಗಿತ್ತು ಎಂಬುದು ನನ್ನ ವಾದ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ ಹಾಗೂ ತಮಗೆ ವಂದಿಸುತ್ತೇನೆ.

ಅಧ್ಯಕ್ಷರು.—ವಂದನೆಗಳು.

† ಶ್ರೀ ಅಪ್ಪಾಜಿ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ್).—ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರು ಮಾಡಿದಂಥ ಈ ಭಾಷಣಕ್ಕೆ ನಾನು ನನ್ನ ವಂದನೆಗಳನ್ನು ಅರ್ಪಿಸುತ್ತೇನೆ. ಯಾವ ಕಾರಣಕ್ಕೋಸ್ಕರ ಅರ್ಪಿಸುತ್ತಿದ್ದೇನೆಂದರೆ ಮುಖ್ಯವಾಗಿ ನಮ್ಮ ರಾಜ್ಯ ಬಹಳಷ್ಟು ಅಡೆತಡೆಗಳಿಗೆ ಹಾಗೂ ತೊಂದರೆಗಳಿಗೆ ಈಡಾದಂಥ ರಾಜ್ಯ. ಹಲವಾರು ಸಮಸ್ಯೆಗಳನ್ನು ಎದುರಿಸುತ್ತಾ ಇದ್ದರೂ ಕೂಡ ನಮ್ಮ ರಾಜ್ಯದ ಕಾರ್ಯಕ್ರಮಗಳನ್ನು ನಮ್ಮ ಸರ್ಕಾರದ ಕಾರ್ಯಕ್ರಮಗಳನ್ನು ಬಹಳ ಒಳ್ಳೆಯ ರೀತಿಯಿಂದ ಮತ್ತು ಈ ಸದನಕ್ಕೆ ಒಳ್ಳೆಯ ಮಾರ್ಗದರ್ಶನವಾಗಿ ಮಾಡಿಕೊಟ್ಟಿದ್ದಕ್ಕಾಗಿ ಅವರನ್ನು ನಾನು ಮತ್ತೊಮ್ಮೆ ಹೃತ್ಪೂರ್ವಕವಾಗಿ ವಂದಿಸುತ್ತಾ ಇದ್ದೇನೆ, ನಮ್ಮ ಹಿಂದಿನ ಸರ್ಕಾರದವರು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡರು populist ಸ್ಕೀಮುಗಳನ್ನು ಹಮ್ಮಿಕೊಂಡರು. ಆದರೆ ಇವತ್ತಿನದಿವಸ ನಮ್ಮ ಸರ್ಕಾರದ ಕಾರ್ಯಕ್ರಮಗಳನ್ನು ನಾವು ನೋಡಿದಾಗ ನಾವು ಇಂತಹ ಯಾವ ಕಾರ್ಯಕ್ರಮಗಳಿಗೆ ಹೋಗದೆ ನೇರವಾಗಿ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹೋಗುತ್ತಾ ಇದ್ದೇವೆ ಇದಕ್ಕೆ ನಾನು ಒಂದು ಮಾತನ್ನು ಸದನದಲ್ಲಿ ನೆನಪಿಗೆ ತರಬೇಕೆಂದು ಬಯಸುತ್ತಾ ಇದ್ದೇನೆ. ನಮ್ಮ ಅರ್ಥ ಸಚಿವರು I don't want to convert my State into a Beggar's Colony ಎನ್ನುವಂಥ ಒಂದು ಮಾತನ್ನು ಹೇಳಿದರು. ಅವರು ಇದನ್ನು ಬಹಳ ಒಳ್ಳೆಯ ರೀತಿಯಿಂದ ಹೇಳಿದರು ಅದೇರೀತಿಯಿಂದ ನಮ್ಮ ಅರ್ಥಮಂತ್ರಿಗಳೂ ಕೂಡ ಒಳ್ಳೆಯ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ ಅದಕ್ಕೆ ಬೆಂಬಲವಾಗಿ ನಿಂತಂಥ, ಶಕ್ತಿಯುತವಾಗಿ ನಿಂತಂಥ ಮಾನ್ಯ ಮುಖ್ಯ ಮಂತ್ರಿಗಳಾದ ವೀರೇಂದ್ರ ಪಾಟೀಲರಿಗೆ ನಾನು ಈ ಸಂದರ್ಭದಲ್ಲಿ ಅಭಿನಂದಿಸುತ್ತಾ ಇದ್ದೇನೆ, ರೂರಲ್ ಡೆವಲಪ್‌ಮೆಂಟ್ ಬಗ್ಗೆ ಹೇಳಬೇಕೆಂದರೆ, ಈ ರೂರಲ್ ಡೆವಲಪ್‌ಮೆಂಟ್ ಹೇಗಾಗಿದೆ ಎಂದರೆ ಸಾಂಪ್ರದಾಯಿಕ ಪರಿಕಲ್ಪನೆ

ಹೊಂದಿದಂಥ ರೂರಲ್ ಡೆವಲಪ್‌ಮೆಂಟ್ ಬಗ್ಗೆ ವಿಚಾರ ಮಾಡುತ್ತಿದ್ದೇವೆ. The traditional concept of rural development is totally different from what we want it to be. ರೂರಲ್ ಡೆವಲಪ್‌ಮೆಂಟ್ ಬಗ್ಗೆ ನಾವು ಏನು ವಿಚಾರ ಮಾಡುತ್ತಾ ಇದ್ದೇವೆ, ಅಂದರೆ ಹಳ್ಳಿಗಾಡಿನಲ್ಲಿ ಒಂದು ಗಟಾರ ಮಾಡಿದರೆ ಆಯಿತು ರಸ್ತೆ ಮಾಡಿದರೆ ಆಯಿತು, ಬೀದಿ ದೀಪ ಕೊಟ್ಟರೆ ಆಯಿತು ಅಥವಾ ಇನ್ನಾವುದೇ ರೀತಿಯ ಸೌಕರ್ಯಗಳನ್ನು ಕೊಟ್ಟರೆ ರೂರಲ್ ಡೆವಲಪ್‌ಮೆಂಟ್ ಆಯಿತು ಎಂದು ನಾವು ಅರ್ಥ ಮಾಡುತ್ತಾ ಇದ್ದೇವೆ. ನಿಜವಾಗಿಯೂ ರೂರಲ್ ಡೆವಲಪ್‌ಮೆಂಟ್ ಅಂದರೆ ಹಳ್ಳಿಯಲ್ಲಿರುವಂಥ ಪ್ರತಿಯೊಬ್ಬ ನಾಗರೀಕನ ರೈತನ ಕಾರ್ಮಿಕನ ನಿಜವಾಗಿ ಅವನ ಆರ್ಥಿಕ ಪರಿಸ್ಥಿತಿಯ ಸುಧಾರಣೆಗೋಸ್ಕರ ನಾವು ಕಾರ್ಯಕ್ರಮಗಳನ್ನು ಹಾಕಿಕೊಂಡು, ನಿಜವಾಗಿ ಆ ದಿಶೆಯಲ್ಲಿ ನಾವು ಕೆಲಸ ಮಾಡಿದರೆ ರೂರಲ್ ಡೆವಲಪ್‌ಮೆಂಟ್ ಆಗುತ್ತದೆ ಎಂದ ನನ್ನ ಭಾವನೆ. ಸರ್ಕಾರ ಈಗಾಗಲೇ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಆದರಲ್ಲಿ ಈ ರೂರಲ್ ಡೆವಲಪ್‌ಮೆಂಟ್ ಮಾಡುವುದಕ್ಕೋಸ್ಕರವಾಗಿ ಲಿಫ್ಟ್ ಇರಿಗೇಷನ್ ಮುಖಾಂತರವಾಗಿಯಾಗಲಿ, ಕೈಗಾರಿಕೆಯಾಗಲಿ, ಇನ್ನಾವುದಾದರೂ ವ್ಯವಸ್ಥೆಯಾಗಲಿ, ಆದರಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದನ್ನು ನಾವು ನೋಡುತ್ತಾ ಇದ್ದೇವೆ. ಪಬ್ಲಿಕ್ ಸೆಕ್ಟಾರ್ ಗೋಸ್ಕರ ನಮ್ಮ ಸರ್ಕಾರ ಸಾವಿರಾರು ಕೋಟಿ ದುಡ್ಡನ್ನು ವೆಚ್ಚಮಾಡುತ್ತಾ ಇದೆ ಆದರೆ ರೂರಲ್ ಡೆವಲಪ್‌ಮೆಂಟ್‌ನಲ್ಲಿ ಈ ಇಂಡಸ್ಟ್ರಿಯಲೈಸೇಷನ್ ನಮ್ಮ ಹಳ್ಳಿಗಾಡಿನ ಪ್ರದೇಶಕ್ಕೆ ಹೋಗಬೇಕು. ಇವತ್ತಿನ ದಿವಸ ಅರ್ಬನ್ ಪ್ಲೇಸಸ ನಲ್ಲಿ ಬಹಳ ತೊಂದರೆಯಾಗಿದೆ, ನೀರಿನ ಸಮಸ್ಯೆ ಇದೆ, ಅನ್ ಎಂಪ್ಲಾಯ್‌ಮೆಂಟ್ ಸಮಸ್ಯೆಯನ್ನು ಎದುರಿಸುತ್ತಾ ಇದ್ದೇವೆ. ಇದು ನಿವಾರಣೆ ಆಗಬೇಕಾದರೆ ನಮ್ಮ ಹಳ್ಳಿಗಳ ಸುಧಾರಣೆಯಾಗಬೇಕು. ಹಳ್ಳಿಗಳ ಸುಧಾರಣೆಯಾದರೆ ಶಾಲಾ ಕಟ್ಟಡವಾಗಲಿ, ರಸ್ತೆಯಾಗಲಿ, ದೀಪವಾಗಲಿ, ಗಟಾರ ಮುಂತಾದವುಗಳು ತನ್ನಿಂದತಾನೆ ಆಗುತ್ತವೆ, ಈಗ ನಮ್ಮ ಸರ್ಕಾರವು ಸರ್ಕಾರಿ ನೌಕರರ ನಿವೃತ್ತಿ ವಯೋಮಿತಿಯನ್ನು 58 ರಿಂದ 55ಕ್ಕೆ ಇಳಿಸಿದೆ, ಇದು ನಾವೆಲ್ಲರೂ ಸ್ವಾಗತ ಮಾಡುವಂಥ ಒಂದು ತೀರ್ಮಾನ. ಇವತ್ತಿನ ದಿವಸ ನಾವು ಹಲವಾರು ಯುವಕರನ್ನು ನೋಡುತ್ತಾ ಇದ್ದೇವೆ, ನನ್ನ ಸ್ನೇಹಿತರು ಸಾಕಷ್ಟು ಜನ ವಿದ್ಯಾವಂತರು ಇದ್ದರೂ ಕೂಡ ಇವತ್ತಿನದಿವಸ ಬೀದಿ ಬೀದಿಯಲ್ಲಿ ನೌಕರಿಗೋಸ್ಕರ ಅಲೆದಾಡುತ್ತಿದ್ದಾರೆ. Out of desperation, they are adopting means which the society does not require. ನಮ್ಮ ಸೊಸೈಟಿಯ ವಿರುದ್ಧವಾಗಿ ಹೋಗುವಂತಹ ಹಲವಾರು ಚಟುವಟಿಕೆಗಳಿಗೆ ಅವರು ಈಡಾಗುತ್ತಿದ್ದಾರೆ. ತಮ್ಮ ಹಿರಿಯ ಸದಸ್ಯರು ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಸರ್ಕಾರಿ ನೌಕರರ ನಿವೃತ್ತಿ ವಯೋಮಿತಿಯನ್ನು ಇಳಿಸಿರುವುದರ ಬಗ್ಗೆ ಟೀಕೆಮಾಡುತ್ತಾ ಹೇಳಿದರು. ಎಕ್ಸ್‌ಪೀರಿಯನ್ಸ್ ಇದ್ದವರು ನಿಮಗೆ ಬೇಕಾಗಿಲ್ಲ, ನಿಮಗೆ ಯುವಕರು ಬೇಕು ಎನ್ನುವಂಥ ಮಾತನ್ನು ಹೇಳಿದರು ಆದರೆ ಯುವಕರಲ್ಲಿ ಸಹ ಐ. ಎ. ಎಸ್. ಅಧಿಕಾರಿಗಳು ನಮ್ಮಲ್ಲಿರುವುದನ್ನು ನೋಡುತ್ತಿದ್ದೇವೆ.

Time is the main factor for us. We go by anything but not time We should bear this in mind.

ಆದ್ದರಿಂದ ನಮ್ಮಲ್ಲಿ ಏನು ಯುವಕರು ಇದ್ದಾರೆ, ಅವರಿಗೆ ನಾವು ಸಾಕಷ್ಟು ಅವಕಾಶ ಕೊಡಬೇಕು. ನಿರುದ್ಯೋಗ ಸಮಸ್ಯೆ ಹೆಚ್ಚಾಗಿದೆ. ಆದ್ದರಿಂದ ಯುವಕರುಗಳಿಗೆ ಹೆಚ್ಚು ಹುದ್ದೆಗಳನ್ನು ಒದಗಿಸಿಕೊಡಬೇಕು. ಈ ರೀತಿ ಮಾಡಿದರೆ ರಾಜ್ಯದ ಆಡಳಿತ ಸುಧಾರಣೆಯಾಗುತ್ತದೆ. ನಮ್ಮ ಸರ್ಕಾರ ಮಾಡಿದಂತಹ ಇನ್ನೊಂದು ಒಳ್ಳೆಯ ಕಾರ್ಯಕ್ರಮ ಏನೆಂದರೆ ಟಾಡಿಯ ಮಾರಾಟವನ್ನು ನಿಲ್ಲಿಸಿರುವುದು. ಬರೀ ಸೇಂದಿಯನ್ನು ನಿಷೇಧ ಮಾಡಿರುವುದರಿಂದ ಹೆಚ್ಚು ಪ್ರಯೋಜನವಾಗುವುದಿಲ್ಲ. ಇದರ ಜೊತೆಗೆ ಫಾರಿನ್ ಲಿಕ್ಕರ್ ಆಗಲಿ, ಅರಾಕ್ ಆಗಲಿ ಅಥವಾ ಮತ್ತಾವುದೇ ಆಗಲಿ, ಅವುಗಳನ್ನು ಬಂದ್ ಮಾಡತಕ್ಕದ್ದು ಒಳ್ಳೆಯದು. ಇದರಿಂದ ನಮ್ಮ ಆರ್ಥಿಕ ಸಂಪನ್ಮೂಲಕ್ಕೆ ಪೆಟ್ಟು ಆಗುತ್ತದೆ. ಆದರೆ ಅದನ್ನು ಪರಿಪೂರಿಸಿಕೊಡಲು ಬೇರೆ ಕ್ರಮ ಕೈಗೊಳ್ಳಬಹುದು. ಹಿಂದೆ ಕೂಡ ಇವುಗಳನ್ನು ನಿಷೇಧ ಮಾಡಿದ್ದರು. ಇಂತಹ ಮಾದಕ ಪಾನೀಯಗಳಿಂದ ಜನರ ಆರೋಗ್ಯವು ಹಾಳಾಗುತ್ತಿದೆ. On the contrary, We are spending more on Health. We are spending huge amount to provide treatments in Hospitals. ಇವತ್ತು ಸಾವಿರಾರು ಜನ ಈ ಪಾನೀಯಗಳನ್ನು ಕುಡಿದು ಸಾಯುತ್ತಿದ್ದಾರೆ. ಹಾಗೂ ಆರೋಗ್ಯವನ್ನು ಹಾಳುಮಾಡಿಕೊಳ್ಳುತ್ತಿದ್ದಾರೆ. ಇವತ್ತು ನಾವು ಲಕ್ಷಾಂತರ ರೂಪಾಯಿಗಳನ್ನು ಇವರುಗಳ ಆರೋಗ್ಯಕ್ಕಾಗಿ ಖರ್ಚು ಮಾಡಬೇಕಾಗಿದೆ. So it is a balancing factor. ಆದ್ದರಿಂದ ಇದನ್ನು ಬಂದ್ ಮಾಡುವುದರಿಂದ ಸರ್ಕಾರಕ್ಕೆ ಬರುವ ಆದಾಯ ತಪ್ಪಿ ಹೋಗುತ್ತದೆಂಬುದನ್ನು ನಾನು ಒಪ್ಪುವುದಿಲ್ಲವೆಂಬ

ಮಾತನ್ನು ನಾನು ಸ್ಪಷ್ಟಪಡಿಸುತ್ತೇನೆ. ಇನ್ನು ರೂರಲ್ ಡೆವಲಪ್‌ಮೆಂಟ್ ಬಗ್ಗೆ ಹೆಚ್ಚು ಮಾತನಾಡುತ್ತೇನೆ. ಕೃಷಿಗೆ ಹೆಚ್ಚಿನ ಆದ್ಯತೆಯನ್ನು ತಮ್ಮ ಸರ್ಕಾರ ಕೊಡುತ್ತದೆಂಬ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಒಂದು ಮಾತನ್ನು ನೊಂದ ಮನಸ್ಸಿನಿಂದ ಬಿಚ್ಚು ಮನಸ್ಸಿನಿಂದ ಹೇಳುತ್ತೇನೆ. ಮುಖ್ಯವಾಗಿ ನಮ್ಮ ಯು.ಕೆ.ಪಿ. ಪ್ರಾಜೆಕ್ಟ್ ಬಗ್ಗೆ ಹೇಳುತ್ತೇನೆ? ನಮ್ಮ ಬಿಜಾಪುರ ಜಿಲ್ಲೆಯು ಆಗಾಗ್ಗೆ ಬರಗಾಲಕ್ಕೆ ತುತ್ತಾಗುತ್ತದೆ. ಇಲ್ಲಿ ಮುಳುವಾಡ್ ಏತ ನೀರಾವರಿ ಯೋಜನೆಯು ಬಗ್ಗೆ ಬ್ರಿಟೀಷರು ಇದ್ದಾಗಲೇ ಪ್ಲಾನ್ ಅಂಡ್ ಎಸ್ಟಿಮೇಟ್ ಅನ್ನು ತಯಾರು ಮಾಡಿದ್ದರು. ಆವತ್ತು ಅದಕ್ಕೆ ಕೇವಲ ೫೦ ಕೋಟಿ ರೂಪಾಯಿ ಬೇಕಾಗಿತ್ತು. ಆದರೆ ಇವತ್ತು ೩೦೦ ಕೋಟಿ ರೂಪಾಯಿಯನ್ನು ಖರ್ಚು ಮಾಡಿದರೂ ಕೂಡ ಅದು ಆಗದಂತಹ ಕಾರ್ಯಕ್ರಮವಾಗಿದೆ. ಹಿಂದಿನ ಸರ್ಕಾರ ಚುನಾವಣೆ ಹತ್ತಿರ ಬಂದಾಗ ಅಂದರೆ ಚುನಾವಣೆ ಕೇವಲ ಒಂದು-ಒಂದೂವರೆ ತಿಂಗಳು ಇರುವಾಗ ಹೆಲಿಕ್ಯಾಫ್ಟರ್ ತೆಗೆದುಕೊಂಡು ಬಂದು, ನೂರಾರು ಕಾರುಗಳಲ್ಲಿ ಬಂದು ಆವತ್ತು ಮುಳುವಾಡ ಏತ ನೀರಾವರಿ ಯೋಜನೆ ಮಾಡಿಕೊಡುತ್ತೇವೆಂದು ಹೇಳಿ ಆ ಯೋಜನೆಗೆ ಅಡಿಗಲ್ಲನ್ನು ಹಾಕಿದರು. ಆದರೆ ಅದು ಇವತ್ತು ಧೂಳಿನಲ್ಲಿ ಮುಚ್ಚಿಹೋಗಿದೆ.

ಇನ್ನು ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್ ಎಂದು ಸ್ಥಾಪನೆ ಮಾಡಿದರು. ಇದರ ಮೇಲೆ ಕೂಡ ಸುಮಾರು ೨,೫ ಕೋಟಿ ರೂಪಾಯಿಯನ್ನು ಖರ್ಚು ಮಾಡಿದರು. ಆದರೆ ಅಲ್ಲಿ ಒಂದು ಸ್ಕೀಮ್ ಕೂಡ ತಯಾರು ಮಾಡಿಲ್ಲ ಒಂದು ಪ್ರಾಜೆಕ್ಟ್ ಬಗ್ಗೆ ಸಹ ಎಸ್ಟಿಮೇಟ್ ತಯಾರು ಆಗಿಲ್ಲ. ಆದ್ದರಿಂದ ನಾವು ರೈತರಿಗೋಸ್ಕರ ಹಾಗೂ ನಮ್ಮ ಹಿಂದುಳಿದ ಪ್ರದೇಶದ ಅಭಿವೃದ್ಧಿಗೋಸ್ಕರ ಈ ಸದನದಲ್ಲಿ ಹೋರಾಟ ಮಾಡಬೇಕಾಗಿದೆ. ಇಂತಹ ಸಂದರ್ಭದಲ್ಲಿ ಈ ರೀತಿ ಅನಗತ್ಯವಾಗಿ ಖರ್ಚು ಮಾಡುವುದನ್ನು ನಿಲ್ಲಿಸುವುದು ಒಳ್ಳೆಯದು. ಯಾವ ಕಾರಣದಿಂದ ಈ ಒಂದು ಕಾರ್ಯಕ್ರಮ ಬಿಟ್ಟುಹೋಗಿದೆ ಎಂಬುದು ನಮಗೆ ಅರ್ಥವಾಗುತ್ತಿಲ್ಲ. ಈ ವಿಷಯದ ಬಗ್ಗೆ ಸನ್ಮಾನ್ಯ ಅರ್ಥ ಸಚಿವರ ಹಾಗೂ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯಲು ಪ್ರಯತ್ನ ಮಾಡುತ್ತಿದ್ದೇನೆ. ನಮ್ಮ ಬಿಜಾಪುರ ಜಿಲ್ಲೆಯಲ್ಲಿ ಕೃಷಿ ಕಾಲೇಜಿಗೋಸ್ಕರ ಏಕ ಸದಸ್ಯ ಆಯೋಗ ಕೂಡ ನೇಮಕವಾಗಿತ್ತು. ಅದಾದ ನಂತರ ಕೃಷಿ ಇಲಾಖೆಯ ಕಾರ್ಯದರ್ಶಿಯವರಾದ ಶ್ರೀ ಕೃಷ್ಣ ಕುಮಾರ್‌ರವರು ಪತ್ರಿಕಾ ಹೇಳಿಕೆಯನ್ನು ಸಹ ಕೊಟ್ಟರು ಅದಕ್ಕೆ ಬೇಕಾಗಿರುವುದು ಸುಮಾರು ೫೦ ಲಕ್ಷ ರೂಪಾಯಿಗಳು ಮಾತ್ರ. ೫೦ ಲಕ್ಷ

೩.೩೦ ಪಿ.ಎಂ.

ರೂಪಾಯಿಗಳನ್ನು ಮಂಜೂರು ಮಾಡಿಕೊಟ್ಟರೆ ಬಿಜಾಪುರ ಜಿಲ್ಲೆಯಲ್ಲಿ ವ್ಯವಸಾಯ ಕಾಲೇಜು ಶುರು ಮಾಡಬಹುದು. ಆದರೆ ಸರ್ಕಾರದವರು ಇತ್ತೀಚೆಗೆ ಒಂದು ಹೇಳಿಕೆ ಕೊಟ್ಟಿದ್ದಾರೆ, ಅದರಲ್ಲಿ ವ್ಯವಸಾಯ ಕಾಲೇಜಿನ ಬಗ್ಗೆ ವಿಚಾರ ಮಾಡಿಲ್ಲ. ಎಕಾನಮಿ ಮೆಜರ್ಸ್ ಇರುವ ಕಾರಣ ಈ ಬಗ್ಗೆ ವಿಚಾರ ಮಾಡಬೇಕಾಗಿದೆ ಎಂದು ಹೇಳಿದ್ದಾರೆ.

(ಶ್ರೀ ಕೌಜಲಗಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಸಭೆಯಲ್ಲಿ ಸನ್ಮಾನ್ಯ ಮಂತ್ರಿಗಳು ಕೂಡ ಇದ್ದಾರೆ, ವಿಜಾಪುರ ಜಿಲ್ಲೆ ಬಹಳ ಹಿಂದುಳಿದಿರುವಂಥ ಜಿಲ್ಲೆ ಆಗಿದೆ. ಆ ಜಿಲ್ಲೆಯಲ್ಲಿ ಒಣಬೇಸಾಯ ಮಾಡುವಂತವರೇ ಜಾಸ್ತಿಯಿದ್ದಾರೆ. ಒಣ ಬೇಸಾಯ ಅಭಿವೃದ್ಧಿಗೆ ವ್ಯವಸಾಯ ಕಾಲೇಜು ಅವಶ್ಯಕವಾಗಿ ಬೇಕಾಗುತ್ತದೆ. ಈ ವರ್ಷ ಕೊಡದಿದ್ದರೂ ಮುಂದಿನ ಯೋಜನೆಯಲ್ಲಾದರೂ ವ್ಯವಸಾಯ ಕಾಲೇಜು ಕೊಡುವುದಕ್ಕೆ ಸೂಕ್ತ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಹೇಳುತ್ತೇನೆ ಇವತ್ತು ರಾಜ್ಯದಲ್ಲಿ ಸಹಕಾರ ಸಂಸ್ಥೆಗಳು ಏನಿವೆ, ಇವುಗಳ ಮೂಲಕ ರೈತರು ಸಾಲ ಪಡೆಯಬೇಕಾಗಿದೆ. ಮಾನ್ಯ ಮುಖ್ಯಮಂತ್ರಿಗಳು ರೈತರಿಗೆ ಸಿಂಗಲ್ ಏಜೆನ್ಸಿ ಮೂಲಕ ಸಾಲ ಕೊಡತಕ್ಕ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದಾರೆ ಅದಕ್ಕಾಗಿ ಅವರನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಇವತ್ತು ನಮ್ಮ ಸರ್ಕಾರ ರೈತರ ವಿಶ್ವಾಸವನ್ನು ಗಳಿಸತಕ್ಕ ರೀತಿಯಲ್ಲಿ ಕೆಲಸ ಮಾಡಬೇಕೆಂದು ಹೇಳುತ್ತೇನೆ. ಇನ್ನು ಬಹು ಮುಖ್ಯವಾಗಿ ಅಡ್ಮಿನಿಸ್ಟ್ರೇಷನ್ ಬಗ್ಗೆ ಹೇಳುವುದಾದರೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ

> "while the administrative efficiency is at a low ebb the vastly expanded bureaucracy has not been adequately res-ponsible to the needs and aspirations of the people" ಎಂದು

ಹೇಳಿದ್ದಾರೆ. ಇವತ್ತು ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದರೂ ಹಿಂದೆ ಇದ್ದಂತಹ ಸರ್ಕಾರದ ಮೇಲೆ ಆರೋಪ ಮಾಡುವುದು ಸ್ವಾಭಾವಿಕವಾಗಿದೆ. ಇದು ಅಷ್ಟು ಸೂಕ್ತವಲ್ಲವೆಂದು ನಾನು

ಹೇಳುತ್ತೇನೆ. ನಮ್ಮ ಆಡಳಿತದಲ್ಲಿ ತಪ್ಪುಗಳಾಗಿದ್ದರೆ ಬೇರೆಯವರ ಉದಾಹರಣೆಗಳನ್ನು ತೆಗೆದುಕೊಳ್ಳುವ ಬದಲು, ನಾವು ಮಾಡತಕ್ಕ ಕೆಲಸವನ್ನು ಸರಿಯಾಗಿ, ಪ್ರಾಮಾಣಿಕವಾಗಿ ಮಾಡಿಕೊಂಡು ಹೋಗುವುದು ಸೂಕ್ತವೆಂದು ಹೇಳುತ್ತೇನೆ. ಅಧಿಕಾರಿಗಳು ತಪ್ಪು ಮಾಡುವುದು ಯಾವಾಗ ಅಂದರೆ ನಮ್ಮ ಕೈವಾಡದಿಂದ ತಪ್ಪು ಮಾಡುತ್ತಾರೆಂದು ಹೇಳಬೇಕಾಗಿದೆ. ಇವತ್ತು ಕಮಿಟಿಗಳನ್ನು ರಚನೆ ಮಾಡಿದ್ದಾರೆ, ಅವುಗಳು ಎಷ್ಟು ಸರಿಯಾಗಿ ಕೆಲಸ ಮಾಡುತ್ತವೆಯೋ ಎಂಬುದನ್ನು ನೋಡಬೇಕಾಗಿದೆ. ಬರೀ ಕಮಿಟಿಗಳನ್ನು ರಚನೆ ಮಾಡಿದರೆ ಸಾಲದು. ಕರಪ್ಷನ್ ಯಾವ ರೀತಿ ನಿಲ್ಲಿಸಬೇಕೆಂಬುದು ಮುಖ್ಯ. ಇವತ್ತು ರಾಜ್ಯದ ಜನತೆ ನಮ್ಮನ್ನು ಭ್ರಷ್ಟಾಚಾರ ನಿಲ್ಲಿಸಬೇಕೆಂದು ಹೇಳಿ ಆರಿಸಿ ಕಳುಹಿಸಿಕೊಟ್ಟಿದ್ದಾರೆ. ಆದ್ದರಿಂದ ಅದನ್ನು ಯಾವರೀತಿ ತಡೆಗಟ್ಟಬೇಕು ಎನ್ನುವುದರ ಬಗ್ಗೆ ಚಿಂತನೆ ಮಾಡಬೇಕಾಗಿದೆ. ಭ್ರಷ್ಟಾಚಾರ ನಿಲ್ಲಿಸುವುದಕ್ಕೆ ಜನರ ಸಹಕಾರ ಮುಖ್ಯ ಶಾಸಕರ ಹಾಗೂ ಅಧಿಕಾರಿಗಳ ಸಹಕಾರವು ಮುಖ್ಯವಾಗಿ ಬೇಕಾಗಿದೆ. ನಮ್ಮದು ಅಭಿವೃದ್ಧಿ ಹೊಂದುತ್ತಿರುವ ದೇಶ. ಎಲ್ಲರೂ ಪ್ರಾಮಾಣಿಕ ರೀತಿಯಿಂದ ನಡೆದಾಗ ಮಾತ್ರ ಈ ಕರಪ್ಷನ್ ಎಂಬುದು ನಿಲ್ಲುತ್ತದೆ. ಇದನ್ನು ನಿಲ್ಲಿಸುವ ದಿಕ್ಕಿನಲ್ಲಿ ಸರ್ಕಾರ ಬಿಗಿಯಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಹೇಳುತ್ತೇನೆ. Our country is a developing country. It is not a developed country. Our State is under developed. ಆಡಳಿತದಲ್ಲಿ ಕರಪ್ಷನ್ ನಡೆಯುವುದು ಸಹಜವಾಗಿದೆ. ಇದನ್ನು ನಿಲ್ಲಿಸುವುದು ಅತಿ ಮುಖ್ಯವಾಗಿದೆ ಎಂಬುದನ್ನು ನಾವು ತಿಳಿದುಕೊಳ್ಳಬೇಕಾಗಿದೆ. ಆದ್ದರಿಂದ ಈ ದಿಶೆಯಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ. ಇನ್ನು ಭೂಸುಧಾರಣೆ ಬಗ್ಗೆ ಹೇಳಬೇಕೆಂದರೆ, ಇದು ಬಹಳ ಸಂತೋಷ ಪಡುವಂಥ ವಿಷಯ. ಇವತ್ತು ಭಾರತದೇಶದಲ್ಲಿ ಪ್ರಪ್ರಥಮವಾಗಿ ಭೂ ಸುಧಾರಣೆ ಆಕ್ಟನ್ನು ಜಾರಿಗೆ ತಂದಿರುವಂಥಾದ್ದು ನಮ್ಮ ಕರ್ನಾಟಕ ರಾಜ್ಯ ಇದಕ್ಕೆ ನಾವು ಹೆಮ್ಮೆ ಪಡಬೇಕಾಗಿದೆ. ಆದರೆ ಈ ಲ್ಯಾಂಡ್ ರಿಫಾರಮ್ಸ್ ಬಗ್ಗೆ it is proposed to complete the balance work at the earliest. Certain amendments to the Karnataka Land Reforms Act are under the consideration of the Government. ಈ ಆಕ್ಟನಲ್ಲಿ ಯಾವುದನ್ನು ಅಮೆಂಡ್ ಮಾಡಬೇಕಾಗಿದೆ ಎಂದು ವಿಚಾರ ಮಾಡಬೇಕಾಗಿದೆ. ಇವೊತ್ತು ನಾನು ಸಹ ಹಳ್ಳಿ ಪ್ರದೇಶದಿಂದ ಬಂದಂಥ ವ್ಯಕ್ತಿ. ನಾನು ವ್ಯವಸಾಯ ಮಾಡುವಂಥ ಮನೆತನದಲ್ಲಿ ಹುಟ್ಟಿಬಂದಂಥ ವ್ಯಕ್ತಿ. ಆದರೆ ಇವೊತ್ತಿನ ದಿವಸ ವಿಜಾಪುರ ಜಿಲ್ಲೆಯಲ್ಲಿ ೪೮ ಎಕರೆ ಅಥವಾ ೫೪ ಎಕರೆ ಜಮೀನು ಇದ್ದರೂ ಕೂಡ ನಿಮ್ಮ ಮೈಸೂರು, ಮಂಡ್ಯ ಅಥವಾ ನಿಮ್ಮ ಮಲೆನಾಡು ಪ್ರದೇಶದಲ್ಲಿರುವಂಥ ೫ ಎಕರೆಗೆ ಸಮಾನವೆಂದು ತಿಳಿದುಕೊಳ್ಳಬೇಕಾಗಿದೆ. ನಮ್ಮ ೫೪ ಎಕರೆಯಲ್ಲಿ ಬೆಳೆಯತಕ್ಕಂಥಾದ್ದು ಪ್ರಪೋಷನೇಟ್ ಆಗಿ ವಿಚಾರ ಮಾಡಿದರೆ, ನಾವು ಒಂದು ಎಕರೆಗೆ ಇವೊತ್ತಿನ ದಿವಸ ಕೇವಲ ನಾಲ್ಕು ಕ್ವಿಂಟಾಲ್ ಜೋಳ ಬೆಳೆಯುತ್ತಿದ್ದೇವೆ. ಅದು ಉತ್ತಮ ಮಳೆಯಾದಾಗ ಮಾತ್ರ ನಾಲ್ಕು ಕ್ವಿಂಟಾಲ್ ಜೋಳವನ್ನು ಬೆಳೆಯುತ್ತೇವೆ. ಇನ್ನು ಲ್ಯಾಂಡ್ ಸೀಲಿಂಗ್ ಏನು ಇದೆ, ಡ್ರೈ ಲ್ಯಾಂಡ್ ಅಂದರೆ ಒಣ ಬೇಸಾಯ ಮತ್ತು, ಇರಿಗೇಟೆಡ್ ಲ್ಯಾಂಡ್ಸ್, ಸೆಮಿ ಇರಿಗೇಟೆಡ್ ಲ್ಯಾಂಡ್‌ಗೆ ಯಾವ ಬೇಧ ಇರಲಾರದೆ ಇದನ್ನು ಇಂಪೋಸ್ ಮಾಡಿದ್ದೀರಿ. ಅದೇ ಗುಲ್ಬರ್ಗ ಜಿಲ್ಲೆಯಲ್ಲಿ ಒಂದು ಎಕರೆಗೆ ನಾಲ್ಕು ಕ್ವಿಂಟಾಲ್ ತೊಗರಿ ಬೆಳೆಯುತ್ತಿದ್ದಾರೆ, ನಮ್ಮಲ್ಲಿ ನಾಲ್ಕು ಕ್ವಿಂಟಾಲ್ ಜೋಳವನ್ನು ಬೆಳೆಯುತ್ತೇವೆ. ತಾವು ಇದನ್ನು ಅರ್ಥ ಮಾಡಿಕೊಳ್ಳಬೇಕು. ನಾಲ್ಕು ಕ್ವಿಂಟಾಲ್ ತೊಗರಿಬೇಳೆ ಬೆಲೆ ಎಷ್ಟು ಆಗುತ್ತದೆ. ಒಂದು ಕ್ವಿಂಟಾಲ್‌ಗೆ ೮೦೦ ರೂಪಾಯಿನಿಂದ ೧,೦೦೦ ರೂಪಾಯಿವರೆಗೆ ಬೆಲೆ ಇದೆ. ನಮ್ಮದು ೧೫೦ ರೂಪಾಯಿನಿಂದ ೨೫೦ ರೂಪಾಯಿ ಜೋಳದ ಬೆಲೆ ಇದೆ. ಆದ್ದರಿಂದ, ಈ ಲ್ಯಾಂಡ್ ಸೀಲಿಂಗ್ ಯಾವ ರೀತಿ ಇಂಪೋಸ್ ಮಾಡುತ್ತಿದ್ದೀರಿ ಎನ್ನುವುದು ಕೂಡ ಅತೀ ಮುಖ್ಯವಾದುದು. ಆದ್ದರಿಂದ, ಈ ಲ್ಯಾಂಡ್ ರಿಫಾರಮ್ಸ್ ಬಗ್ಗೆ ನಮ್ಮ ಸ್ನೇಹಿತರು ಒಂದು ಒಳ್ಳೆಯ ಸಲಹೆ ಕೊಟ್ಟರು. ಅವರು ಏನು ಹೇಳಿದರು ಅಂದರೆ, ಈ ತುಂಡು ಜಮೀನನ್ನು ವಾಟಣಿ ಮಾಡುವಂಥ ವ್ಯವಸ್ಥೆಯನ್ನು ಮಾಡಬೇಕು ಎಂದು. ಆದರೆ ಈ ಸಲಹೆ ನಮ್ಮ ಮನಸ್ಸಿಗೆ ವಿರೋಧವಾಗಿದೆ. ಇವೊತ್ತಿನ ದಿವಸ ೨೫-೩೦ ಎಕರೆ ಇಟ್ಟುಕೊಂಡು ಕೂಡ ನಾವು ವ್ಯವಸಾಯ ಮಾಡುವಂಥ ಪರಿಸ್ಥಿತಿಯಲ್ಲಿ ಇಲ್ಲದೇ ಇದ್ದಾಗ ಒಂದು ಅಥವಾ ಕೊನೆಯ ಒಂದು ಎಕರೆಯಲ್ಲಿ ನಾನು ವ್ಯವಸಾಯ ಮಾಡಲಿಕ್ಕೆ ಸಾಧ್ಯ ಇದೆಯೋ ಎನ್ನುವುದನ್ನು ನಾವು ಅರ್ಥ ಮಾಡಿ ಕೊಳ್ಳಬೇಕಾಗಿದೆ. ಇವೊತ್ತು ಫಾರಿನ್ ಕಂಟ್ರೀಸ್‌ನಲ್ಲಿ ಜಾಯಿಂಟ್ ಅಗ್ರಿಕಲ್ಚರ್‌ಗೆ ಹೋಗುವಾಗ ನಾವು ಇವೊತ್ತಿನ ದಿವಸ ಡೀ ಸೆಂಟ್ರಲೈಜೇಷನ್ ಅಂದರೆ, ಲ್ಯಾಂಡ್ ರಿಫಾರ್ಮ್ ಆಕ್ಟ ಜಾರಿಗೆ ತಂದು ಡೀಸೆಂಟ್ರಲೈಜೇಷನ್ ಎಂದು ಒಬ್ಬ ವ್ಯಕ್ತಿಗೆ ೪-೫ ಎಕರೆ ಜಮೀನು ಇರಬೇಕೆಂದು ನಿಗದಿ ಮಾಡುತ್ತಿದ್ದಾರೆ. ಅವರು ಮಾಡುವಂಥ ಯೋಜನೆಯೇ ಬೇರೆ, ನಾವು ಮಾಡುವಂಥ ಯೋಜನೆಯೇ ಬೇರೆ.

ಇದರಲ್ಲಿ ಎಷ್ಟೊಂದು ವ್ಯತ್ಯಾಸ ಇದೆ ಎಂದು ವಿಚಾರ ಮಾಡಬೇಕಾಗಿದೆ. ಅದಕ್ಕೋಸ್ಕರ ಈ ಲ್ಯಾಂಡ್ ರಿಫಾರಮ್ಸ್ ಅನ್ನು ಎನ್‌ಹ್ಯಾನ್ಸ್ ಮಾಡುವುದಕ್ಕಿಂತಲೂ ಮುಂಚೆ ತಾವು ಇದರ ಬಗ್ಗೆ ಬಹಳಷ್ಟು ವಿಚಾರವಂತರಾಗಿ, ಹೆಚ್ಚಿನ ನಿಜವಾದಂಥ ಪರಿಸ್ಥಿತಿಯಲ್ಲಿ ದಿಶೆಯಲ್ಲಿ ವಿಚಾರ ಮಾಡಿ ಇದನ್ನು ಜಾರಿಗೆ ತರಬೇಕೆಂದು ಹೇಳುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ.— ಅಧ್ಯಕ್ಷರೆ, ರಾಜ್ಯಕ್ಕೆ ಒಬ್ಬ ಮುಖ್ಯ ಮಂತ್ರಿಗಳು, ಆದರೆ ಈ ಸದನಕ್ಕೆ ಒಬ್ಬರೇ ಮಂತ್ರಿಗಳೇ ಇರುತ್ತಾರೆ. ಆದ್ದರಿಂದ, ದಯಮಾಡಿ ಬೇರೆ ಮಂತ್ರಿಗಳನ್ನು ಕರೆಸಬೇಕು.

ಛೇರ್ಮನ್.— ಬರುತ್ತಾರೆ, ತಾವು ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಬಸವರಾಜರಾಯರೆಡ್ಡಿ.— ಅಧ್ಯಕ್ಷರೆ, ಸದನ ನಡೆಯುವಾಗ, ಮಂತ್ರಿಗಳು ಸದನದಿಂದ ಹೊರಗಡೆ ಎಲ್ಲಿ ಹೋಗಿದ್ದಾರೆ. ಇದನ್ನು ತಾವು ಸೀರಿಯಸ್ ಆಗಿ ತೆಗೆದುಕೊಳ್ಳಬೇಕು.

ಛೇರ್ಮನ್.— ಈಗ ಒಬ್ಬರು ಮಂತ್ರಿಗಳು ಇದ್ದಾರೆ.

ಶ್ರೀ ಬಸವರಾಜ ರಾಯರೆಡ್ಡಿ.— ಅಧ್ಯಕ್ಷರೆ, ಒಬ್ಬರು ಇದ್ದರೆ ಆಯಿತೇ?

ಛೇರ್ಮನ್.— ಬೇರೆಯವರು ಬರುತ್ತಾರೆ, ದಯಮಾಡಿ ಕುಳಿತುಕೊಳ್ಳಿ.

ಅದೇ ರೀತಿಯಾಗಿ ಬಿಜಾಪುರ ಜಿಲ್ಲೆ ಎಲ್ಲಿಗೆ ಸೇರುತ್ತದೆಂಬುದು ನಮಗೆ ಸಂಶಯಾಸ್ಪದವಾಗಿದೆ. ಏಕೆಂದರೆ ಇವೊತ್ತು ರಾಯಚೂರು ಡೆವಲಪ್‌ಮೆಂಟ್‌ಗೋಸ್ಕರ ಬಳ್ಳಾರಿ ಡೆವಲಪ್‌ಮೆಂಟ್‌ಗೋಸ್ಕರ, ಗುಲ್ಬರ್ಗ ಡೆವಲಪ್‌ಮೆಂಟ್‌ಗೋಸ್ಕರ ಹೈದರಾಬಾದ್ ಕರ್ನಾಟಕ ಎಂದು ಸೇರ್ಪಡೆಯಾಗುತ್ತಿದೆ. ಇವೊತ್ತು ನಮ್ಮ ಧಾರವಾಡ ಆಗಲೀ, ಬೆಳಗಾಂ ಆಗಲೀ ಕಾರವಾರ ಆಗಲೀ ಮಲೆನಾಡು ಡೆವಲಪ್‌ಮೆಂಟ್ ಏರಿಯಾ ಎಂದು ಸೇರ್ಪಡೆಯಾಗುತ್ತಿದೆ. ಇವಕ್ಕೆ ವಿಶೇಷವಾದಂತಹ ಕಾರ್ಯಕ್ರಮ ಇದೆ. ಇದಕ್ಕೆ ಸರ್ಕಾರದಿಂದ ವಿಶೇಷವಾದ ಹಣವನ್ನು ಕೊಡುತ್ತಿದ್ದೀರಿ. ಆದರೆ ಬಿಜಾಪುರ ಡೆವಲಪ್‌ಮೆಂಟ್‌ಗೋಸ್ಕರ ಏನೂ ಮಾಡಿಲ್ಲ. ನಮ್ಮ ಬಿಜಾಪುರವನ್ನು ಬಾಂಬೆ ಕರ್ನಾಟಕವೆಂದು ಮಾಡಿ ತಬ್ಬಲಿ ಮಗನನ್ನಾಗಿ ಮಾಡಿ ನಿಲ್ಲಿಸಿದ್ದೀರಿ ಇದರಿಂದಾಗಿ ಅಲ್ಲಿನ ಡೆವಲಪ್‌ಮೆಂಟ್‌ಗೆ ಆಸ್ಪದವಿಲ್ಲದಂತೆ ಆಗಿದೆ. ಬೇರೆ ಬೇರೆ ಜಿಲ್ಲೆಗಳಿಗೆ ೫೦ ಕೋಟಿ ರೂಪಾಯಿ ಕೊಡುತ್ತಿರಬೇಕಾದರೆ ನಮ್ಮ ಜಿಲ್ಲೆಗೆ ಎಷ್ಟು ಹಣವನ್ನು ಕೊಡುತ್ತೀರಿ ಎಂಬುದನ್ನು ವಿಚಾರ ಮಾಡಿದರೆ ಅದು ಏನೇನು ಸಾಲದು. ನಾವು ತಬ್ಬಲಿ ಮಕ್ಕಳಾಗಿದ್ದೇವೆಂದು ವಿಷಾದದಿಂದ ಹೇಳಬೇಕಾಗಿದೆ. ಬಿಜಾಪುರ ಜಿಲ್ಲೆ ಬರಡು ಅಲ್ಲ ಬಿಜಾಪುರ ಜಿಲ್ಲೆ ಒಂದು ಕೆಚ್ಚಲು ಹಸು ಇದ್ದ ಹಾಗೆ ಎಂಬುದನ್ನು ನಮ್ಮ ಮಾನ್ಯ ಮುಖ್ಯಮಂತ್ರಿಗಳು ತಿಳಿದುಕೊಳ್ಳಬೇಕು. ಗುಲ್ಬರ್ಗಾ ಜಿಲ್ಲೆಗೆ ನೀರು ಕೊಡುವಂತಹ ಜಿಲ್ಲೆ ಯಾವುದೆಂದರೆ ಅದು ನಮ್ಮ ಬಿಜಾಪುರ ಜಿಲ್ಲೆ ಆಗಿದೆ. ರಾಯಚೂರು ಜಿಲ್ಲೆಗೆ ನೀರು ಕೊಡುವಂತಹ ಕೆಲಸ ಆಗುತ್ತಾ ಇದೆ ಎಂದು ಹೇಳುವುದಾದರೆ, ಅದು ಬಿಜಾಪುರ ಜಿಲ್ಲೆಯಿಂದ ಆಗುತ್ತಿದೆ. ಆದರೆ ಬಿಜಾಪುರ ಜಿಲ್ಲೆಗೋಸ್ಕರ ನೀರಾವರಿ ಯೋಜನೆಗಳು ಏನಾದರೂ ಇದೆಯೇ ಎಂಬ ಬಗ್ಗೆ ವಿಚಾರ ಮಾಡಿದರೆ ಬಹಳ ಕಡಿಮೆ ಇವೆ. ನಮ್ಮ ಸರ್ಕಾರ ಅಲ್ಲಿಗೆ ತುರ್ತಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ರೈತನಿಗೋಸ್ಕರ ವಿದ್ಯುಚ್ಛಕ್ತಿಯನ್ನು ಕೊಡುತ್ತಿದ್ದೀರಿ. ಅದನ್ನು ಕೊಡುವಾಗ ಚಾರ್ಜಸ್ ಆನ್ ಎವ್ವೆರಿ ಪೋಲ್ ಎಂಬ ರೀತಿಯಲ್ಲಿ ಲೆಕ್ಕ ಹಾಕಿ ಕೊಡುತ್ತಿದ್ದೀರಿ. ರೈತನು ೫ ಹೆಚ್‌ಪಿ ಮೋಟಾರ್ ಹಾಕಿಕೊಳ್ಳಬೇಕಾದರೆ ೫ ಹೆಚ್‌ಪಿ ಕರೆಂಟ್ ತೆಗೆದುಕೊಳ್ಳಬೇಕಾದರೆ ಚಾರ್ಜಸ್ ಕೊಡುವಂತಹ ಪರಿಸ್ಥಿತಿಯಲ್ಲಿ ಆತನು ಇದ್ದಾನೆಯೇ ಎನ್ನುವುದನ್ನು ವಿಚಾರ ಮಾಡಬೇಕಾಗುತ್ತದೆ. ಪೋಲುಗಳ ಆಧಾರದ ಮೇಲೆ ಹೋಗದೆ ಅವನು ತೆಗೆದುಕೊಳ್ಳುವ ಹೆಚ್‌ಪಿ ಕರೆಂಟ್ ಆಧಾರದ ಮೇಲೆ ಕರೆಂಟ್‌ನ ಡೆಪಾಸಿಟ್ ಆಗಲೀ ಚಾರ್ಜಸ್ ಆಗಲೀ ಫಿಕ್ಸ್ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ಕುಡಿಯುವ ನೀರಿನ ಯೋಜನೆ ಬಗ್ಗೆ ಹೇಳುವುದಾದರೆ ನಮ್ಮ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ಇದೆ. ನಮ್ಮ ಮಾನ್ಯ ಮಂತ್ರಿಗಳು ಕುಡಿಯುವ ನೀರಿನ ಸಂಬಂಧವಾಗಿ ೨೭ ನಗರಗಳಿಗೆ ಹೆಚ್ಚು ನೀರನ್ನು ಒದಗಿಸುವ ಬಗ್ಗೆ ಯೋಜನೆಯನ್ನು ಏನು ಹಾಕಿದ್ದಾರೆ ಇದು ಬಹಳ ಹೆಮ್ಮೆ ಪಡುವಂತಹ ಸುದ್ದಿ. ಇದಕ್ಕೋಸ್ಕರ ೧೫೫ ಕೋಟಿ ರೂಪಾಯಿಗಳನ್ನು ಇದಕ್ಕೆ ಇಟ್ಟಿದ್ದೇವೆಂದು ಹೇಳಿದ್ದಾರೆ. ಇದು ಹೆಮ್ಮೆ ಪಡುವಂತಹ ವಿಚಾರವಾಗಿದೆ. ಯುತ್ ಇನ್ ರೂರಲ್ ಏರಿಯಾಸ್ ಎಕ್ಸಿಬಿಟ್ ಲಾಟ್ ಆಫ್ ಟ್ಯಾಲೆಂಟ್‌ಗೋಸ್ಕರ ಎನ್‌ಕರೇಜ್ ಮಾಡುತ್ತಿದ್ದೇವೆಂದು ಹೇಳಿದ್ದಾರೆ. ಇದರ ಸಹಾಯಕ್ಕೋಸ್ಕರ ವಾಲೆಂಟರಿ ಆರ್ಗನೈಸೇಷನ್‌ಗಳು ಬಂದಾಗ ಮಾತ್ರ ಇದು ಸಾಧ್ಯವಾಗುತ್ತದೆ. ಇನ್ನು ಮಂಡಲ ಪಂಚಾಯತಿಯಲ್ಲಿ

ಹಲವಾರು ಯೋಜನೆಗಳಿಗೋಸ್ಕರವಾಗಿ ಹಣವನ್ನು ಕೊಡುತ್ತಾರೆ ಆದರೆ ಯೂತ್ ಕ್ಲಬ್ ಡೆವಲಪ್ ಮೆಂಟ್‌ಗೋಸ್ಕರ ಹಣವಿಲ್ಲವೆಂದು ಹೇಳಿದರೆ ಅದು ಬಹಳ ವಿಷಾದವಾಗುತ್ತದೆ. ಇಂತಹ ಕಾರ್ಯಕ್ರಮ ಗಳನ್ನು ಕೇವಲ ಸರಕಾರ ಮಾಡುವುದು ಅಲ್ಲ, ಮಂಡಲ ಪಂಚಾಯತಿ ಕೂಡ ಇದರಲ್ಲಿ ಆಸಕ್ತಿ ವಹಿಸಬೇಕು. ಯುವಕರಿಗೆ ಅಲ್ಲಿ ಸೋಷಿಯಲ್ ಕ್ಲಬ್ಸ್ ಆಗಲೀ ಲೈಬ್ರರೀಸ್ ಆಗಲೀ ಇನ್ನು ಇತರ ಯಾವುದೇ ವ್ಯವಸ್ಥೆಯನ್ನು ತಂದು ಯುವಕರಿಗೆ ಪ್ರೋತ್ಸಾಹ ಕೊಡಬೇಕು. ಇಂತಹ ಸಂಸ್ಥೆಗಳಿಗೆ ಮಂಡಲ ಪಂಚಾಯತಿಯವರು ಹೆಚ್ಚಿನ ಪ್ರೋತ್ಸಾಹ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ನಾನು ಕೊನೆಯದಾಗಿ ಒಂದು ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ. ನಮ್ಮ ರಾಜ್ಯ ಸಾಕಷ್ಟು ಪ್ರವಾಸಿಗರನ್ನು ಆಕರ್ಷಣೆ ಮಾಡತಕ್ಕ ರಾಜ್ಯವಾಗಿದೆ. ಇದಕ್ಕೆ ತನ್ನದೇ ಆದಂಥ ಒಂದು ಪರಂಪರೆ ಹಾಗೂ ಇತಿಹಾಸ ಇದೆ. ಇಲ್ಲಿ ಗುಡಿ ಗುಂಡಾರಗಳಿವೆ, ಸಾಕಷ್ಟು ಪ್ರಾಚೀನ ಸ್ಮಾರಕಗಳಿವೆ, ಅರಮನೆಗಳಿವೆ, ಇದಕ್ಕಾಗಿ ಜಪಾನಿನ ಒಂದು ವಾಲಂಟರಿ ಆರ್ಗನೈಸೇಷನ್ ಸ್ವತಃ ಮುಂದೆ ಬಂದು ೨೦೦ ಕೋಟಿ ರೂಪಾಯಿಗಳನ್ನು ನಮ್ಮ ರಾಜ್ಯಕ್ಕೆ ಕೊಡುವಾಗ ನಾವು ನಮ್ಮ ಭಾಗದ ೨೦ ಪರ್ಸೆಂಟ್ ಷೇರನ್ನು ಕೊಡಿ ಎಂದು ಅವರು ಕೇಳಿದಾಗ ಕೇವಲ ೨೦ ಕೋಟಿ ರೂಪಾಯಿಗಳನ್ನು ಕೊಡತಕ್ಕ ತೀರ್ಮಾನವನ್ನು ಮಾಡಿದರೆ ಅದು ಸರಿಯಾಗುತ್ತದೆಯೇ ? ಇದನ್ನು ಎಲ್ಲರೂ ಯೋಚನೆ ಮಾಡಬೇಕು. ನಾವು ಬೇರೆ ಸರ್ಕಾರದಿಂದ ನಮಗೆ ನೂರು ಕೋಟಿ ರೂಪಾಯಿ ಲಾಭವಾಗುತ್ತದೆಂದರೆ ನಾವು ೨೦ ಕೋಟಿ ರೂಪಾಯಿಗಳನ್ನು ಏತಕ್ಕೆ ಕೊಡಬಾರದು ಎಂದು ನಾವು ವಿಚಾರ ಮಾಡಬೇಕಾಗುತ್ತದೆ. ನಮ್ಮ ಷೇರು ಹಣವನ್ನು ಕೊಟ್ಟರೆ ತನ್ಮೂಲಕ ನಮ್ಮ ಭಾಗದ ರಸ್ತೆಗಳ ರಿಪೇರಿ ಆಗುತ್ತದೆ, ಪ್ರವಾಸಿಗರನ್ನು ಆಕರ್ಷಣೆ ಮಾಡಬಹುದು. ಅವರಿಗೆ ಬೇಕಾದಂಥ ಹೋಟೆಲ್‌ಗಳನ್ನು ಕಟ್ಟಬಹುದು. ಬೇಲೂರು, ಹಳೇಬೀಡುಗಳಲ್ಲಿ ಬಿದ್ದು ಹೋಗುತ್ತಿರತಕ್ಕ ಹಲವಾರು ಶಿಲೆಗಳನ್ನು ರಿಪೇರಿ ಮಾಡಿಸಬಹುದು. ನಮ್ಮ ಕರ್ನಾಟಕದ ಸಿರಿ ಸಂಪತ್ತು ಏನಿದೆ ಇದನ್ನು ನಾವು ಉಳಿಸಿಕೊಂಡು ಹೋಗುವುದರಲ್ಲಿ ಹಿಂದಾಲೋಚನೆ ಮಾಡಬಾರದೆಂದು ಈ ಬಗ್ಗೆ ಹೇಳಲಿಕ್ಕೆ ಇಚ್ಛಿಸುತ್ತೇನೆ. ನಮ್ಮ ಸರ್ಕಾರ ಈ ದಿಸೆಯಲ್ಲಿ ಇನ್ನೂ ಹೆಚ್ಚಿನ ಹಣವನ್ನೊದಗಿಸಬೇಕೆಂದು ನಾನು ಬಹಳ ಸ್ಪಷ್ಟವಾಗಿ ಹೇಳುತ್ತಿದ್ದೇನೆ.

ಇನ್ನು ಕೊನೆಯದಾಗಿ ಗ್ರಾನೈಟ್ ಮತ್ತು ಇನ್ನುಳಿದ ಸಂಪನ್ಮೂಲಗಳನ್ನು ಯಾವರೀತಿ ಅಟ್ರ್ಯಾಕ್ಟ್ ಮಾಡಬೇಕೆಂಬುದು ಬಹಳ ಮುಖ್ಯ. ಈ ಹಲವಾರು ಸಂಪನ್ಮೂಲಗಳನ್ನು ಉಳಿಸಿಕೊಳ್ಳುವ ಮೂಲಕ ನಮ್ಮ ಆರ್ಥಿಕ ಪರಿಸ್ಥಿತಿಯನ್ನು ನಾವು ಸುಧಾರಿಸಿಕೊಳ್ಳಬಹುದು. ಇವತ್ತು ನಮ್ಮ ಕಾಯಿದೆಗಳ ಚೌಕಟ್ಟು ಹೇಗಿದೆ ಎಂದರೆ ಬಹಳ ಬಿಗಿಯಾಗಿವೆ. ಉದಾಹರಣೆಗೆ ಹೇಳುವುದಾದರೆ ಇವತ್ತು ಲ್ಯಾಂಡ್‌ನ್ನು ಲೀಸ್‌ಗೆ ಕೇಳಿದರೆ ೩ ವರ್ಷಗಳವರೆಗೆ ಕಾಯಬೇಕಾಗುತ್ತದೆ. ಆದರೆ ಲೀಸ್‌ಗೆ ತೆಗೆದುಕೊಳ್ಳತಕ್ಕ ವ್ಯಕ್ತಿ ಏನು ಯೋಚನೆ ಮಾಡುತ್ತಾನೆಂದರೆ. His interest will be to invest money and to get back profit soon. ಇದನ್ನು ತಾವು ಬೇಗನೆ ಡೀ-ಸೆಂಟ್ರಲೈಸ್ ಮಾಡಿ, ಜಿಲ್ಲಾ ಕೇಂದ್ರದಲ್ಲಿ ಲೀಸಿಂಗ್ ಅಥಾರಿಟಿಗೆ ಕೊಡಿ. ಅದಕ್ಕಿಂತ ಹೆಚ್ಚಿಗೆ ಆದರೆ ಡಿವಿಜನಲ್ ಅಥಾರಿಟಿಗೆ ಕೊಡಿ. ಆಗ ಲೀಸಿಂಗ್ ಕೂಡ ಸರಳವಾಗುತ್ತದೆ. ನಮ್ಮ ಕಾಯಿದೆಯನ್ನು ತಿದ್ದುಪಡಿ ಮಾಡಿ ಚೆಕ್‌ಪೋಸ್ಟ್‌ಗಳನ್ನು ಹಾಕಿಕೊಳ್ಳಿ. ಇದರಿಂದ ನಮ್ಮ ಸಂಪನ್ಮೂಲಗಳನ್ನು ಹೆಚ್ಚು ಮಾಡಿಕೊಳ್ಳಬಹುದು.

ಇದೇ ರೀತಿ ನಮ್ಮ ಅರಣ್ಯ ಸಂಪನ್ಮೂಲಗಳನ್ನೂ ಹೆಚ್ಚು ಮಾಡಿಕೊಳ್ಳಬಹುದು. ಇವತ್ತು ಗಿಡಗಂಟೆಗಳನ್ನು ಹೇಳದೇ ಕೇಳದೇ ಕಡಿಯುತ್ತಿದ್ದಾರೆ. ಅದನ್ನು ಕಳ್ಳ ಸಾಗಾಣಿಕೆ ಮಾಡುತ್ತಿದ್ದಾರೆ. ಇವತ್ತು ಒಂದು ಕ್ಯೂಬಿಕ್ ಫೀಟ್ ಟೀಕ್ ವುಡ್‌ಗೆ ೫೮೦ ರೂ. ಬೆಲೆ ಇದೆ. ನಮ್ಮಲ್ಲಿ ಇಷ್ಟೊಂದು ಸಂಪನ್ಮೂಲವಿರುವುದರಿಂದ, ನಮ್ಮಲ್ಲಿ ಇಷ್ಟೊಂದು ಕಾಡು ಮತ್ತಿತರ ಸಂಪನ್ಮೂಲ ಇರುವುದರಿಂದ ಇವುಗಳನ್ನು ನಾವು ಕಷ್ಟಪಟ್ಟು ಉಳಿಸಿಕೊಳ್ಳಬೇಕು. ಉದಾಹರಣೆಗೆ ಹೇಳುವುದಾದರೆ ವಿಜಯನಗರ ಸ್ಟೀಲ್ ಪ್ಲಾಂಟ್. Vijayanagar Steel Plant—why are we not okaying that Vijayanagar Steel Plant ? ನಮ್ಮಲ್ಲಿ ಸಾಕಷ್ಟು ಮಿನರಲ್ ಓರ್ ಇದೆ. ನಮ್ಮ ಜನರು ಕೆಲಸವಿಲ್ಲದೆ ನಿರುದ್ಯೋಗಿಗಳಾಗಿದ್ದಾರೆ ಅವರು ದುಡಿಯಲಿಕ್ಕೆ ಅವಕಾಶವನ್ನು ಮಾಡಿಕೊಟ್ಟರೆ ನಮ್ಮಲ್ಲಿ ಹೆಚ್ಚಿನ ಸಂಪನ್ಮೂಲಗಳನ್ನು ಸಂಪಾದನೆ ಮಾಡಿಕೊಳ್ಳಬಹುದು. It will reduce unemployment. Unemployment is in two-folds. Literate and Illiterate unemployment. ಹೀಗೆ ೨ ರೀತಿ ಇದೆ. ಲಿಟರೇಟ್ಸ್‌ಗೆ ಯಾವ ರೀತಿ ಉದ್ಯೋಗವನ್ನು ಕೊಡಬಹುದೋ ಅದೇ ರೀತಿ ರೋಜ್‌ಗಾರ್ ಯೋಜನೆಯಲ್ಲಿ ಇಲ್ಲಿಟರೇಟ್ಸ್‌ಗೂ ಉದ್ಯೋಗವನ್ನು ಕೊಡಬಹುದು. ಆದರೆ ಲಿಟರೇಟ್ಸ್‌ಗೆ ರೋಜ್‌ಗಾರ್ ಯೋಜನೆಯಲ್ಲಿ ಉದ್ಯೋಗವನ್ನು ಕೊಡುವುದಕ್ಕೆ ಸಾಧ್ಯವೇ ಎಂಬುದನ್ನು ಸರ್ಕಾರ ಯೋಚನೆ ಮಾಡಬೇಕು. I urge the Government and pray the Hon. Minister concerned. ನಾವು ಈ ಎಲ್ಲ ದೃಷ್ಟಿ

ಕೋನಗಳಿಂದಲೂ ವಿಚಾರ ಮಾಡಿ ಸರ್ಕಾರದ ಘನತೆ ಗೌರವಗಳನ್ನು ಉಳಿಸಿಕೊಂಡು ಹೋಗಬೇಕಾದ ಶಕ್ತಿ ನಮ್ಮಲ್ಲಿದೆ. ಒಬ್ಬರು ಮಾನ್ಯ ಹಿರಿಯ ಸದಸ್ಯರು ಹೇಳಿದರು, ನಮ್ಮ ರಾಜ್ಯಪಾಲರು ೨ ಸಾರಿ ಉಭಯ ಸದನಗಳನ್ನುದ್ದೇಶಿಸಿ ಭಾಷಣ ಮಾಡಿದ್ದು ಸದನದ ಇತಿಹಾಸದಲ್ಲೇ ಇದು ಮೊದಲನೇ ಸಾರಿ ಅಂತ. ಸ್ವಾಮಿ ಹಿರಿಯರಾದಂಥ ಮಾನ್ಯ ರಾಜ್ಯಪಾಲರು ಪದೇ ಪದೇ ನಮ್ಮ ಉಭಯ ಸದನಗಳನ್ನುದ್ದೇಶಿಸಿ ಭಾಷಣ ಮಾಡಿದರೆ, ನಮ್ಮ ಸಭೆಯ ವಿಚಾರಧಾರೆಯ ಬಗ್ಗೆ ಅವರ ಒಳ್ಳೆಯ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆಂದರೆ ಎಲ್ಲರೂ ಸಂತೋಷಪಡಬೇಕಾದ ಅಂಶವೆಂದು ತಿಳಿಸಿ ಅವರಿಗೆ ನನ್ನ ವಂದನೆಗಳನ್ನರ್ಪಿಸಿ ತಮಗೆ ನನ್ನ ನಮನಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ),—ಸನ್ಮಾನ್ಯ ಸಭಾಧ್ಯಕ್ಷರೇ ಮಾನ್ಯ ರಾಜ್ಯಪಾಲರ ಭಾಷಣದ ಬಗ್ಗೆ ಕೆಲವು ಪ್ರತಿಕ್ರಿಯೆಗಳನ್ನು ಮಾತ್ರ ಈ ಸಂದರ್ಭದಲ್ಲಿ ಸೂಚಿಸಬಯಸುತ್ತೇನೆ. ವಿಶೇಷವಾಗಿ ಈ ಸಭೆಯಲ್ಲಿ ರಾಜ್ಯಪಾಲರ ಭಾಷಣದ ಬಗ್ಗೆ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತಾ ಎಲ್ಲ ಸದಸ್ಯರು ರೈತರ ಚಳುವಳಿಯ ಬಗ್ಗೆ ಸಾಕಷ್ಟು ಮಾತನಾಡಿದ್ದಾರೆ. ನಾನು ಆ ಬಗ್ಗೆ ಹೆಚ್ಚಿಗೆ ಹೋಗದೆ ಈ ರಾಜ್ಯದಲ್ಲಿ ಸಣ್ಣ ಕೈಗಾರಿಕೋದ್ಯಮಿಗಳ ಬಗ್ಗೆ ಅವರು ಯಾವ ರೀತಿ ಕಷ್ಟ ಅನುಭವಿಸುತ್ತಿದ್ದಾರೆ ಎನ್ನುವ ಬಗ್ಗೆ ಈ ಸಂದರ್ಭದಲ್ಲಿ ನೆನಪು ಮಾಡಲಿಕ್ಕೆ ಇಷ್ಟಪಡುತ್ತೇನೆ. ಯಾವುದೇ ಒಬ್ಬ ಸಣ್ಣ ಕೈಗಾರಿಕೋದ್ಯಮಿ ತನ್ನ ಉದ್ಯೋಗ ಪ್ರಾರಂಭ ಮಾಡಲಿಕ್ಕೆ ಮುಂಚೆ ಟೆಂಪರರಿ ಪರ್ಮಿಷನ್ ತೆಗೆದುಕೊಳ್ಳುವುದಕ್ಕೆ ಇಷ್ಟಪಡುತ್ತಾನೆ. ಅಲ್ಲಿಂದ ಹಿಡಿದು ಆತನು ಎಲ್ಲ ಆಫೀಸುಗಳಿಗೆ ಹೋಗಬೇಕು. ಆ ಆಫೀಸುಗಳಲ್ಲಿ ನಿನಗೆ ಸಿಂಗಲ್‌ವಿಂಡೋ ಸಿಸ್ಟಮ್‌ನಿಂದ ಎಲ್ಲ ರೀತಿಯ ಅನುಕೂಲಗಳನ್ನು ಮಾಡಿಕೊಡುತ್ತೇವೆಂದು ಹೇಳುತ್ತಾರೆ. ಆದರೆ ಪ್ರತಿಯೊಂದಕ್ಕೂ ಪರ್ಮಿಷನ್ ತೆಗೆದುಕೊಳ್ಳಬೇಕಾದರೂ ಕೂಡ ಎಷ್ಟರಮಟ್ಟಿಗೆ ಕಷ್ಟಪಟ್ಟುಕೊಂಡು ಹೋಗುತ್ತಾನೆಂದರೆ ಅದನ್ನು ಹೇಳಲಿಕ್ಕೆ ಅಸಾಧ್ಯ. ಪ್ರಾರಂಭದಲ್ಲಿ ಅವನಿಗೆ ಹೇಳುತ್ತಾರೆ, ನಿನಗೆ ಸಬ್ಸಿಡಿಯನ್ನು ಕೊಡಿಸುತ್ತೇನೆಂದು. ಆ ಸಬ್ಸಿಡಿಯನ್ನು ಕೊಡಬೇಕಾದರೆ ಪ್ರಾಜೆಕ್ಟ್ ರಿಪೋರ್ಟ್‌ನ್ನು ತೋರಿಸಬೇಕೆಂದು ಹೇಳುತ್ತಾರೆ, ಈ ಪ್ರಾಜೆಕ್ಟ್ ರಿಪೋರ್ಟ್ ತಯಾರಿಸಿ ಅಲ್ಲಿಂದ ಕೆಲಸ ಶುರು ಮಾಡಲಿಕ್ಕೆ ಹೋಗುತ್ತಾನೆ. ಆದರೆ ಸರ್ಕಾರ ಕಳೆದ ೪-೫ ವರ್ಷಗಳಿಂದ ಪ್ರಾರಂಭ ಮಾಡಿದಂಥ ಅನೇಕ ಸಣ್ಣ ಸಣ್ಣ ಕೈಗಾರಿಕೋದ್ಯಮಿಗಳಿಗೆ ಇದುವರೆವಿಗೂ ಯಾವ ಸಬ್‌ಸಿಡಿಯನ್ನು ಬಿಡುಗಡೆ ಮಾಡಿಲ್ಲ. ಇದು ತಮಗೂ ಗೊತ್ತಿದೆ. ಪ್ರಾಜೆಕ್ಟ್ ರಿಪೋರ್ಟ್‌ನಿಂದ ಪ್ರಾರಂಭ ಮಾಡುವಂಥ ಉದ್ಯಮಿ ಆ ಒಂದು ಸಬ್ಸಿಡಿಯನ್ನೇ ನೆಚ್ಚಿಕೊಂಡು ಉದ್ಯಮವನ್ನು ಪ್ರಾರಂಭ ಮಾಡುವ ಉದ್ಯೋಗಿಗೆ ಸಬ್‌ಸಿಡಿ ಸಿಗದಿದ್ದರೆ ಸಾಧಾರಣವಾಗಿ ಆತನ ಉದ್ಯೋಗ ಪೂರ್ಣವಾಗಿ ನಾಶವಾಗುವ ಸ್ಥಿತಿಯನ್ನು ನಾವು ಇಂದು ಕಣ್ಣಾರೆ ನೋಡುತ್ತಿದ್ದೇವೆ. ಇದಕ್ಕೆಲ್ಲಾ ಈ ಸರ್ಕಾರವೇ ಕಾರಣವೆಂದು ಹೇಳಬೇಕಾಗುತ್ತದೆ ಸರ್ಕಾರದವರು ಇದನ್ನು ಅರ್ಥಮಾಡಿಕೊಳ್ಳಬೇಕು. ಸಿಂಗಲ್‌ವಿಂಡೋ ಸಿಸ್ಟಮ್ ಮೂಲಕ ಸಣ್ಣ ಕೈಗಾರಿಕೆಗಳನ್ನು ಉದ್ಧಾರ ಮಾಡುತ್ತೇವೆಂದು ಹೇಳುವ ಸರ್ಕಾರ ವರ್ಕಿಂಗ್ ಕ್ಯಾಪಿಟಲ್ ಅನ್ನು ಕೊನೆಯವರೆಗೂ ಬಿಡುಗಡೆ ಮಾಡದಿರುವುದನ್ನು ನಾವು ಇಂದು ನೋಡುತ್ತಿದ್ದೇವೆ ಇವರು ಪ್ರಾರಂಭದಲ್ಲಿ ಪಲ್ಯೂಷನ್ ಬೋರ್ಡ್‌ಗೆ ಹೋಗಬೇಕೆಂದು ಹೇಳುತ್ತಾರೆ. ನಂತರ ಕೆ ಇ.ಬಿ ಪರ್ಮಿಷನ್ ತೆಗೆದುಕೊಳ್ಳಬೇಕೆಂದು ಹೇಳುತ್ತಾರೆ ಕೆ. ಇ ಬಿ.ನಲ್ಲಿ ಪರ್ಮಿಷನ್ ತೆಗೆದುಕೊಳ್ಳಬೇಕೆಂದರೆ ನೂರಾರು ಸಮಸ್ಯೆಗಳನ್ನು ಮುಂದಿಡುತ್ತಾರೆ, ಈ ಒಂದು ಸಣ್ಣ ಕೈಗಾರಿಕೋದ್ಯಮಿ ಕೂಡ ಪಲ್ಯೂಷನ್ ಬೋರ್ಡ್ ಮುಂದೆ ಹೋಗಬೇಕೆಂದು ಹೇಳುತ್ತಾರೆ ಆದರೆ ಬೆಂಗಳೂರು ನಗರದಲ್ಲಿ ನಡೆಯುತ್ತಿರುವ ದೊಡ್ಡ ದೊಡ್ಡ ಇಂಡಸ್ಟ್ರೀಸ್‌ಗಳಿಗೆ ಪಲ್ಯೂಷನ್ ಬೋರ್ಡಿನವರು ವಿಶೇಷವಾದ ಬೆಂಬಲವನ್ನು ಕೊಡುತ್ತಿದ್ದಾರೆ. ಅದನ್ನು ಬೇಕಾದರೆ ತೋರಿಸಲಿಕ್ಕೆ ನಾನು ಇಷ್ಟಪಡುತ್ತೇನೆ, ಶಿವಮೊಗ್ಗದಲ್ಲಿ ೧೩ ಕಿಲೋಮೀಟರ್ ದೂರದಲ್ಲಿ ಕೋಡೇಸ್ ಫ್ಯಾಕ್ಟರಿ ಇದೆ. ಈ ಫ್ಯಾಕ್ಟರಿಯಿಂದ ಹೊರಗೆ ಬರುತ್ತಿರತಕ್ಕಂಥ ನೀರು ಸುಮಾರು ೬೦ ಎಕರೆಗಳಷ್ಟು ಜಮೀನಿಗೆ ಹೋಗುತ್ತಿದೆ, ಪೂರ್ಣವಾಗಿ ಆ ನೀರು ಹೋಗುತ್ತಿರುವುದರಿಂದ ಸುಮಾರು ಐದು ವರ್ಷಗಳಿಂದ ೬೦ ಎಕರೆ ಜಮೀನಿನಲ್ಲಿ ಬೆಳೆದ ಬೆಳೆ ಸಂಪೂರ್ಣವಾಗಿ ನಾಶವಾಗುತ್ತಿದೆ, ಈ ನೀರು ಸರಿಯಿಲ್ಲವೆಂದು ಸಂಬಂಧಪಟ್ಟ ಇಲಾಖೆಯವರಿಗೆ ತಿಳಿಸಿದ್ದಾಯಿತು. ಜಿಲ್ಲಾಧಿಕಾರಿಗಳ ಮುಖಾಂತರ ಶಿವಮೊಗ್ಗ ಜಿಲ್ಲೆಯ ರೈತ ಸಂಘದ ಪ್ರತಿನಿಧಿಗಳು ಹಾಗೂ ಪ್ರಮುಖರು ಡಿ.ಸಿ.ಯವರಿಗೆ ಮನವಿಯನ್ನು ಸಲ್ಲಿಸಿದರು. ಅಲ್ಲಿಂದ ಬೆಂಗಳೂರು ಪಲ್ಯೂಷನ್ ಬೋರ್ಡಿಗೆ ಪತ್ರ ಬಂದಿದೆ, ಈ ನೀರು ಬೆಳೆಗೆ ಸರಿಯಿಲ್ಲವೆಂದು ಪಲ್ಯೂಷನ್ ಬೋರ್ಡ್‌ನವರು ಅಂತಿಮ ತೀರ್ಮಾನವನ್ನು ೫ ವರ್ಷಗಳಾದರೂ ಇನ್ನೂ ಕೊಟ್ಟಿಲ್ಲ. ಈ ಬಗ್ಗೆ ನಮ್ಮ ರೈತ ಯುವಕರು ಬೆಂಗಳೂರಿಗೆ ಅಲೆದು ಅಲೆದು ಸಾಕಾಗಿದ್ದಾರೆ. ಆದರೆ ಅದರಿಂದ ಏನೂ ಪ್ರಯೋಜನವಾಗಿಲ್ಲ ಪಲ್ಯೂಷನ್ ಬೋರ್ಡ್‌ನವರಿಗೂ ಕೋಡೇಸ್ ಕಂಪನಿಯವರಿಗೂ ಹಾಗೂ ಈ ಕೋಡೇಸ್ ಕಂಪನಿಗೂ ಮತ್ತು ಸರ್ಕಾರಕ್ಕೂ ಏನೇನು ಸಂಬಂಧವಿದೆಯೋ ನನಗೆ ಅರ್ಥವಾಗುತ್ತಿಲ್ಲ. ಸುಮಾರು ಎರಡು ಸಾವಿರ ಜನರು ಈ ಒಂದು ಕೋಡೇಸ್ ಕಂಪನಿಯ ನೀರಿನಿಂದ ತೊಂದರೆಯನ್ನು ಪ್ರತಿನಿತ್ಯ ಅನುಭವಿಸುತ್ತಿದ್ದಾರೆ ೬೦ ಎಕರೆ

ಜಮೀನಿನಲ್ಲಿ ಬೆಳೆ ನಾಶವಾಗುತ್ತಿದೆ. ಈ ದಿಕ್ಕಿನಲ್ಲಿ ಸರ್ಕಾರದವರೂ ಯಾವ ಪರಿಹಾರವನ್ನು ಇವತ್ತಿನ ವರೆಗೂ ಕೊಟ್ಟಿಲ್ಲವೆಂಬುದನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

ಈ ರೀತಿ ದೊಡ್ಡ ದೊಡ್ಡ ಕಂಪನಿಗಳಿಗೆ ಪರ್ಮಿಷನ್ ಇಲ್ಲದಿದ್ದರೂ ಸಹ ಸಣ್ಣ ಸಣ್ಣ ಉದ್ಯಮಗಳಿಗೆ ಪರ್ಮಿಷನ್ ಕೊಡುವಲ್ಲಿ ತೊಂದರೆ ಕೊಡುತ್ತಿದ್ದಾರೆಂದು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಪ್ರಾವಿಜನಲ್ ಸರ್ಟಿಫಿಕೇಟ್‌ನಿಂದ ಪರ್ಮನೆಂಟ್ ರಿಜಿಸ್ಟ್ರೇಷನ್ ಸರ್ಟಿಫಿಕೇಟ್ ತೆಗೆದುಕೊಳ್ಳುವವರಿಗೆ ಸಣ್ಣ ಕೈಗಾರಿಕೋದ್ಯಮಿ ಎಷ್ಟರಮಟ್ಟಿಗೆ ಓಡಾಡುತ್ತಿದ್ದಾರೆಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಪ್ರತಿಯೊಂದು ಕಡೆ ಲಂಚದ ಹಾವಳಿ ಜಾಸ್ತಿಯಾಗಿದೆ. ಅವನಿಗೆ ಓಡಾಡುವುದಕ್ಕೆ ಸಮಯ ಇಲ್ಲ. ಈ ರೀತಿ ಸಣ್ಣ ಕೈಗಾರಿಕೆ ಮಾಡುವವನು ಅವನೇ ಸಣ್ಣದಾಗಿ ಹೋಗುತ್ತಿದ್ದಾನೆ. ಈ ಅಂಶವನ್ನು ಸಹ ಸರ್ಕಾರ ಗಮನಿಸಬೇಕು. ಈ ದಿಕ್ಕಿನಲ್ಲಿ ಸಣ್ಣ ಕೈಗಾರಿಕೆಗಳು ಅಭಿವೃದ್ಧಿ ಆಗಬೇಕೆಂಬ ಅಪೇಕ್ಷೆಪಟ್ಟಿರುವಂತಹ ಸರ್ಕಾರ ನಿಜಕ್ಕೂ ಸಣ್ಣ ಕೈಗಾರಿಕೋದ್ಯಮಕ್ಕೆ ಅನುಕೂಲವಾಗಬೇಕೆಂದರೆ ಈ ಸಿಂಗಲ್ ವಿಂಡೋ ಸಿಸ್ಟಂ ಮಾಡಬೇಕೆಂದು ಏನು ಅಪೇಕ್ಷಿಸಿದ್ದಾರೆ ಆ ದಿಕ್ಕಿನಲ್ಲಿ ಪೂರ್ಣ ಹೆಜ್ಜೆ ಹಾಕಿದರೆ ಮಾತ್ರ ಅವರ ಅಪೇಕ್ಷೆ ಈಡೇರಬಹುದೆಂಬ ನಂಬಿಕೆ ನನ್ನಲ್ಲಿದೆ. ಇನ್ನು ಕರ್ನಾಟಕ ರಾಜ್ಯದ ವಿದ್ಯಾರ್ಥಿಗಳ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಯಾವುದೇ ಅಂಶ ಇಲ್ಲದಿರುವುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಏತಕ್ಕೆಂದರೆ ಇಡೀ ದೇಶದಲ್ಲಿ ಈ ವಿದ್ಯಾರ್ಥಿ ವೃಂದ ತನ್ನ ಮತದಾನದ ಮುಖಾಂತರ ಇಡೀ ರಾಜ್ಯದ ಹಾಗೂ ದೇಶದ ಚಿತ್ರವನ್ನು ಬದಲಾಯಿಸಿರುವಂತಹ ಈ ಸಂದರ್ಭದಲ್ಲಿ ಕರ್ನಾಟಕದಲ್ಲಿ ಮಾತ್ರ ವಿದ್ಯಾರ್ಥಿ ಸಂಘಗಳನ್ನು ರಚನೆ ಮಾಡಬೇಕೆಂಬ ಬಗ್ಗೆ ಕಟ್ಟಾಜ್ಞೆ ಸರ್ಕಾರದಿಂದ ಬಂದಿಲ್ಲ. ಇದು ಏತಕ್ಕೆ ಎಂದು ನನಗೆ ಗೊತ್ತಿಲ್ಲ. ಕರ್ನಾಟಕದಲ್ಲಿ ಮಾತ್ರ ವಿಶ್ವ ವಿದ್ಯಾನಿಲಯದಲ್ಲಿ ವಿದ್ಯಾರ್ಥಿಗಳ ಸಂಘ ಇದುವರೆಗೆ ಇಲ್ಲ. ಅದೇ ಬೇರೆ ಬೇರೆ ರಾಜ್ಯಗಳಲ್ಲಿ ಕಾನೂನು ಪ್ರಕಾರ ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಸಂಘದ ಚುನಾವಣೆಗಳು ನಡೆಯುತ್ತಿವೆ. ಈ ದಿಕ್ಕಿನಲ್ಲಿ ಗಮನ ಹರಿಸಿ ರಾಜ್ಯ ಸರ್ಕಾರ ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿ ಸಂಘವನ್ನು ಪ್ರಾರಂಭಿಸಬೇಕು. ಕೋಡ್ ಆಫ್ ಕಾಂಡಕ್ಟ್ ನೀತಿಯನ್ನು ಜಾರಿಗೆ ತರಬೇಕೆಂದು ಒತ್ತಾಯಿಸುತ್ತೇನೆ. ೧೯೭೬ರಲ್ಲಿ ಹೊರಡಿಸಿದ ಕರ್ನಾಟಕ ಯೂನಿವರ್ಸಿಟಿ ಆಕ್ಟ್‌ನಲ್ಲಿ ಯೂನಿವರ್ಸಿಟಿ ಸೆನೆಟ್‌ಗೆ ಕೂಡ ವಿದ್ಯಾರ್ಥಿ ಪ್ರಾತಿನಿಧ್ಯ ಇರಬೇಕೆಂದು ಗೊತ್ತುಪಡಿಸಲಾಗಿದ್ದರೂ ಸಹ ಮಂಗಳೂರು ವಿಶ್ವವಿದ್ಯಾನಿಲಯವನ್ನು ಬಿಟ್ಟು ಕರ್ನಾಟಕ ರಾಜ್ಯದ ಇತರ ವಿಶ್ವವಿದ್ಯಾನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಆಯಾ ಸೆನೆಟ್‌ನಲ್ಲಿ ಪ್ರಾತಿನಿಧ್ಯವನ್ನು ಕೊಟ್ಟಿಲ್ಲ. ಈ ದಿಕ್ಕಿನಲ್ಲಿ ಸರ್ಕಾರ ಗಮನಹರಿಸಬೇಕು. ಏಕೆಂದರೆ ಇತ್ತೀಚಿನ ದಿನಗಳಲ್ಲಿ ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ. ಪ್ರತಿದಿನ ಪ್ರಶ್ನೆ ಪತ್ರಿಕೆಗಳು ಯಾವುಯಾವುದೋ ಮುಖಾಂತರ ಬಯಲಾಗುತ್ತಿದೆ. ಈ ಬಗ್ಗೆ ಪ್ರಶ್ನೆ ಪತ್ರಿಕೆಗಳ ಒಂದು ಕಟ್ಟೇ ನನ್ನ ಹತ್ತಿರ ಇದೆ. ತಾವು ಅಪೇಕ್ಷೆಪಟ್ಟರೆ ಜೆರಾಕ್ಸ್...

ಶ್ರೀ ಕೆ. ಹೆಚ್. ರಂಗನಾಥ್.—ಯಾವ ವರ್ಷದ್ದು, ಯಾವ ಪರೀಕ್ಷೆಯದು ?

ಶ್ರೀ ಕೆ. ಎಸ್. ಈಶ್ವರಪ್ಪ.—ಇದೇ ವರ್ಷದ (ಅನ್ಯುಯಲ್ ಎಕ್ಸಾಮಿನೇಷನ್ ಮಾರ್ಚಿ ೧೯೯೦) ೮ನೇ ತರಗತಿಯದು.

ಶ್ರೀ ಕೆ. ಹೆಚ್. ರಂಗನಾಥ್.—೮ನೇ ಸ್ಟ್ಯಾಂಡರ್ಡ್ ಕ್ಲಾಸ್ ಎಕ್ಸಾಮಿನೇಷನ್. ೭ನೇ ತರಗತಿಯ ಪರೀಕ್ಷೆಯನ್ನೇ ನಾವು ಪಬ್ಲಿಕ್ ಎಕ್ಸಾಮಿನೇಷನ್ ಮಾಡಿಲ್ಲ. ನಾವೆಲ್ಲ ಈ ಬಗ್ಗೆ ಆಟವಾಡುತ್ತಾ ಬಂದಿದ್ದೇವೆ. ಬೇಕು ಬೇಡ ಎಂದು ಮಾಡಿ ಮಕ್ಕಳನ್ನು ಈ ಪರಿಸ್ಥಿತಿಗೆ ತಂದು ಅಲ್ಲಿ ಏನಾದರೂ ಆದರೆ ನಾವೇ ಟೀಕೆ ಮಾಡುವ ಪರಿಸ್ಥಿತಿಗೆ ಬಂದಿದೆ. ೮ನೇ ತರಗತಿಯದು ಕ್ಲಾಸ್ ಎಕ್ಸಾಮಿನೇಷನ್. ಅಲ್ಲಿ ಏನಾದರು ಅನಾಹುತ ಆಗಿರಬಹುದು. ೭ನೇ ತರಗತಿಯದು ಕೂಡ ಪಬ್ಲಿಕ್ ಎಕ್ಸಾಮಿನೇಷನ್ ಅಲ್ಲ, ಅಲ್ಲಿ ಯಾವ ರೀತಿ ಆಗುತ್ತದೆಂದು ತಮಗೆ ಗೊತ್ತಿದೆ. ಈ ಬಗ್ಗೆ ಸಭೆಯ ಮುಂದೆ ವಿಚಾರವನ್ನು ತಂದು ಒಂದು ನಿರ್ಣಯಕ್ಕೆ ಬರೋಣ. ಯಾವ ರೀತಿ ಮಾಡಬೇಕೆಂಬುದನ್ನು ವಿಚಾರ ಮಾಡೋಣ. ಅವರ ವಿದ್ಯಾಭ್ಯಾಸ ಅವರ ಭವಿಷ್ಯದ ಹಾಗೂ ವಿದ್ಯಾಭ್ಯಾಸದ ಗುಣಮಟ್ಟದ ದೃಷ್ಟಿಯಿಂದ ಕಟ್ಟುನಿಟ್ಟಾಗಿ ವಿಚಾರ ಮಾಡೋಣ.

ಶ್ರೀ ಕೆ. ಎಸ್. ಈಶ್ವರಪ್ಪ.—ವಿದ್ಯಾರ್ಥಿ ಸಂಘಗಳು ರಚನೆ ಆದರೆ, ಅವರ ಕಷ್ಟಗಳು ಏನು ಎಂದು ತಮ್ಮ ಗಮನಕ್ಕೆ ತರುತ್ತಾರೆ. ವಿಶ್ವವಿದ್ಯಾನಿಲಯದವರು ವಿದ್ಯಾರ್ಥಿಗಳಿಗೆ ಪ್ರಾತಿನಿಧ್ಯ ಕೊಟ್ಟರೆ ಅವರ ಕಷ್ಟಗಳೇನೆಂಬುದನ್ನು ತಮ್ಮ ಮುಂದಿಡುತ್ತಾರೆ. ೮ನೇ ತರಗತಿ ಪರೀಕ್ಷೆಗೆ ಪಬ್ಲಿಕ್ ಎಕ್ಸಾಮಿನೇಷನ್ ಇಲ್ಲವೆಂದು ತಾವು ಹೇಳಿದಿರಿ. ಆದರೆ ರಸಾಯನಶಾಸ್ತ್ರದ ಪರೀಕ್ಷೆ ನಡೆದಿರುವ ಬಗ್ಗೆ ನಾನು ತಮ್ಮ ಗಮನಕ್ಕೆ ತರುತ್ತೇನೆ.

೪-೦೦ ಪಿ. ಎಂ.

ಇದು ಬೆಂಗಳೂರಿನಲ್ಲಿ ನಡೆದಿದೆ. ೨೬-೩-೯೦ರಂದು ಎಗಾಮಿನೇಷನ್ ನಡೆಯುವ ಸಂದರ್ಭದಲ್ಲಿ ಬೆಳಗ್ಗೆ ೯ ಘಂಟೆಗೆ ರಸಾಯನಶಾಸ್ತ್ರದ...

ಶ್ರೀ ಕೆ. ಎಚ್. ರಂಗನಾಥ್.—ಯಾವ ಕ್ಲಾಸ್ ರಸಾಯನ ಶಾಸ್ತ್ರ ? ಬಹಳ ಕ್ಲಾಸ್‌ನಲ್ಲಿ ರಸಾಯನಶಾಸ್ತ್ರ ಇದೆ. ಪಬ್ಲಿಕ್ ಎಗ್ಸಾಮಿನೇಷನ್ ಯಾವುದು ಹೇಳಿ.

ಶ್ರೀ ಕೆ. ಎಸ್. ಈಶ್ವರಪ್ಪ.—ಕೊಡುತ್ತೇನೆ.

ಛೇರ್ಮನ್.—ನೆಕ್ಸ್ಟ್ ತೆಗೆದುಕೊಳ್ಳಿ. ಮತ್ತೊಂದು ಪಾಯಿಂಟ್ ಟಚ್ ಮಾಡಿ.

ಶ್ರೀ ಕೆ. ಎಸ್. ಈಶ್ವರಪ್ಪ.—೨೨-೩-೯೦ರಲ್ಲಿ ಬೆಳಗ್ಗೆ ೭ ಘಂಟೆಗೆ ಇಬ್ಬರು ಪೋಷಕರು ಕೊಟ್ಟಂತೆ...

ಶ್ರೀ ಕೆ. ಎಚ್. ರಂಗನಾಥ್.—ಯಾವ ತರಗತಿ ?

ಶ್ರೀ ಕೆ. ಎಸ್. ಈಶ್ವರಪ್ಪ.—ಯಾವ ತರಗತಿಯೆಂದು ಎಂಬುದಿಲ್ಲ. ಫ್ರಂಟ್ ಪೇಜ್ ಇಲ್ಲ. ಉಳಿದಿದ್ದೆಲ್ಲಾ ಕೊಟ್ಟಿದ್ದಾರೆ. ಪಾರ್ಟ್-೧ರಲ್ಲಿ ೧೩ ನಂಬರ್‌ದ್ದು ಲೀಕ್ ಆಗಿದ್ದು ಇದೆ. ಪಾರ್ಟ್-೩ರಲ್ಲಿ ೨೪ ನಂಬರ್‌ದ್ದು ಲೀಕ್ ಆಗಿದ್ದು ಇದೆ. ಪಾರ್ಟ್-೪ರಲ್ಲಿ ೧೮ ನಂಬರ್‌ದ್ದು ಲೀಕ್ ಆಗಿದ್ದಿದೆ. ೨೬-೩-೯೦ರಂದು ಬೆಳಗ್ಗೆ ೯ ಘಂಟೆಗೆ ಪರೀಕ್ಷೆ ನಡೆಯಬೇಕಾಗಿತ್ತು. ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತಿನವರು ಸಂಬಂಧಪಟ್ಟ...

ಶ್ರೀ ಕೆ. ಎಚ್. ರಂಗನಾಥ್.—ಯಾವ ಪರೀಕ್ಷೆ ಹೇಳಿ.

ಶ್ರೀ ಕೆ ಎಸ್. ಈಶ್ವರಪ್ಪ.—ಫ್ರಂಟ್ ಪೇಜ್ ನನ್ನ ಹತ್ತಿರ ಇಲ್ಲ. ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಕೆ. ಎಚ್. ರಂಗನಾಥ್.—ಸ್ವಾಮಿ ಅಧ್ಯಕ್ಷರೆ, ಈ ಸಭೆ ಬಹಳ ಮುಖ್ಯವಾದುದು. ಅವರು ಯಾವ ದೃಷ್ಟಿಯಿಂದ ಇದನ್ನು ಹೇಳುತ್ತಿದ್ದಾರೆ ? ಈ ರೀತಿ ಆಗಬಾರದು ಎಂಬ ದೃಷ್ಟಿಯಿಂದ ಅಪರಾಧಗಳನ್ನು ಸಭೆಯ ಗಮನಕ್ಕೆ ತಂದು ಅದನ್ನು ಸರಿ ಮಾಡಿಸುವ ದೃಷ್ಟಿಯಿಂದ ಹೇಳುತ್ತಿದ್ದಾರೆ. ಏನೂ ಆಧಾರ ಇಲ್ಲದೆ ಹೇಳಿದರೆ ಪ್ರಯೋಜನ ಆಗುವುದಿಲ್ಲ. ಕೂಲಂಕಷವಾಗಿ ನೋಡಿ ಆ ರೀತಿ ಏನಾದರೂ ಇದ್ದರೆ ಪತ್ರ ಬರೆಯಲಿ.

ಶ್ರೀ ಕೆ. ಎಸ್. ಈಶ್ವರಪ್ಪ.—ತಮ್ಮ ಗಮನಕ್ಕೆ ತರುತ್ತಿದ್ದೇನೆ. ಫ್ರಂಟ್ ಪೇಜ್ ಇಲ್ಲ ಇಲ್ಲಿ. ಆದರೆ ಇದು ಪಿ.ಯು.ಸಿ. ಎಜುಕೇಷನ್‌ಗೆ ಸಂಬಂಧಪಟ್ಟಿದ್ದು ಸಂಬಂಧಪಟ್ಟವರು...

ಶ್ರೀ ಕೆ. ಎಚ್. ರಂಗನಾಥ್.—ಅದಕ್ಕೆ ನಾನು ಹೇಳಿದ್ದು. ನಾನು ನಾಳೆ ಇದರ ಬಗ್ಗೆ ಒಂದು ಹೇಳಿಕೆ ಕೊಡುವವನಿದ್ದೇನೆ. ಸುಮ್ಮನೆ ಜನರಲ್ಲಿ ಭೀತಿ ಬರುವ ರೀತಿಯಲ್ಲಿ ಅಪರಾಧ ಆಗುತ್ತಿದೆ. ಎಂಬ ರೀತಿಯಲ್ಲಿ ಅಪರಾಧ ಆಗುತ್ತಿದ್ದರೂ ನಾವು ನಿಂತುಕೊಂಡು ಸುಮ್ಮನೆ ನೋಡಿಕೊಂಡಿರುತ್ತೇವೆ ಎಂಬ ರೀತಿಯಲ್ಲಿ ವಾತಾವರಣ ನಿರ್ಮಾಣ ಮಾಡತಕ್ಕದ್ದು ಸರಿಯಲ್ಲ.

ಶ್ರೀ ಕೆ. ಎಸ್. ಈಶ್ವರಪ್ಪ.—೨೨-೩-೯೦ರಲ್ಲಿ ಪಿ.ಯು.ಸಿ. ಬೋರ್ಡಿನ ಡೆಪ್ಯುಟಿ ಡೈರೆಕ್ಟರ್ ಅವರು ಅಕ್ನಾಲೆಡ್ಜ್‌ಮೆಂಟ್ ಕೊಟ್ಟಿದ್ದಿದೆ. ೯ ಗಂಟೆಗೆ ಎಗ್ಸಾಮಿನೇಷನ್ ಇತ್ತು ೮-೩೦ಕ್ಕೆ ಪೇಪರ್ ಬಂದಿದೆ. ಅದನ್ನು ತಮ್ಮ ಕಡೆಗೆ ಕಳುಹಿಸಿಕೊಡುತ್ತೇನೆ.

ಛೇರ್‌ಮನ್.—ಅದನ್ನು ಕಳುಹಿಸಿಕೊಡಿ.

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡುತ್ತಿದ್ದಾರೆ, ಅದನ್ನು ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತಿನ ಸಂಘದವರು ಕೊಟ್ಟಿದ್ದಾರೆ ನಿಜ. ಅದಕ್ಕೂ ಪ್ರಶ್ನೆ ಪತ್ರಿಕೆಯಲ್ಲಿರುವುದಕ್ಕೂ ಯಾವುದೇ ರೀತಿಯ ಸಂಬಂಧ ಇಲ್ಲ. ಇದರ ತೀವ್ರತೆಯನ್ನು ನಾವು ಗಮನಿಸಬೇಕಾಗುತ್ತದೆ. ಸ್ವಾಮಿ, ನಾವು ಯಾವ ಪರಿಸ್ಥಿತಿಗೆ ಬಂದಿದ್ದೇವೆ ಎಂದರೆ ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ಮಾಡುವುದಕ್ಕೆ ನಾವು ಇವತ್ತು ಡೈರೆಕ್ಟರ್ ಜನರಲ್ ಆಫ್ ಪೋಲೀಸ್ ಅವರ ಸಹಾಯ ತೆಗೆದುಕೊಂಡು ರಾಜ್ಯ ಮಟ್ಟದಿಂದ ಹಳ್ಳಿ ಮಟ್ಟದವರೆಗೆ ವ್ಯವಸ್ಥೆ ಮಾಡಬೇಕಾಗಿದೆ. ಅದಕ್ಕೆ ಹಣ ಖರ್ಚು ಮಾಡಬೇಕಾಗಿದೆ, ಆದ್ದರಿಂದ ಇಂತಹ ನಿಜವಲ್ಲದ ಒಂದು ವಿಚಾರವನ್ನು ಇವರು ಪ್ರಸ್ತಾಪ ಮಾಡುತ್ತಿರುವುದರಿಂದ ಕೆಲವು ಉಪಾಧ್ಯಾಯರು ಇದೇ ಉದ್ಯೋಗ ಮಾಡುತ್ತಿದ್ದಾರೆ.

ಶ್ರೀ ಕೆ. ಎಸ್. ಈಶ್ವರಪ್ಪ.—ಇದು ಸರಿಯಿಲ್ಲ ಎನ್ನುವುದಾದರೆ ರಾಜಕೀಯ ಜೀವನ ಬಿಟ್ಟು ಬಿಡುತ್ತೇನೆ ನಾನು, ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ನೀವು ಪರೀಕ್ಷೆ ಮಾಡಿ. ಸುಳ್ಳು ಎನ್ನುವುದಾದರೆ ನೀವು ಹೇಳಿದಂತೆ ನಾನು ಕೇಳುವುದಕ್ಕೆ ತಯಾರಿದ್ದೇನೆ.

ಶ್ರೀ ಕೆ. ಎಚ್. ರಂಗನಾಥ್.—ನೋಡಿ, ಬಹಳ ದೊಡ್ಡ ಛಾಲೇಂಜ್ ತೆಗೆದುಕೊಳ್ಳುತ್ತಿದ್ದೀರಿ. ದಯಮಾಡಿ ಅಂಥ ದೊಡ್ಡ ಛಾಲೇಂಜ್ ತೆಗೆದುಕೊಳ್ಳಬೇಡಿ. Sir, with your permission I am addressing the Chair. I don't want to be interrupted If the Hon. Member wants some more time to say, let him say. After he says something more. I will answer him.

ಛೇರ್ಮನ್.—ಮಂತ್ರಿಗಳು ಹೇಳಲಿ.

ಶ್ರೀ ಕೆ. ಎಚ್. ರಂಗನಾಥ್.—ಸ್ವಾಮಿ, ಬಹಳ ತೀವ್ರವಾಗಿ ಅವರು ಛಾಲೆಂಜ್ ತೆಗೆದುಕೊಳ್ಳುತ್ತಿದ್ದಾರೆ. ಮಾನ್ಯ ಸದಸ್ಯರು ಹೊಸಬರು. ಅದರ ಪರಿಣಾಮ ಏನು ಎಂಬುದು ತಿಳಿದುಕೊಳ್ಳದೆ ಓಗೆ ಮಾಡಬಾರದು. ಅವರ ಹಕ್ಕಿಗೆ ನಾನು ಅಡ್ಡ ಬರುವುದಿಲ್ಲ. ಅವರು ಏನು ತೀರ್ಮಾನ ತೆಗೆದುಕೊಳ್ಳುತ್ತಾರೋ ತೆಗೆದುಕೊಳ್ಳಲಿ. ಇವತ್ತು ಏನು ಪ್ರಸ್ತಾಪ ಮಾಡುತ್ತಿದ್ದಾರೆ, ಅದರ ಬಗ್ಗೆ ಆಯಾ ದಿವಸವೇ ಕಮೀಷನರ್ ಜೊತೆಗೆ ತಜ್ಞರನ್ನು ನೇಮಕ ಮಾಡಿ ಪರಿಶೀಲನೆ ಮಾಡಿಸಿದ್ದೇನೆ. ನಾಳೆ ಇದರ ಬಗ್ಗೆ ಒಂದು ಹೇಳಿಕೆ ಕೊಡುವವನಿದ್ದೇನೆ. ಆದರೆ ಸತ್ಯಾಂಶಕ್ಕೆ ದೂರವಾದ ಒಂದು ವಿಚಾರ ಇದು. ಜನರಲ್ಲಿ ಒಂದು ಕಲುಷಿತ ವಾತಾವರಣ ನಿರ್ಮಾಣ ಮಾಡುವುದಕ್ಕೆ ಪ್ರಯತ್ನ ಪಟ್ಟಿದ್ದಾರೆ. ಇಂತಹ ವ್ಯವಹಾರದಲ್ಲಿ ಕೆಲವರು ಪಳಗಿದ್ದಾರೆಂದು ಕಾಣುತ್ತದೆ. ಕೆಲವು ಊಹಾಪೋಹಗಳಿಂದ ಕೆಲವು ಪ್ರಶ್ನೆ ಪತ್ರಿಕೆ ಮಾಡಿ, ಅದನ್ನು ಮಾರಾಟ ಮಾಡುವುದನ್ನು ಕೆಲವರು ಉದ್ಯಮವನ್ನಾಗಿ ಮಾಡಿಕೊಂಡಿರುವ ಜನರು ಇದ್ದಾರೆ. ಆದರೆ ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡುತ್ತಿದ್ದಾರೆ ಅದು ನಿಜವಾಗಿದ್ದರೆ ಇಷ್ಟು ಹೊತ್ತಿಗೆ ಇದು ಪತ್ರಿಕೆಗಳಲ್ಲಿ ದೊಡ್ಡ ವಿಚಾರವಾಗಿ ಬರುತ್ತಾ ಇತ್ತು. ಆದ್ದರಿಂದ ಈ ವಿಷಯ ಸತ್ಯಕ್ಕೆ ದೂರವಾಗಿದೆ. ನಾಳೆ ಸಭೆ ಮುಗಿಯುವುದರೊಳಗೆ ನಾನು ಇದರ ಬಗ್ಗೆ ಹೇಳಿಕೆ ಕೊಡುವವನಿದ್ದೇನೆ.

ಶ್ರೀ ಕೆ. ಎಸ್. ಈಶ್ವರಪ್ಪ.—ಶಿಕ್ಷಣ ಸಚಿವರ ಹೇಳಿಕೆಯನ್ನು ನಾನು ಸ್ವಾಗತ ಮಾಡುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ದಯವಿಟ್ಟು ತಾವು ಛಾಲೆಂಜ್ ತೆಗೆದುಕೊಂಡರೆ ಬಹಳ ಕಷ್ಟವಾಗುತ್ತದೆ. ಈ ರೀತಿ ಛಾಲೆಂಜ್ ತೆಗೆದುಕೊಂಡರೆ ಮನೆಗೆ ಹೋಗುವ ಪರಿಸ್ಥಿತಿ ಬರುತ್ತದೆ. ಇವತ್ತು ಯಾವುದೇ ವಿಚಾರ ಎತ್ತಿದರೂ ಕೂಡಾ ಅದನ್ನು ಕೂಲಂಕಷವಾಗಿ ಹತ್ತಾರು ಸಾರಿ ಪರಿಶೀಲನೆ ಮಾಡಿ ಅದರಲ್ಲಿ ಸತ್ಯ ಇದ್ದ ಪಕ್ಷದಲ್ಲಿ ಆ ಬಗ್ಗೆ ಈ ಸದನದ ಉಪಯೋಗ ಮಾಡಿಕೊಳ್ಳಲಿ. ಆನಂತರ ಯಾರು ಅಪರಾಧ ಮಾಡಿದವರು ಇದ್ದಾರೆ, ಇದಕ್ಕೆ ಪ್ರೋತ್ಸಾಹ ಮಾಡಿದವರು ಇದ್ದಾರೆ ಅವರಿಗೆ ಶಿಕ್ಷೆ ಆಗಲೇಬೇಕು. ಅದು ಬಿಟ್ಟು ಇವತ್ತು ಯಾರೋ ಹೇಳಿದರು ಎಂದು ಹೇಳಿ ಸುದ್ದಿಗೋಸ್ಕರ ಇಲ್ಲಿ ಪ್ರಸ್ತಾಪ ಮಾಡಿದರೆ ಅದು ದೊಡ್ಡ ತಪ್ಪು ಎಂದು ತೆಗೆದುಕೊಂಡರೆ, ನಮಗೂ ಒಳ್ಳೆಯದಲ್ಲ, ಸದನಕ್ಕೂ ಒಳ್ಳೆಯದಲ್ಲ.

ಶ್ರೀ ಕೆ. ಎಸ್. ಈಶ್ವರಪ್ಪ.—ದಿನಾಂಕ ೨೬-೩-೯೦ರಲ್ಲಿ ಬಂದ ಅಂಶವನ್ನು ಮಾನ್ಯ ಶಿಕ್ಷಣ ಸಚಿವರ ಆಫೀಸಿಗೆ ತೆಗೆದುಕೊಂಡು ಹೋಗಿ ಕೊಟ್ಟು ಅಕ್ನಾಲಡ್ಜ್‌ಮೆಂಟ್ ತೆಗೆದುಕೊಂಡು ಬಂದಿದ್ದಾರೆ. ಇವತ್ತು ಬನ್ನಿ, ನಾಳೆ ಬನ್ನಿ ನಿಮಗೆ ಇಂಟರ್‌ವ್ಯೂ ಕೊಡಿಸುತ್ತೇವೆಂದು ಅಲ್ಲಿನ ಸಿಬ್ಬಂದಿಯವರು ಹೇಳಿದರೇ ಹೊರತು ಅವರಿಗೆ ಇಂಟರ್‌ವ್ಯೂನೇ ಸಿಗಲಿಲ್ಲ. ಇವತ್ತಿನವರೆಗೆ ಶಿಕ್ಷಣ ಸಚಿವರ ಕಾರ್ಯಾಲಯದಲ್ಲಿ ಇಂಟರ್‌ವ್ಯೂ ಸಿಗಲಿಲ್ಲ. ಇದಕ್ಕೆ ಏನು ಹೇಳುತ್ತಾರೋ ನನಗೆ ಗೊತ್ತಿಲ್ಲ.

ಶ್ರೀ ಕೆ. ಹೆಚ್. ರಂಗನಾಥ್.—ಈ ರೀತಿಯಾದರೆ ಬಹಳ ಕಷ್ಟವಾಗುತ್ತದೆ. ತಾವು ಏಕೆ ತಮ್ಮ ವಿದ್ಯಾರ್ಥಿ ಪರಿಷತ್ತಿನ ಸದಸ್ಯರಿಗೆ ತಿಳುವಳಿಕೆ ಹೇಳಬಾರದು ? ನನಗೆ ಹೇಳದೇ ಕೇಳದೇ ಅವರು ನನ ಆಫೀಸಿಗ ಬರುತ್ತಾರೆ. ನಾನು ಅವರಿಗೆ ಇಂಟರ್‌ವ್ಯೂ ಕೊಡಬೇಕೇ ? ನನಗೂ ಸಾಕಷ್ಟು ವಯಸ್ಸಾಗಿದೆ. ನಾನು ಇಲ್ಲಿಯವರೆಗೆ ಯಾರಿಗೂ ಇಂಟರ್‌ವ್ಯೂ ಕೊಟ್ಟಮೇಲೆ ಅವರ ಜೊತೆ ಮಾತನಾಡದೇ ವಾಪಸ್ಸು ಕಳುಹಿಸಿಲ್ಲ. ಹಾಗೇ ಕಳುಹಿಸುವುದು ನನ್ನ ಸಂಪ್ರದಾಯವೂ ಅಲ್ಲ. ಇದ್ದಕ್ಕಿದ್ದ ಹಾಗೆ ರಾತ್ರಿ ಹತ್ತು ಗಂಟೆಗೆ ಬಂದರೆ ಇಂಟರ್‌ವ್ಯೂ ಕೊಡುವುದಕ್ಕಾಗುತ್ತದೆಯೋ ? ನಾಲ್ಕು ಗಂಟೆಗೆ ಬಂದರೆ ಇಂಟರ್‌ವ್ಯೂ ಕೊಡುವುದಕ್ಕಾಗುತ್ತದೆಯೋ ? ಬೇರೆ ಕೆಲಸ ಇಲ್ಲವೇ ನನಗೆ ? ಮಂತ್ರಿಗಳ ಮೇಲೆ ನೀತಿ ನಿಯಮ, ಸಂಪ್ರದಾಯ ಅನುಸರಿಸುವುದು ಬೇಡವೆ ? ಹೀಗಾದರೆ ನಾವು ಕೆಲಸ ಹೇಗೆ ಮಾಡುವುದು ? ಈ ವಿದ್ಯಾರ್ಥಿ ಪರಿಷತ್ತಿನವರು ಎಷ್ಟು ಸಾರಿ ಬರುವುದು ? ಇವರುಗಳು ಏನು ಸಿಐಡಿಗಳೋ ? ಸಿಐಡಿಗಳಿಂದ ಎಲ್ಲ ಕೆಲಸವನ್ನು ಪ್ರತಿನಿಧಿಸುವ ಕೆಲಸವನ್ನು ಇವರು

ತೆಗೆದು ಕೊಂಡಿದ್ದಾರಾ ? ಇವತ್ತು ಯುವ ಕಾಂಗ್ರೆಸ್‌ನಲ್ಲಿ ಯುವಕರಿದ್ದಾರೆ, ಕಮ್ಯುನಿಸ್ಟ್ ಪಾರ್ಟಿಯಲ್ಲಿ ಯುವಕರು ಇದ್ದಾರೆ. ಬೇರೆ ಬೇರೆ ಕಡೆ ಇದ್ದಾರೆ. ವಿದ್ಯಾರ್ಥಿ ಪರಿಷತ್ತಿನಿಂದ ನನಗೆ ೨-೩ ಸಾರಿ ಫೋನ್ ಬಂತು. ಇವತ್ತು ನಾನು ಏನು ಹೇಳಬಾರದಿತ್ತೋ ಅದನ್ನೆಲ್ಲಾ ನನ್ನಿಂದ ಹೇಳಿಸುತ್ತಿದ್ದಾರೆ, ಬಹಳ ಸಂತೋಷ. ತಮ್ಮ ಈ ಒಂದು ಯುವಕ ಸಂಸ್ಥೆ ಏನಿದೆ, ಅದಕ್ಕೆ ತಾವು ಸ್ವಲ್ಪ ತಿಳುವಳಿಕೆ ಹೇಳಬೇಕು. ಒಂದು ಕಛೇರಿಗೆ ಬಂದಾಗ ಅವರು ಯಾವ ರೀತಿ ನಡೆದುಕೊಳ್ಳಬೇಕೆನ್ನುವ ಬಗ್ಗೆ ಅವರಿಗೆ ತಿಳುವಳಿಕೆ ಇರಬೇಕಾಗುತ್ತದೆ. ಅವರು ಇನ್ನೂ ಚಿಕ್ಕವರಿದ್ದಾರೆ. ಅವರು ಹಾಗೆ ಮಾಡಿದರು ಎಂದು ನನಗೆ ಬೇಸರವಿಲ್ಲ. ಇಂಟರ್‌ವ್ಯೂ ಕೊಟ್ಟಿಲ್ಲ ಎಂದು ಹೇಳಿದಿರಿ. ನನ್ನ ಕಛೇರಿಯಿಂದಾಗಲೀ, ನಾನಾಗಲೀ ಅವರಿಗೆ ಇಂತಹ ದಿವಸ ಬನ್ನಿ ಎಂದು ಹೇಳಿಲ್ಲ. ಹೇಳಿದ ಮೇಲೆ ನಾನು ಭೇಟಿ ಆಗದೇ ಇರುವುದಿಲ್ಲ, ಒಂದು ವೇಳೆ ಬೇರೆ ಕಾರಣದಿಂದ ಭೇಟಿ ಸಾಧ್ಯವಾಗದಿದ್ದರೆ ಅವರಿಗೆ ತಿಳಿಸಿಬಿಡಿ ಎಂದು ನಾನು ನನ್ನ ಆಫೀಸಿನವರಿಗೆ ಹೇಳಿರುತ್ತೇನೆ.

ಶ್ರೀ ಕೆ. ಎಸ್. ಈಶ್ವರಪ್ಪ.—ಅವರು ಆಫೀಸಿಗೆ ಸಾಕಷ್ಟು ಸಾರಿ ಹೋಗಿದ್ದಾರೆ. ತಾವು ಇನ್‌ಫರ್ಮೇಷನ್ ತರಿಸಿಕೊಳ್ಳಿ. ಸಂತೋಷ ಆಮೇಲೆ ನೋಡೋಣ. ಇದರ ಬಗ್ಗೆ ಗಮನಿಸುತ್ತೇನೆ, ಎಂದು ಹೇಳಿದ್ದೀರಿ. ನಾಳೆ ಹೇಳಿಕೆ ಕೊಡುತ್ತೇನೆ ಎಂದಿದ್ದೀರಿ. ಸಂಬಂಧಪಟ್ಟವರನ್ನು ಈಗಲಾದರೂ ಇಂಟರ್‌ವ್ಯೂ ಮಾಡಿ, ಸಿಐಡಿ ಡಿಪಾರ್ಟ್‌ಮೆಂಟಿನವರು ಏನು ಮಾಡಿಲ್ಲವೋ ಅದನ್ನು ಇವರು ಮಾಡಲು ಪ್ರಯತ್ನ ಮಾಡಿದ್ದಾರೆ.

ಶ್ರೀ ಕೆ ಹೆಚ್. ರಂಗನಾಥ್.—ನಾನು ಅವರಿಗೆ ಇಂಟರ್‌ವ್ಯೂ ಕೊಡುವುದಿಲ್ಲವೆಂದು ಹೇಳುತ್ತೇನೆ.

ಶ್ರೀ ಕೆ. ಎಸ್. ಈಶ್ವರಪ್ಪ.—ಸ್ವಾಮಿ, ಸರ್ಕಾರ ಮಾಡದೇ ಇರುವ ಕೆಲಸವನ್ನು ಈ ಹುಡುಗರು ಮಾಡಿದ್ದಾರೆ. ಇವರಿಗೆ ಬೆಂಬಲ ಕೊಟ್ಟು ಅಭಿನಂದನೆ ಸಲ್ಲಿಸಬೇಕಾಗಿತ್ತು.

(ಗೊಂದಲ)

ಶ್ರೀ ಕೆ. ಹೆಚ್. ರಂಗನಾಥ್.—ರಾಜ್ಯದಲ್ಲಿ ಇವರು ಮಾತ್ರ ಹಿತಚಿಂತಕರು, ಬೇರೆ ಯಾರೂ ಇಲ್ಲ ಅಲ್ಲವೇ ?

ಶ್ರೀ ಕೆ. ಎಸ್. ಈಶ್ವರಪ್ಪ.—ಇವತ್ತು ಅವರಿಗೆ ಅಭಿನಂದನೆ ಸಲ್ಲಿಸಬೇಕಾಗುತ್ತದೆ.

(ಗೊಂದಲ)

ಶ್ರೀ ಹರ್ಷಕುಮಾರ್ ಗೌಡ.—ಸತ್ಯಕ್ಕೆ ದೂರವಾದಂಥ ವಿಚಾರಗಳನ್ನು ಇಲ್ಲಿ ಹೇಳುವುದು, ಪತ್ರಿಕೆಗಳಲ್ಲಿ ಹಾಕಿಸಿಕೊಳ್ಳುವುದು, ಅಲ್ಲಿ ಹುಡುಗರ ಹತ್ತಿರ ಹೋಗಿ ಪ್ರಚೋದನೆ ಮಾಡುವುದು ಇಷ್ಟೇ ಇವರ ಕೆಲಸ. ಇವರ ಪಕ್ಷದವರಿಗೆ ಬೇರೆ ಏನೂ ಕೆಲಸವಿಲ್ಲ.

ಶ್ರೀ ಕರಿಯಣ್ಣ.—ಪ್ರಚೋದನಾಕಾರಿ ಭಾಷಣವನ್ನು ನೀವು ಯಾವರೀತಿ ಮಾಡುತ್ತೀರಿ ಎನ್ನುವುದು ಎಲ್ಲರಿಗೂ ಗೊತ್ತಿದೆ.

(ಗೊಂದಲ)

ಛೇರ್ಮನ್.—ಮಾನ್ಯ ಈಶ್ವರಪ್ಪನವರು ಮಾತನಾಡುತ್ತಿದ್ದಾರೆ. ನಡುವೆ ಯಾರೂ ಮಾತನಾಡಬಾರದು. ಅವರ ಭಾಷಣ ಮುಗಿದ ನಂತರ ಬೇರೆಯವರಿಗೆ ಅವಕಾಶ ಕೊಡುತ್ತೇನೆ.

ಶ್ರೀ ಕರಿಯಣ್ಣ.—ಮಾತನಾಡಲಿ ಯಾರು ಬೇಡವೆಂದು ಹೇಳುತ್ತಾರೆ ? ಆದರೆ ಬ್ಲಾಕ್‌ಮೇಲ್ ಮಾಡುವಂತಹ ವಿಚಾರಗಳನ್ನು ಮಾತನಾಡಿದರೆ ಹೇಗೆ ?

ಶ್ರೀ ಹರ್ಷಕುಮಾರ್ ಗೌಡ.—ಸುಳ್ಳು ಸುದ್ದಿಗಳನ್ನು ಹರಡುವುದು, ಊಹಾಪೋಹದ ಅಪಪ್ರಚಾರಗಳನ್ನು ಮಾಡುವುದೇ ಇವರ ಕೆಲಸ.

ಶ್ರೀ ಕೆ.ಎಸ್. ಈಶ್ವರಪ್ಪ.—ಹಾಗಾದರೆ ನೀವೇ ಮಾತನಾಡಿಕೊಳ್ಳಿ.

ಶ್ರೀ ಹರ್ಷಕುಮಾರ್ ಗೌಡ.—ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾದ ಮಾತುಗಳನ್ನು ಈ ಸದನದ ಮೂಲಕ ಮಾತನಾಡುವುದಕ್ಕೆ ಅಧ್ಯಕ್ಷರು ಅವಕಾಶ ಕೊಡಬಾರದು.

(ಗೊಂದಲ)

ಛೇರ್ಮನ್.—ಮಾನ್ಯ ಸದಸ್ಯರು ಮಾತನಾಡುವಾಗ ನಡುವೆ ಯಾರೂ ಮಾತನಾಡಬಾರದು. ತಾವು ಜಾಗ್ರತೆ ಮುಗಿಸಿ.

ಶ್ರೀ ಕೆ. ಎಸ್. ಈಶ್ವರಪ್ಪ.—ನಾನು ವಿದ್ಯಾರ್ಥಿಗಳ ಬಗ್ಗೆ ಮಾತನಾಡುತ್ತಿದ್ದೆ. ಬುದ್ಧಿವಂತ ವಿದ್ಯಾರ್ಥಿ ಹಗಲು ರಾತ್ರಿ ಕಷ್ಟಪಟ್ಟು ಓದಿರುತ್ತಾನೆ. ಪರೀಕ್ಷೆಗೆ ಹೋಗುವುದಕ್ಕೆ ಮುಂಚೆ ಪ್ರಶ್ನೆ ಪತ್ರಿಕೆಗಳು ಲೀಕ್ ಆದರೆ ಎಷ್ಟು ಕಷ್ಟವಾಗುತ್ತದೆ ಎನ್ನುವುದನ್ನು ತಾವು ಯೋಚನೆ ಮಾಡಿ. ವಿದ್ಯಾರ್ಥಿಗಳಿಗೆ ಸರಿಯಾದ ಪ್ರಾತಿನಿಧ್ಯವನ್ನು ಕೊಟ್ಟಿದ್ದರೆ ಈ ರೀತಿಯ ತೊಂದರೆಗಳು ಬರುತ್ತಿರಲಿಲ್ಲ. ಈಗಲಾದರೂ ಸರ್ಕಾರ ಈ ದಿಕ್ಕಿನಲ್ಲಿ ಪ್ರಯತ್ನ ಮಾಡಿ ಕರ್ನಾಟಕದ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯಗಳಲ್ಲಿ ಸೂಕ್ತ ಪ್ರಾತಿನಿಧ್ಯವನ್ನು ಕೊಡಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಇನ್ನು ಕರ್ನಾಟಕ ರಾಜ್ಯದ ಕಾರ್ಮಿಕರ ಸ್ಥಿತಿ ತುಂಬಾ ವಿಚಿತ್ರವಾಗಿದೆ. ಶಿವಮೊಗ್ಗದಲ್ಲಿ ಒಂದು ಕೇಸು ಕಳೆದ ೭ ವರ್ಷಗಳಿಂದ ನಡೆಯುತ್ತಿದೆ. ಸುಮಾರು ಐದಾರು ವರ್ಷಗಳಿಂದ ನ್ಯಾಯಾಧೀಶರು ಇರಲಿಲ್ಲ. ಅದಕ್ಕೋಸ್ಕರ ಕೇಸು ಮುಂದಕ್ಕೆ ಬಂತು. ಇದರಿಂದ ಕಾರ್ಮಿಕರಿಗೆ ಎಷ್ಟರಮಟ್ಟಿಗೆ ತೊಂದರೆಯಾಗಬಹುದೆಂಬುದನ್ನು ದಯವಿಟ್ಟು ನೀವೇ ಯೋಚನೆ ಮಾಡಿ ನೋಡಿ. ಬೆಳಗ್ಗಿನಿಂದ ಸಾಯಂಕಾಲದವರೆಗೆ ಕಷ್ಟಪಟ್ಟು ಕಾರ್ಮಿಕ ದುಡಿದರೂ ೧೫ ರೂಪಾಯಿ ಕೂಲಿ ಸಿಗುವುದು ಕಷ್ಟ. ಅಂಥಾದ್ದರಲ್ಲಿ ಆತ ಎಲ್ಲಿ ಕೋರ್ಟಿಗೆ ಹೋಗುತ್ತಾನೆ? ಹೆಂಡತಿ ಮಕ್ಕಳನ್ನು ಹೇಗೆ ನೋಡಿಕೊಳ್ಳುತ್ತಾನೆ. ಮಕ್ಕಳ ವಿದ್ಯಾಭ್ಯಾಸವನ್ನು ಹೇಗೆ ಮಾಡಿಸುತ್ತಾನೆ; ಸರ್ಕಾರ ಇದರ ಕಡೆಗೆ ಗಮನ ಕೊಡದಿದ್ದರೆ ಹೇಗೆ? ಐದು ವರ್ಷಗಳು ಆದಮೇಲೆ ಕಳೆದ ವರ್ಷ ನ್ಯಾಯಾಧೀಶರ ನೇಮಕ ಮಾಡಿದ್ದಾರೆ. ಇದಾದ ಮೇಲೆ ಕಾರ್ಮಿಕನ ಅದೃಷ್ಟವೋ, ಮಾಲೀಕರ ಅದೃಷ್ಟವೋ ಗೊತ್ತಿಲ್ಲ. ಆ ನ್ಯಾಯಾಧೀಶರಿಗೆ ಹಾರ್ಟ್ ಅಟ್ಯಾಕ್ ಆಯಿತು. ಅವರಿಗೆ ಈಗ ಮೂರನೇ ಮಹಡಿಗೆ ಹತ್ತುವುದಕ್ಕೆ ಆಗುವುದಿಲ್ಲ, ಆದ್ದರಿಂದ ಕಾರ್ಮಿಕ ನ್ಯಾಯಾಲಯಕ್ಕೆ ಬೇರೆ ನ್ಯಾಯಾಧೀಶರನ್ನು ನೇಮಕ ಮಾಡಿ ಕಾರ್ಮಿಕರಿಗೆ ನ್ಯಾಯ ಒದಗಿಸಲು ಸರ್ಕಾರ ಗಮನ ಕೊಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ. ಶಿವಣ್ಣ.—ಮಾನ್ಯ ಸದಸ್ಯರು ಯಾವುದರ ಬಗ್ಗೆ ಹೇಳುತ್ತಿದ್ದಾರೆ?

ಶ್ರೀ ಸಿ. ಬೈರೇಗೌಡ.—ಶಿವಮೊಗ್ಗದ ಕಾರ್ಮಿಕ ನ್ಯಾಯಾಲಯದ ಬಗ್ಗೆ ಮಾತನಾಡುತ್ತಿದ್ದಾರೆ.

ಶ್ರೀ ಕೆ. ಎಸ್. ಈಶ್ವರಪ್ಪ.—ಇನ್ನು ಶಿವಮೊಗ್ಗ ನಗರದ ಕೆಲವು ಸಮಸ್ಯೆಗಳನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮನೆ ಕಂದಾಯವನ್ನು ಶಿವಮೊಗ್ಗ ನಗರಸಭೆಯವರು ಸಂಗ್ರಹ ಮಾಡುವ ಪರಿಪಾಠ ಅನೇಕ ವರ್ಷಗಳಿಂದ ನಡೆದುಕೊಂಡು ಬರುತ್ತಿದೆ. ಕಂದಾಯವನ್ನು ಎಷ್ಟು ತೆಗೆದುಕೊಳ್ಳಬೇಕು, ಎಷ್ಟು ಬಿಡಬೇಕೆನ್ನುವ ಬಗ್ಗೆ ಯಾವುದೇ ಒಂದು ವಿಧಿಯಿಲ್ಲ. ಯಾವುದೇ ಒಂದು ಗೊತ್ತುಗುರಿ ಇಲ್ಲ. ಯಾವುದೇ ಒಂದು ಅಳತೆಗೋಲು ಇಲ್ಲ. ಒಬ್ಬ ಸಾಮಾನ್ಯ ನೌಕರ ಒಂದು ಮನೆಗೆ ಹೋಗಿ ೩೦೦ ರೂಪಾಯಿ ಮನೆಗಂದಾಯ ಇದ್ದರೆ, ಈ ಸಲ ೩೦೦೦ ರೂಪಾಯಿ ಕಂದಾಯ ಹಾಕುತ್ತೇನೆಂದು ಸರ್ವಾಧಿಕಾರಿ ತರಹ ಹೇಳುತ್ತಾನೆ. ಈ ಬಗ್ಗೆ ಬೇಕಾದರೆ ನಮ್ಮ ಅಧಿಕಾರಿಗಳು ಇದ್ದಾರೆ, ಬಂದು ನೋಡಿ, ಇಷ್ಟು ಕೊಟ್ಟರೆ ಏನೋ ಅಡ್ಜಸ್ಟ್ ಮಾಡಿಕೊಂಡರೆ ಕಡಿಮೆ ಮಾಡುತ್ತೇವೆಂದು ಹೇಳುತ್ತಾನೆ. ಇಲ್ಲದಿದ್ದರೆ ೩ ಸಾವಿರ ರೂಪಾಯಿ ಕಂದಾಯ ಹಾಕುತ್ತೇವೆಂದು ಬೆದರಿಸುತ್ತಾನೆ. ಇಷ್ಟೆಲ್ಲಾ ಆದಮೇಲೆ ಎರಡೇ ದಿವಸಗಳಲ್ಲಿ ೩೫೦ ರೂಪಾಯಿಗಳಾಗುತ್ತದೆ. ಇದರಲ್ಲಿ ಏನು ಅವ್ಯವಹಾರ ನಡೆಯುತ್ತಿದೆ ಎನ್ನುವುದನ್ನು ನೀವೇ ಯೋಚನೆ ಮಾಡಿ. ೩೦೦ ರೂಪಾಯಿ ಮನೆಗಂದಾಯವಿದ್ದರೆ ಅದರಲ್ಲಿ ೧೦ ಪರ್ಸೆಂಟ್, ೨೦ ಪರ್ಸೆಂಟ್, ೩೦ ಪರ್ಸೆಂಟ್ ಈ ತರಹ ಏರಿಸುವ ಒಂದು ಅಳತೆಗೋಲು ಇಟ್ಟುಕೊಂಡು ಕಂದಾಯವನ್ನು ಫಿಕ್ಸ್ ಮಾಡಬೇಕು. ಆಗ ಯಾರಿಗೂ ಯಾವುದೇ ರೀತಿಯ ಅನ್ಯಾಯವಾಗುವುದಿಲ್ಲ. ಲಂಚಕ್ಕೂ ಆಸ್ಪದವಿರುವುದಿಲ್ಲ.

ಶ್ರೀ ಹರ್ಷಕುಮಾರ ಗೌಡ.—ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಮನೆಗಂದಾಯದ ಬಗ್ಗೆ ಚರ್ಚೆ ಮಾಡುವುದು, ಮೋರಿಗಳ ಬಗ್ಗೆ ಚರ್ಚೆ ಮಾಡುವುದು, ನಗರಸಭೆಯ ಬಗ್ಗೆ ಚರ್ಚೆ ಮಾಡುವುದು ಸರಿಯಲ್ಲ. ಸದನದಲ್ಲಿ ಯಾವುದರ ಬಗ್ಗೆ ಚರ್ಚೆ ಮಾಡಬೇಕೆಂಬುದರ ಬಗ್ಗೆ ಸದಸ್ಯರು ಸ್ಪಷ್ಟವಾಗಿ ತಿಳಿದುಕೊಂಡು ಬಂದು ಈ ಸದನದಲ್ಲಿ ಮಾತನಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕರಿಯಣ್ಣ.—ಶಿವಮೊಗ್ಗದಲ್ಲಿ ಮನೆಗಂದಾಯವನ್ನು ಈಗ ಹೆಚ್ಚು ಮಾಡಿಲ್ಲ. ಇವರು ಹಿಂದೆ ಸರ್ಕಾರದ ಜೊತೆ ಹೊಂದಾಣಿಕೆಯಲ್ಲಿದ್ದಾಗ ಮನೆಗಂದಾಯ ಹೆಚ್ಚು ಮಾಡಿದ್ದು. ಆಗ ಶಿವಮೊಗ್ಗದಲ್ಲಿ ಗಲಾಟೆ ಆಗಿದ್ದನ್ನು ಈಗ ಹೇಳುತ್ತಿದ್ದಾರೆ.

ಶ್ರೀ ಹರ್ಷಕುಮಾರ ಗೌಡ.—ಆರು ವರ್ಷಗಳ ಹಿಂದೆ ಸರ್ಕಾರಕ್ಕೆ ಸಹಾಯ ಮಾಡಿದವರು ಇವರು.

ಶ್ರೀ ಕರಿಯಣ್ಣ.—ಹಿಂದಿನ ಸರ್ಕಾರಕ್ಕೆ ಸಹಾಯ ಮಾಡಿ, ಆಗ ನೀವು ಕಂದಾಯ ಹೆಚ್ಚು ಮಾಡಲು ಒಪ್ಪಿಕೊಂಡಿದ್ದೀರಿ.

ಶ್ರೀ ಕೆ. ಎಸ್. ಈಶ್ವರಪ್ಪ.—ವಿರೋಧಪಕ್ಷದವರು ಚರ್ಚೆ ಮಾಡುವುದು ಬೇಡ ಎಂದು ಇವರು ತೀರ್ಮಾನ ಮಾಡಿದರೆ ನಾವು ಹೊರಗಡೆ ಹೋಗುವುದಕ್ಕೆ ತಯಾರಾಗಿದ್ದೇವೆ, ಜನರಿಗೆ ಸಮಸ್ಯೆ ಇದೆ.

ಶ್ರೀ ಹರ್ಷಕುಮಾರ್ ಗೌಡ.—ನಮಗೆ ವಿರೋಧಪಕ್ಷ ಬೇಕು, ಆದರೆ ಜವಾಬ್ದಾರಿಯುತವಾದಂಥ ವಿರೋಧಪಕ್ಷ ನಮಗೆ ಬೇಕು.

ಶ್ರೀ ಕೆ. ಎಸ್. ಈಶ್ವರಪ್ಪ.—ಮನೆಗಂದಾಯವನ್ನು ನಿಗದಿ ಮಾಡುವಾಗ ಅಡಿಗೆ ಇಷ್ಟು ಅಥವಾ ಪರ್ಸೆಂಟೇಜ್ ಪ್ರಕಾರ ಫಿಕ್ಸ್ ಮಾಡಲೆಂದು ಸಲಹೆ ಮಾಡುತ್ತೇನೆ. ಶಿವಮೊಗ್ಗದಲ್ಲಿ ೫ ವರ್ಷಗಳ ಹಿಂದೆ ಒಂದು ಬಸ್‌ಸ್ಟ್ಯಾಂಡ್ ಕಟ್ಟಲಿಕ್ಕೆ ಶುರು ಮಾಡಿದರು. ಅದಕ್ಕೆ ಎಷ್ಟು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೋ ಗೊತ್ತಿಲ್ಲ.

ಆದರೆ ಇವೊತ್ತು ಅಸ್ಥಿಪಂಜರ ನಿಂತಹಾಗಿದೆ ಈ ಬಸ್‌ನಿಲ್ದಾಣ. ಹೇಳುವವರಿಲ್ಲ ಕೇಳುವವರಿಲ್ಲ. ಕತ್ತೆಗಳು ಬಂದು ಬಸ್‌ನಿಲ್ದಾಣದಲ್ಲಿ ನಿಂತುಕೊಳ್ಳುತ್ತವೆ. ಪ್ರಯಾಣಿಕರು ಬಂದು ಎಲ್ಲಿ ನಿಂತುಕೊಳ್ಳುತ್ತಾರೋ ಗೊತ್ತಿಲ್ಲ. ಸರ್ಕಾರ ಈ ದಿಕ್ಕಿನಲ್ಲಿ ತತ್‌ಕ್ಷಣ ಗಮನಹರಿಸಿ ಈ ಬಸ್‌ಸ್ಟ್ಯಾಂಡ್‌ನ್ನು ಪೂರ್ಣ ಮಾಡಬೇಕೆಂದು ನಾನು ತಮ್ಮ ಮೂಲಕ ಹೇಳುತ್ತೇನೆ. ಇನ್ನೊಂದು ಕುವೆಂಪು ರಂಗಮಂದಿರ ಮಾಡುತ್ತೇವೆ ಎಂದು ಸರ್ಕಾರ ತೀರ್ಮಾನ ಮಾಡಿತ್ತು. ಇಪ್ಪತ್ತೆರಡು ಮುಕ್ಕಾಲು ಲಕ್ಷ ರೂಪಾಯಿಗಳನ್ನು ಅದಕ್ಕಾಗಿ ವಿನಿಯೋಗ ಮಾಡಲಾಗಿದೆ. ಅದು ೨೩ ಲಕ್ಷ ಪ್ರಾಜೆಕ್ಟ್ ಇದ್ದುದ್ದು, ಕಾಲು ಭಾಗ ಕೂಡ ಕೆಲಸ ಆಗಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಎರಡು-ಮೂರು ಸಲ ಬಿಲ್ ಆಗಿದೆ ಎಂದು ಹೇಳುತ್ತಾರೆ. ಈಗಾಗಲೇ ಪೂರ್ಣ ಹಣ ಖರ್ಚಾಗಿದೆ. ಈಗ ಇನ್ನೂ ೬೦ ಲಕ್ಷ ಬೇಕಾಗುತ್ತದೆ ಎಂದು ಹೊಸ ಪ್ಲಾನ್ ತಯಾರು ಮಾಡಿದ್ದಾರೆ, ಅದು ಈಗಾಗಲೇ ಸರ್ಕಾರಕ್ಕೆ ಬಂದು ಆಗಿದೆ. ಇದು ಯಾಕೆ ಹೀಗಾಯಿತು, ಯಾಕೆ ಈ ಅನ್ಯಾಯವಾಯಿತು ಎಂದು ನಾನು ಕೇಳುವುದಕ್ಕೆ ಇಷ್ಟಪಡುವುದಿಲ್ಲ. ತತ್‌ಕ್ಷಣ ಯಾರ್ಯಾರು ಅನ್ಯಾಯ ಮಾಡಿದ್ದಾರೆ, ಭ್ರಷ್ಟಾಚಾರ ಮಾಡಿದ್ದಾರೆ ಎಂದು ಇದರ ಬಗ್ಗೆ ಗಮನಹರಿಸಬೇಕು, ತಪ್ಪಿತಸ್ಥರಿಗೆ ಶಿಕ್ಷೆ ಆಗಬೇಕು. ಜೊತೆಗೆ ಕುವೆಂಪು ರಂಗಮಂದಿರ ಪೂರ್ಣ ಆಗಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇಷ್ಟರತನಕ ಶಿವಮೊಗ್ಗ ನಗರಸಭೆಯ ಮಾಜಿ ನಗರಸಭಾ ಸದಸ್ಯರಾದ ಶ್ರೀ ಕರಿಯಣ್ಣನವರು ಹೇಳುತ್ತಿದ್ದರು, ಏನೆಂದರೆ ಶಿವಮೊಗ್ಗ ನಗರಸಭೆಯಲ್ಲಿ ಭ್ರಷ್ಟಾಚಾರ ಆಗಿದೆ ಎಂದು. ಅದು ಸತ್ಯ. ಅವರು ನಗರಸಭೆ ಸದಸ್ಯರಾಗಿದ್ದಾಗ ಅನ್ಯಾಯವಾಗಿದೆ. ಅನೇಕ ರಸೀದಿ ಪುಸ್ತಕಗಳು ಎಲ್ಲೆಲ್ಲಿ ಹೋದವೋ ನನಗೆ ಗೊತ್ತಿಲ್ಲ. ಇದರಲ್ಲಿ ಎಷ್ಟೋ ಡೂಪ್ಲಿಕೇಟ್ ರಸೀದಿ ಪುಸ್ತಕಗಳಿವೆ. ಸರ್ಕಾರ ಅನೇಕರನ್ನು ಸಸ್ಪೆಂಡ್ ಮಾಡಿದೆ. ಸಸ್ಪೆಂಡ್ ಮಾಡಿದರೂ ಕೂಡ ಇವತ್ತಿನ ದಿವಸ ಅವರ ಮೇಲೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಇವತ್ತು ಕೂಡ ಅನೇಕರು ಹೋಗುತ್ತಾರೆ, ಸಂಬಂಧಪಟ್ಟವರಿಗೆ ಏನೇನು ಮಾಡಬೇಕೋ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಕರಿಯಣ್ಣ.—ಅವರು ನನ್ನ ಹೆಸರು ಪ್ರಸ್ತಾಪ ಮಾಡಿದ್ದಾರೆ. ಅವರ ಸರ್ಕಾರ ಇದ್ದಾಗ ಇಂತಹ ಭ್ರಷ್ಟ ಅಧಿಕಾರಿಗಳನ್ನು ಜೊತೆಯಲ್ಲಿ ಇಟ್ಟುಕೊಂಡು ಮಂತ್ರಿಗಳ ಹತ್ತಿರ ಕರೆದುಕೊಂಡು ಹೋಗಿ ರಿಇನ್‌ಸ್ಟೇಟ್ ಮಾಡಿಸಿಕೊಂಡಿದ್ದಾರೆ. ಇನ್ನೊಬ್ಬರನ್ನು ಡಿಸ್‌ಮಿಸ್ ಮಾಡಬೇಕಾಗಿತ್ತು. ಅಂತಹವರಿಗೂ ಮತ್ತೆ ಕೆಲಸ ಕೊಡಿಸಿದ್ದಾರೆ.

(ಸಭೆಯಲ್ಲಿ ಅತೀವ ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ.—ಇನ್ನು ನಗರಸಭೆ, ಕಾರ್ಪೊರೇಷನ್, ಮುನಿಸಿಪಾಲಿಟಿಗಳಿಗೆ ಚುನಾವಣೆ ನಡೆಸತಕ್ಕಂಥ ಸಂದರ್ಭದಲ್ಲಿ ಅನೇಕ ಬಾರಿ ಚುನಾವಣೆಯನ್ನು ರದ್ದು ಮಾಡಿದರು. ಕಾರಣ ಕೇಳಿದಾಗ ಚುನಾವಣೆ ರದ್ದಾಗಿಲ್ಲ, ಚುನಾವಣೆ ದಿನಾಂಕವನ್ನು ಮಾತ್ರ ಮುಂದುವರೆಸಿದ್ದೇವೆಂದು ಸರ್ಕಾರ ಹೇಳಿತು. ನಂತರ ೨೨ನೇ ತಾರೀಖು ಇದ್ದದ್ದು ೨೯ನೇ ತಾರೀಖು ಆಯಿತು ಅದಾದ ನಂತರ ೨೨ ರಂದು ಮೊಹರಮ್ ಹಬ್ಬ ಬಂದಿದೆ, ಮುಸ್ಲೀಮರಿಗೆ ತೊಂದರೆಯಾಗುತ್ತದೆ ಎನ್ನುವ ಉದ್ದೇಶದಿಂದ ೨೯ನೇ ತಾರೀಖು ನಿಗದಿ ಮಾಡಿದ್ದೇವೆ ಎಂದರು. ತುಂಬ ಸಂತೋಷ. ತಾರೀಖಿನ್ನು ಫಿಕ್ಸ್ ಮಾಡುವ ಸಂದರ್ಭದಲ್ಲಿ ಸರ್ಕಾರಕ್ಕೆ ಇದು ಗೊತ್ತಿರಲಿಲ್ಲವೇ ? ಆದರೆ ಇಡೀ ಕರ್ನಾಟಕದಲ್ಲಿ ಬಸವಜಯಂತಿ ೨೯ಕ್ಕೇ ಬರುತ್ತದೆ. ಶಂಕರ ಜಯಂತಿ ಕೂಡ ಬರುತ್ತದೆ ಎಂದು ಹೇಳುತ್ತಿದ್ದಾರೆ. ಕರ್ನಾಟಕ

ರಾಜ್ಯದ ಹಿಂದೂಗಳ ಮನಸ್ಸು ನೋಯುವುದು ಸರ್ಕಾರಕ್ಕೆ ಅರ್ಥವಾಗುವುದಿಲ್ಲವೆ ? ಏಪ್ರಿಲ್ ೨೯ನೇ ತಾರೀಖಿಗೆ ಹಿಂದೂಗಳಿಗೆ ತೊಂದರೆಯಾಗುತ್ತದೆ ಎಂದು ಗೊತ್ತಿದ್ದರೂ ಕೂಡ...

(ಗೊಂದಲ)

ಶ್ರೀ ಹರ್ಷಕುಮಾರಗೌಡ.—ಬಸವಣ್ಣನವರನ್ನು ಇವರು ಹಿಂದೂ ಮಾಡುತ್ತಿದ್ದಾರೆ. ಈ ಸದನದಲ್ಲಿ ಒಂದು ಧರ್ಮದ ಹೆಸರು ಹೇಳಿದ ಒಬ್ಬ ವ್ಯಕ್ತಿಯನ್ನು...

ಚೇರ್ಮನ್.—ಅವರ ಭಾಷಣ ಮುಗಿಯುವ ತನಕ ಯಾರೂ ಮಾತನಾಡಬಾರದು, ಮಾತ ನಾಡುವುದಿದ್ದರೆ ನನ್ನ ಅನುಮತಿ ತೆಗೆದುಕೊಂಡು ಮಾತನಾಡಬೇಕು.

ಶ್ರೀ ಹರ್ಷಕುಮಾರ ಗೌಡ.—ಧರ್ಮದ ಹೆಸರಿನಲ್ಲಿ ಪ್ರಚೋದನೆ ಮಾಡುತ್ತಿದ್ದಾರೆ. ಬಸವಣ್ಣ ಒಬ್ಬ ಹಿಂದೂ ಅಂತ ಹೇಳಿ...

ಶ್ರೀ ಕೆ. ಎಸ್. ಈಶ್ವರಪ್ಪ.—ಮಾನ್ಯ ಸದಸ್ಯರಿಗೆ ಬಸವಣ್ಣ ಯಾರು ಅಂತ ಆಮೇಲೆ ಕ್ಲಾರಿಫಿಕೇಶನ್ ಕೊಡುತ್ತೇನೆ. ಅವರಿಗೆ ಇದರ ಬಗ್ಗೆ ತಿಳುವಳಿಕೆ ಇಲ್ಲ...

ಒಬ್ಬರು ಮಾನ್ಯ ಸದಸ್ಯರು.—ಎಲ್ಲರನ್ನೂ ಹಿಂದೂಗಳು ಎಂದು ಹೇಳುವುದಕ್ಕೆ ಸಾಧ್ಯವೇನು ?

ಶ್ರೀ ಕೆ. ಎಸ್. ಈಶ್ವರಪ್ಪ.—ಬಸವಣ್ಣ ಯಾರು, ಶಂಕರ ಯಾರು ಎಂದು ತೀರ್ಮಾನ ಮಾಡುವವರು ಇವರಲ್ಲ ಸ್ವಾಮೀ;

ಚೇರ್ಮನ್.—ತಾವು ೩೦ ನಿಮಿಷ ತೆಗೆದುಕೊಂಡಿದ್ದೀರಿ. ಬೇಗ ಮುಗಿಸಿ.

ಶ್ರೀ ಕೆ. ಎಸ್. ಈಶ್ವರಪ್ಪ.—ಇಲ್ಲಿ ಮುಸ್ಲೀಮರಿಗೆ ತೊಂದರೆಯಾಗುತ್ತದೆ. ಎಂದು ಅವರ ಓಟಿನ ಬಗ್ಗೆ ಸರ್ಕಾರ ಗಮನ ಕೊಟ್ಟಿದೆ. ಅದಕ್ಕಾಗಿ ಚುನಾವಣೆಯನ್ನು ಮುಂದೆ ಹಾಕಿ ಹಿಂದೂಗಳ ಮನಸ್ಸಿಗೆ ನೋವಾಗುತ್ತದೆಂಬುದನ್ನು ಗಮನಿಸಿಲ್ಲವಾದ್ದರಿಂದ ಇದು ಹಿಂದೂ ವಿರೋಧಿ ಸರ್ಕಾರ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ್.—ಇಂತಹ ಮಾತುಗಳಿಗೆ ತಾವು ಅವಕಾಶ ಕೊಡಬಾರದು.

(ಗೊಂದಲ)

ಚೇರ್ಮನ್.—ಎಲ್ಲರೂ ಕೂಡಿರಿ, ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ, ತಾವೂ ಕುಳಿತುಕೊಳ್ಳಿ. ತಾವು ದಯವಿಟ್ಟು ಕುಳಿತುಕೊಳ್ಳಿ;

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ.—ಸ್ಪೀಕರ್ ಎದ್ದು ನಿಂತಾಗ ತಾವೆಲ್ಲಾ ಎದ್ದು ನಿಂತಿದ್ದೀರಲ್ಲ. ಇದು ಸರಿಯೇ ?

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ.— ಅಧ್ಯಕ್ಷರೇ, ಈ ಸದನ ಶಾಂತವಾಗಿದ್ದರೆ ಮಾತ್ರ ನಾನು ಮಾತ ನಾಡುತ್ತೇನೆ. ನನ್ನ ರಕ್ಷಣೆಗೆ ನೀವು ಬರುವವರೆಗೂ ನಾನು ಮಾತನಾಡುವುದಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ, ಈ ಕಾಂಗ್ರೆಸ್ ಸದಸ್ಯರನ್ನು ಸಾರಾಸಗಟಾಗಿ ಹೊರಕ್ಕೆ ಹಾಕಿ. ಅವರ ಮೇಲೆ ಕೂಡಲೇ ಕ್ರಮ ಕೈಗೊಳ್ಳಿ. ಮೊದಲು ಅವರನ್ನು ಹೊರಕ್ಕೆ ಹಾಕಿ. ಏನು ದಾಂಧಲೆ ಮಾಡುತ್ತಿದ್ದಾರೆ. ಇದೇನು ಸಭೆನೋ ಏನು ಏನಿದು ನಿಮ್ಮ ಅವಿವೇಕ.

(ಗೊಂದಲ)

ಶ್ರೀ ಬಿ. ಕೆ. ಶಿವಕುಮಾರ್.—ತಾವು ಈ ವಾಟಾಳ್ ನಾಗರಾಜ್ ಅವರಿಗೆ ಬುದ್ಧಿವಾದ ಹೇಳ ಬೇಕು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ತಾವು ಕುಳಿತುಕೊಳ್ಳಿರಿ...

(ಗೊಂದಲ)

ಶ್ರೀ ಹರ್ಷಕುಮಾರ್ ಗೌಡ.—ಮಾನ್ಯ ಅಧ್ಯಕ್ಷರೇ, ಧರ್ಮದ ಹೆಸರಿನಲ್ಲಿ ಈ ಸದನವನ್ನು ದುರುಪಯೋಗ ಪಡಿಸಿಕೊಳ್ಳುವುದಕ್ಕೆ ಸಾಧ್ಯ ಇಲ್ಲ. ಇದನ್ನು ರಾಜಕೀಯ ಬಂಡವಾಳವನ್ನಾಗಿ ಮಾಡಿಕೊಳ್ಳುವುದಕ್ಕೆ ಸಾಧ್ಯ ಇಲ್ಲ. ಈ ಸದನ ಎಲ್ಲ ಧರ್ಮಗಳಿಗೆ ಸೇರಿದ್ದು.

(ಗೊಂದಲ)

ಶ್ರೀ ಹರ್ಷಕುಮಾರ್ ಗೌಡ.—ಈ ರೀತಿ ಆದರೆ ರಾಜ್ಯದ ಜನರು ಬದುಕುವುದಕ್ಕೆ ಸಾಧ್ಯವೇ ?

ಶ್ರೀ ವಾಟಾಳ್ ನಾಗರಾಜ್.—ಕಾಂಗ್ರೆಸ್ ಸದಸ್ಯರು ಬಹಳ ಬೇಜವಾಬ್ದಾರಿಯಿಂದ ನಡೆದು ಕೊಳ್ಳುತ್ತಿದ್ದಾರೆ. ಅವರು ಜವಾಬ್ದಾರಿಯಿಂದ ನಡೆದುಕೊಳ್ಳಬೇಕು.

(ಗೊಂದಲ)

ಶ್ರೀ ಕೆ. ಲಕ್ಕಣ್ಣ.—ವಾಟಾಳ್ ನಾಗರಾಜ್‌ರವರು ಯಾವಾಗ ಜಾತಿವಾದಿ ಪಕ್ಷವನ್ನು ಸೇರಿದರು.

(ಗೊಂದಲ)

ಚೇರ್ಮನ್. - ತಾವು ದಯವಿಟ್ಟು ಕುಳಿತುಕೊಳ್ಳಬೇಕು. ಈಶ್ವರಪ್ಪನವರೇ ತಾವು ತಮ್ಮ ಸ್ಪೀಚ್ ಶುರು ಮಾಡಿ ಬೇಗ ಮುಗಿಸಿಬಿಡಿ.

(ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವಲ್ಲಿ ಉಪಸ್ಥಿತರಾದರು)

ಶ್ರೀ ಕಾಗೋಡು ತಿಮ್ಮಪ್ಪ.—ಈಶ್ವರಪ್ಪನವರು ಮಾತನಾಡುತ್ತಾ ಈ ಸರಕಾರ ಹಿಂದೂವಿರೋಧಿ ಸರಕಾರವೆಂಬ ಮಾತನ್ನು ಬಳಸಿದ್ದಾರೆ. ಅದನ್ನು ದಯವಿಟ್ಟು ಅವರು ವಾಪಸ್ ತೆಗೆದುಕೊಳ್ಳಬೇಕು.

ಶ್ರೀ ಬಿ.ಕೆ. ಶಿವಕುಮಾರ್.—ಅದನ್ನು ಕಡತದಿಂದ ತೆಗೆಸಿ ಹಾಕಬೇಕು.

ಶ್ರೀ ವಿನಯಕುಮಾರ್ ಸೊರಕೆ.—ಅವರು ಪ್ರಚೋದನೆ ಮಾಡುತ್ತಿದ್ದಾರೆ.

ಶ್ರೀ ಹರ್ಷಕುಮಾರ್ ಗೌಡ.—ಈ ಸದನವನ್ನು ಧರ್ಮದ ಹೆಸರಿನಲ್ಲಿ ದುರುಪಯೋಗ ಮಾಡುವುದಕ್ಕೆ ಅವಕಾಶ ಕೊಡಬೇಡಿ ಅಧ್ಯಕ್ಷರೇ.

ಅಧ್ಯಕ್ಷರು.—ಈಶ್ವರಪ್ಪನವರೇ, ನೀವು ಹೊಸ ಸದಸ್ಯರು, ಹೊಸದಾಗಿ ಈ ಮನೆಗೆ ಬಂದಿದ್ದೀರಿ. ಚೆನ್ನಾಗಿ ಮಾತನಾಡುತ್ತೀರಿ. ಈ ಪದವನ್ನು ವಾಪಸ್ ತೆಗೆದುಕೊಳ್ಳಿ.

ಶ್ರೀ ಕೆ. ಎಸ್. ಈಶ್ವರಪ್ಪ.—ಏತಕ್ಕೆ ಸ್ವಾಮಿ ವಾಪಸ್ ತೆಗೆದುಕೊಳ್ಳಬೇಕು. ನಾನು ಏನು ಹೇಳಿದೆ ಎಂದು ಕೇಳುತ್ತೇನೆ. ನೀವು ಅದು ತಪ್ಪು ಎಂದು ಹೇಳಿದರೆ ಖಂಡಿತಾ ವಾಪಸ್ ತೆಗೆದುಕೊಳ್ಳುತ್ತೇನೆ. ದ್ರೌಪತಿಯನ್ನು ಉಳಿಸುವುದಕ್ಕೆ ಶ್ರೀ ಕೃಷ್ಣ ಬಂದ ಹಾಗೆ ಬಂದಿದ್ದೀರಿ. ನೀವು ನನಗೆ ಸಹಾಯ ಕೊಡುವುದಕ್ಕೆ ನೀವು ಬಂದಿದ್ದೀರಿ. ಇಷ್ಟೊಂದು ಜನ ದುರುಳರು ತೊಂದರೆ ಕೊಡುತ್ತಿದ್ದಾರೆ. ಶ್ರೀ ಕೃಷ್ಣ ಬಂದಹಾಗೆ ತಾವು ಬಂದಿದ್ದೀರಿ, ತಮಗೆ ಅಭಿನಂದನೆಗಳು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ, ನನ್ನದೊಂದು ಕ್ರಿಯಾಲೋಪ ಇದೆ.

ಅಧ್ಯಕ್ಷರು.—ಈಶ್ವರಪ್ಪನವರೇ, ವಾಟಾಳ್ ನಾಗರಾಜ್ ಅವರದ್ದು ಕ್ರಿಯಾಲೋಪ ಇದೆಯಂತೆ.

ಶ್ರೀ ವಾಟಾಳ್ ನಾಗರಾಜ್.—ತಮ್ಮನ್ನು ಮಹಾಭಾರತದ ಕೃಷ್ಣ ಎಂದು ಹೇಳಿ ಈ ಸದನದಲ್ಲಿ ಏನೋ ಹೇಳಿದ್ದಾರೆ, ಅದೇ ನಡೆದುಕೊಂಡು ಬರುತ್ತಿದೆ. ಎಲ್ಲಾ ಸದಸ್ಯರೂ ತಮ್ಮನ್ನು ಮಹಾಭಾರತದ ಕೃಷ್ಣ ಎಂದು ಹೇಳುತ್ತಿದ್ದಾರೆ. ದ್ರೌಪತಿಯ ಸೀರೆಯನ್ನು ಎಳೆಯುವಾಗ ರಕ್ಷಣೆ ಕೊಡಬೇಕು ಎಂದು ಹೇಳಿದ್ದಾರೆ, ಇಲ್ಲಿ ದ್ರೌಪತಿಯಾರು ಎಂಬುದು ದೊಡ್ಡ ಸಮಸ್ಯೆಯಾಗಿದೆ.

ಅಧ್ಯಕ್ಷರು.—ಈಶ್ವರಪ್ಪನವರು, ಏಕೆಂದರೆ ಅವರೇ ತಾನೆ ರಕ್ಷಣೆ ಕೇಳುತ್ತಿರುವುದು.

ಶ್ರೀ ವಾಟಾಳ್ ನಾಗರಾಜ್.—ಒಂದು ದಿನಕ್ಕೆ ಈ ರೀತಿ ರಕ್ಷಣೆ ಕೇಳುವವರು ಎಂಟು ಜನಇದರೆ, ಎಂಟು ಜನ ದ್ರೌಪತಿಯರನ್ನು ಎಲ್ಲಿಂದ ತರುವುದು.

ಶ್ರೀ ಕೆ. ಎಸ್. ಈಶ್ವರಪ್ಪ.—ದ್ರೌಪತಿಯ ಶಪಥವೇ ದುರ್ಯೋಧನನ ತೊಡೆ ಮುರಿಯಿತು ಎನ್ನುವುದು ಅವರಿಗೆ ನೆನಪಿರಲಿ. ನಾನು ಹೆಚ್ಚು ಹೇಳುವುದಕ್ಕೆ ಇಷ್ಟಪಡುವುದಿಲ್ಲ.

ಅಧ್ಯಕ್ಷರು.—ಈಗ ತಾವು ಆ ಮಾತನ್ನು ವಾಪಸ್ ತೆಗೆದುಕೊಂಡಿದ್ದೀರಿ ತಾನೆ

ಶ್ರೀ ಕೆ. ಎಸ್. ಈಶ್ವರಪ್ಪ.—ನಾನು ಏನು ಹೇಳಿದೆ ಎಂಬುದನ್ನು ತಮಗೆ ತಿಳಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ವಾಪಸ್ ತೆಗೆದುಕೊಳ್ಳದೇ ಇದ್ದರೆ ಸರಿ ಹೋಗುವುದಿಲ್ಲ. ಹಿಂದೂ ವಿರೋಧಿ ಸರಕಾರ ಎಂದು ಹೇಳಿದ್ದನ್ನು ಅವರು ವಾಪಸ್ ತೆಗೆದುಕೊಳ್ಳಲೇಬೇಕು,

(ಗೊಂದಲ)

ಶ್ರೀ ಹರ್ಷಕುಮಾರ್ ಗೌಡ.—ಧರ್ಮದ ಹೆಸರಿನಲ್ಲಿ ಈ ಸರಕಾರ ಹಿಂದೂ ವಿರೋಧಿ ಸರಕಾರ ಎಂದು ಹೇಳಿದ್ದನ್ನು ತಮ್ಮ ಮೂಲಕ ವಿರೋಧಿಸುತ್ತೇನೆ. ಇಂತಹ ಮಾತುಗಳಿಗೆ ತಾವು ಅವಕಾಶ ಕೊಡಬಾರದು. ಅದಕ್ಕೆಲ್ಲಾ ಕಡಿವಾಣ ಹಾಕಬೇಕು.

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ.—ಇದೇ ರೀತಿ ವಿರೋಧ ಮಾಡುತ್ತಿದ್ದಾರೆ ನಾನು ಯಾವ ರೀತಿ ಮಾತನಾಡಬೇಕು ತಾವು ಹೇಳಿರಿ.

ಅಧ್ಯಕ್ಷರು.—ಮಾನ್ಯ ಇದಿನಬ್ಬನವರು,

ಶ್ರೀ ಬಿ. ಎಂ. ಇದಿನಬ್ಬ.—ಅಧ್ಯಕ್ಷರೇ, ಇದೊಂದು ಪವಿತ್ರವಾದ ಸದನ. ನಮ್ಮ ಮಾನ್ಯ ಮಿತ್ರರು ಒಳ್ಳೆಯ ರೀತಿಯಿಂದ ಮಾತನಾಡಿದರೂ ಸಹ, ಕೋಮುವಾರು ಭಾವನೆಯನ್ನು ಪ್ರಚೋದನೆ ಮಾಡ ತಕ್ಕಂಥ, ಮನಸ್ಸಿಗೆ ನೋವಾಗತಕ್ಕಂಥ ವಿಚಾರವನ್ನು ತಂದು ಈ ಸರಕಾರವನ್ನು ಹಿಂದೂವಿರೋಧಿ ಸರಕಾರ ಎಂದು ಹೇಳತಕ್ಕಂಥಾದ್ದು ಈ ಸದನಕ್ಕೆ ಗೌರವಕ್ಕೆ ಸರಿಯಾದ ಮಾತಲ್ಲ. ಆದುದರಿಂದ ಈ ಬಗ್ಗೆ ತಾವು ಸೂಕ್ತ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಕೆ. ಎಸ್. ಈಶ್ವರಪ್ಪ.—ತಾವು ತೀರ್ಮಾನ ಮಾಡುವುದಕ್ಕೆ ಮುಂಚೆ ನಾನು ಏನು ಹೇಳಿದೆ ಎಂದು ಹೇಳುತ್ತೇನೆ. ತಾವು ಈಗ ಯೋಚನೆ ಮಾಡಿ ಹೇಳಿ. ನನ್ನ ಮಾನ್ಯ ಮುಖ್ಯಮಂತ್ರಿಗಳು ನಗರಸಭಾ ಚುನಾವಣೆಗಳನ್ನು ಏತಕ್ಕೆ ಮುಂದಕ್ಕೆ ಹಾಕಿದರು ಎಂದು ಹೇಳುವಾಗ

(ಗೊಂದಲ)

ಅಧ್ಯಕ್ಷರು.—ನಾನೂ ಇನ್ನೂ ಅವರನ್ನು ಕೇಳಿಲ್ಲ, ಅವರು ಹೇಳಿದ್ದನ್ನು ಕೇಳಬೇಕಲ್ಲ. I am listening to him. I would like to listen to what he has said. Then I will decide.

ಶ್ರೀ ಕೆ. ಎಸ್. ಈಶ್ವರಪ್ಪ.— ಅನೇಕ ಸಂದರ್ಭಗಳಲ್ಲಿ ಚುನಾವಣೆಗಳು ಏತಕ್ಕೆ ಮುಂದೆ ಹೋಯಿತು ಎಂದು ಹೇಳತಕ್ಕಂಥ ಸಂದರ್ಭದಲ್ಲಿ ಈಗಾಗಲೇ ೨೦ನೇ ತಾರೀಖು ಮೊಹರಂ ಹಬ್ಬ ಇದೆ, ಆದ್ದರಿಂದ ೨೯ನೇ ತಾರೀಖಿಗೆ ಚುನಾವಣೆಯನ್ನು ಮುಂದಕ್ಕೆ ಹಾಕುತ್ತೇವೆ ಎಂಬ ಮಾತನ್ನು ಹೇಳಿದರು. ಆದರೆ ೨೮ ಮತ್ತು ೨೯ನೇ ತಾರೀಖುಗಳಂದು ಶಂಕರ ಜಯಂತಿ ಮತ್ತು ಬಸವ ಜಯಂತಿ ಇದೆ ಎಂದು ವೀರಶೈವ ಸಮಾಜದವರು ಮತ್ತು ಬ್ರಾಹ್ಮಣ ಸಮಾಜದವರು ಒಂದು ತೀರ್ಮಾನ ಮಾಡಿ ಈ ಬಗ್ಗೆ ಒಂದು ರೆಸಲ್ಯೂಷನ್ ಮಾಡಿ, ಸರಕಾರಕ್ಕೆ ಮನವಿ ಅರ್ಪಿಸಿದ್ದಾರೆ. ಅದನ್ನು ಎಲ್ಲ ಶಾಸಕರಿಗೂ ಕೊಟ್ಟಿದ್ದಾರೆ, ನನಗೂ ಕೂಡಾ ಮನವಿ ಕಳುಹಿಸಿಕೊಟ್ಟಿದ್ದಾರೆ. ಸರಕಾರ ಇದರ ಕಡೆ ಗಮನಹರಿಸದೆ, ಯಾವರೀತಿ ಮುಸಲ್ಮಾನರ ಹಬ್ಬಕ್ಕೆಂದು ಚುನಾವಣೆಯನ್ನು ಮುಂದೆ ಹಾಕಿದರೋ ಅದೇ ರೀತಿ ಹಿಂದೂ ಹಬ್ಬಗಳಿಗೂ ಸಹ ಚುನಾವಣೆಯನ್ನು ಮುಂದಕ್ಕೆ ಹಾಕಬೇಕಾಗಿತ್ತು. ಆ ಸಂದರ್ಭದಲ್ಲಿ ಚುನಾವಣೆ ಯನ್ನು ಮುಂದಕ್ಕೆ ಹಾಕಿದ ಸರಕಾರ. ಈ ಸಂದರ್ಭದಲ್ಲಿ ಚುನಾವಣೆಯನ್ನು ಮುಂದಕ್ಕೆ ಹಾಕದೇ ಇರುವ ಕಾರಣದಿಂದ ಈ ಸರಕಾರವನ್ನು ಹಿಂದೂ ವಿರೋಧಿ ಸರಕಾರ ಎಂದು ಕರೆಯಬೇಕೋ ಅಥವಾ ಏನೆಂದು ಕರೆಯಬೇಕು ಹೇಳಿರಿ. ಸಭಾಧ್ಯಕ್ಷರೆ ನಾನು ತಮಗೆ ಪೂರ್ಣ ಗೌರವ ಕೊಡುತ್ತೇನೆ. ಅದು ನನ್ನ ಕರ್ತವ್ಯ. ಇವರು ಯಾರು ಕೂಗಾಡಿದರೂ ನಾನು ಆ ರೀತಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ತಾವು ಹೇಳಿದ ರೀತಿಯಲ್ಲಿ ನಾನು ಕೇಳುತ್ತೇನೆ.

ಅಧ್ಯಕ್ಷರು.—ಸರಕಾರ ಚುನಾವಣೆಗಳನ್ನು ಮುಂದುವರಿಸುವುದಾಗಲೀ ಅಥವಾ ರದ್ದು ಮಾಡುವು ದಾಗಲೀ, ಅವರ ಆಡಳಿತಾತ್ಮಕ ಚೌಕಟ್ಟಿನಲ್ಲಿ ಮಾಡಿರತಕ್ಕಂಥ ತೀರ್ಮಾನ. ಇದು ಒಂದು ಹಬ್ಬಕ್ಕೋಸ್ಕರವಾಗಲೀ, ಒಂದು ಮತಕ್ಕೋಸ್ಕರವಾಗಲೀ, ಒಂದು ಜಾತಿಗೋಸ್ಕರವಾಗಲೀ, ಏನಾದರೂ ಆಗಿರಲಿ, ಆದರೆ ಈ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ತಾವು ಭಾಷಣ ಮಾಡತಕ್ಕಂಥ ಸಂದರ್ಭದಲ್ಲಿ ಯಾವುದೇ ಸರಕಾರವನ್ನಾಗಲೀ, ಯಾವುದೇ ಪಕ್ಷವನ್ನಾಗಲೀ, ಇದು ಹಿಂದೂ ವಿರೋಧಿ ಪಕ್ಷ, ಇದು ಮುಸಲ್ಮಾನ್ ವಿರೋಧಿ ಪಕ್ಷ, ಇದು ಜೈನರ ವಿರೋಧಿ ಪಕ್ಷ ಅಥವಾ ಸರಕಾರ

ಎಂದು ಇಂತಹ ಪದಗಳನ್ನು ಬಳಸುವುದರಿಂದ ನಮ್ಮ ದೇಶದಲ್ಲಿರತಕ್ಕಂಥ ಏನು ಮತೀಯ ಸೌಹಾರ್ದ ಇದೆ, ಆ ಸೌಹಾರ್ದವನ್ನು ನಾವು ವರ್ಧನೆ ಮಾಡಿದ ಹಾಗೆ ಆಗುವುದಿಲ್ಲ. ಆ ಸೌಹಾರ್ದಕ್ಕೆ ಕೊಡಲಿ ಪೆಟ್ಟು ಹಾಕಿದಹಾಗೆ ಆಗುತ್ತದೆ. ಆದುದರಿಂದ ದಯವಿಟ್ಟು ಅದನ್ನು ಉಪಯೋಗಿಸಬೇಡಿ.

ಶ್ರೀ ಕೆ. ಎಸ್. ಈಶ್ವರಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಆಡಳಿತದಲ್ಲಿ ಈ ಸರಕಾರದ ನಿರ್ಲಕ್ಷ್ಯ ಎಷ್ಟರಮಟ್ಟಿಗೆ ಇದೆ ಎಂಬುವಕ್ಕೆ ಒಂದು ಅಂಶವನ್ನು ಮಾತ್ರ ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಶಿವಮೊಗ್ಗದಲ್ಲಿ ಮೈನ್ಸ್ ಅಂಡ್ ಜಿಯಾಲಜಿ ಡಿಪಾರ್ಟ್‌ಮೆಂಟ್‌ನಲ್ಲಿ ಒಂದು ಲಾರಿ ಕೆಟ್ಟು ಮೂರು ತಿಂಗಳಾಯಿತು.

ಅಧ್ಯಕ್ಷರು.—ಈಶ್ವರಪ್ಪನವರೇ, ನೀವು ಈಗಾಗಲೇ ಸಾಕಾದಷ್ಟು ಮಾತನಾಡಿದ್ದೀರಿ. ೪೦ ನಿಮಿಷ ಆಗಿದೆ. ಇನ್ನೂ ೨೦-೨೧ ಜನ ಮಾನ್ಯ ಸದಸ್ಯರು ಇವತ್ತು ಈ ಚರ್ಚೆಯಲ್ಲಿ ಭಾಗವಹಿಸಬೇಕಾಗಿದೆ. ನಮ್ಮ ಸದನದ ಕಾರ್ಯಕಲಾಪದ ಬಗ್ಗೆ ಸಲಹೆ ಮಾಡುತ್ತಾರಲ್ಲ, ಅವರು ತೀರ್ಮಾನ ಮಾಡಿದ್ದಾರೆ. ಆದುದರಿಂದ ಎರಡು ನಿಮಿಷದಲ್ಲಿ ಮುಗಿಸಿ.

ಶ್ರೀ ಕೆ. ಎಸ್. ಈಶ್ವರಪ್ಪ.—ಆ ಲಾರಿ ಮೂರು ತಿಂಗಳಿಂದ ರಿಪೇರಿ ಆಗದೇ ಇದೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅವರು ಲಾರಿ ಕೆಟ್ಟಿದೆ ಎಂದು ಹೇಳುತ್ತಿದ್ದಾರೆ ಆದರೆ ಅವರ ಗಂಟಲು ಕೆಡಬಾರದು ಅಷ್ಟೆ. We are worried about that.

ಶ್ರೀ ಎಂ. ಎಸ್, ಆತ್ಮಾನಂದ.—ಇಲ್ಲ ಅವರು ನೀರು ತರಿಸಿಕೊಂಡು ಕುಡಿದಿದ್ದಾರೆ.

ಶ್ರೀ ಕೆ. ಎಸ್. ಈಶ್ವರಪ್ಪ.—ಸರಕಾರದವರು ಇಲ್ಲಿ ಆದರೂ ನೀರು ಕೊಡುತ್ತಿದ್ದಾರೆ. ಆದರೆ ಹಳ್ಳಿಯಲ್ಲಿ ನೀರು ಕೊಡುತ್ತಿಲ್ಲ, ಆ ಲಾರಿ ರಿಪೇರಿಗೆ ಕೇವಲ ಒಂದು ಸಾವಿರ ರೂಪಾಯಿ ಖರ್ಚು ಬರುತ್ತದೆ. ಅದನ್ನು ಸಂಬಂಧಪಟ್ಟ ಆಫೀಸಿಗೆ ಕಳುಹಿಸಿಕೊಟ್ಟಿದ್ದಾರೆ. ಮೂರು ತಿಂಗಳಾದರೂ ಆ ಆಫೀಸ್‌ನಿಂದ ಉತ್ತರ ಬಂದಿಲ್ಲ. ಆ ಇಲಾಖೆಯವರು ಅಲ್ಲಿ ಪ್ರತಿದಿನ ಲಾರಿಯನ್ನು ಬಾಡಿಗೆಗೆ ಪಡೆಯುತ್ತಿದ್ದಾರೆ. ಮೂರು ತಿಂಗಳ ಬಾಡಿಗೆ ಎಷ್ಟಾಗಬಹುದು ತಾವೇ ವಿಚಾರ ಮಾಡಿ. ಸರಕಾರ ಈ ರೀತಿ ನಿರ್ಲಕ್ಷ್ಯ ಭಾವನೆ ತಳೆದಿದೆ. ತಕ್ಷಣ ಇದರ ಬಗ್ಗೆ ಗಮನ ಕೊಡಬೇಕೆಂದು ಮನವಿ ಮಾಡುತ್ತೇನೆ. ಕೊನೆಯದಾಗಿ ಒಂದು ಮಾತು ಹೇಳುತ್ತೇನೆ. ಮುಜರಾಯಿ ಇಲಾಖೆಯಲ್ಲಿ ಶಿವಮೊಗ್ಗ ಜಿಲ್ಲೆಯ ದೇವಸ್ಥಾನಗಳಿಗೆ ನೀಡುತ್ತಿರುವ ತಸ್‌ದೀಕ್ ಹಣ ಮೈಸೂರು, ಹಾಸನ, ಚಿಕ್ಕಮಗಳೂರು ಜಿಲ್ಲೆಗಳಿಗಿಂತ ತುಂಬಾ ಕಡಿಮೆ ಇದೆ.

೪.೩೦ ಪಿ.ಎಂ.

ಉದಾಹರಣೆಗೆ ಹೇಳುವುದಾದರೆ ಶಿವಮೊಗ್ಗ ಜಿಲ್ಲೆಯಲ್ಲಿ ತರಿ ಜಮೀನಿನ ಆದಾಯ ೧೦೨ ರೂಪಾಯಿ ಆದರೆ ಅದೇ ಬೇರೆ ಜಿಲ್ಲೆಗಳಿಗೆ ೫೦೦ರಿಂದ ೬೦೦ ರೂಪಾಯಿಗಳನ್ನು ಸರ್ಕಾರ ಕೊಡುತ್ತಿದ್ದಾರೆ. ಯಾವುದೇ ಅಭಿವೃದ್ಧಿ ವಿಷಯ ತೆಗೆದುಕೊಳ್ಳಿ ಶಿವಮೊಗ್ಗ ಜಿಲ್ಲೆಯಲ್ಲಿ ಕೃಷಿ ಕಾಲೇಜು ಬರಲಿಲ್ಲ. ಮೆಡಿಕಲ್ ಕಾಲೇಜು ಬರುತ್ತಿಲ್ಲ, ಪ್ರಭಾವಯುತರಾದಂತಹ ಮಂತ್ರಿಗಳಿದ್ದರೂ ಸಹ ಈ ಜಿಲ್ಲೆಗೆ ಒಂದು ತರಹ ಮಲತಾಯಿ ಧೋರಣೆಯನ್ನು ತೋರಿಸುತ್ತಿದ್ದಾರೆಂದು ನಾನು ಈ ಸಂದರ್ಭದಲ್ಲಿ ಪದೇ ಪದೇ ಹೇಳುವಂತಹ ಪರಿಸ್ಥಿತಿ ಬಂದಿದೆ. ದಯಮಾಡಿ ಶಿವಮೊಗ್ಗ ಜಿಲ್ಲೆ ಒಂದೇ ಅಲ್ಲ, ಎಲ್ಲಾ ಜಿಲ್ಲೆಗಳಿಗೂ ಅನ್ವಯವಾಗುವಂತಹ ರೀತಿಯಲ್ಲಿ ಇಡೀ ಕರ್ನಾಟಕ ರಾಜ್ಯಕ್ಕೆ ಅನ್ವಯವಾಗುವಂತಹ ರೀತಿಯಲ್ಲಿ ಒಂದು ಮುಜರಾಯಿ ಕಾಯ್ದೆಯನ್ನು ಜಾರಿಗೆ ತರಬೇಕೆಂದು ಹೇಳಿ ಇದುವರೆಗೂ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಡಾಕ್ಟರ್ ಜಿ. ಪರಮೇಶ್ವರ (ಮಧುಗಿರಿ).—ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನೆಗಳನ್ನು ಅರ್ಪಿಸುತ್ತಾ ನನ್ನ ಭಾಷಣವನ್ನು ಪ್ರಾರಂಭ ಮಾಡುತ್ತಿದ್ದೇನೆ. ನಿನ್ನೆಯ ದಿವಸ ಮಾನ್ಯ ಹಿರಿಯ ಸದಸ್ಯರೊಬ್ಬರು ಮಾತನಾಡುವಾಗ ಒಂದು ಮಾತನ್ನು ಹೇಳಿದರು. ಅದೇನೆಂದರೆ ಸುಮಾರು ೪೨ ವರ್ಷಗಳಿಂದ ಈ ದೇಶವನ್ನು ಆಳಿದಂತಹ ಪಕ್ಷ ಪಾಪ ಮಾಡಿದೆ ಎಂದು. ಅದು ಹೇಗೆ ಎಂದು ನನಗೆ ಅರ್ಥವಾಗಲಿಲ್ಲ. I do not know whether he has said with his ignorance with shere desperation. ಕಳೆದ ೪೨ ವರ್ಷಗಳಲ್ಲಿ ನಾವು ಮಾಡಿರತಕ್ಕಂಥ ಅಭಿವೃದ್ಧಿಯನ್ನು ಈ ಸದನದ ಮುಂದೆ ಇಡುವುದಕ್ಕೆ ನಾನು ಇಷ್ಟಪಡುತ್ತೇನೆ. ೧೯೬೦ರ ದಶಕದಲ್ಲಿ ಈ ದೇಶಕ್ಕೆ ನಾವು ಆಹಾರ ಪದಾರ್ಥಗಳನ್ನು ಆಮದು ಮಾಡಿಕೊಳ್ಳುತ್ತಿದ್ದೆವು, ಆದರೆ ೧೯೮೦ನೇ

ಇಸವಿಯೊಳಗೆ ನಮಗೆ ಬೇಕಾದಂತಹ ಆಹಾರ ಪದಾರ್ಥಗಳ ಉತ್ಪಾದನೆಯನ್ನು ನಾವೇ ಮಾಡಿಕೊಳ್ಳುವಂತಹ ಸಾಮರ್ಥ್ಯವನ್ನು ಪಡೆದಿದ್ದೇವೆ. I was fortunate in participating a Conference in Sydney in 1980 wherein They declared that India is self-sufficient in food production.. ನಾನು ಈ ಪ್ರಶ್ನೆಯನ್ನು ಏತಕ್ಕೆ ಕೇಳುತ್ತೇನೆ ಎಂದು ಹೇಳಿದರೆ, ಇದು ನಾವು ಮಾಡಿದ ಪಾಪವೇ? ಇವತ್ತಿನದಿವಸ ನಾವು ವಿಜ್ಞಾನದಲ್ಲಿ ತೆಗೆದುಕೊಳ್ಳಲಿ, ನಾವು ನಮ್ಮದೇ ಆದಂತಹ ಸೆಟ್‌ಲೈಟ್ ಮಾಡತಕ್ಕಂಥ ಸ್ಥಿತಿಗೆ ಬಂದಿದ್ದೇವೆ. ಸೂಪರ್ ಕಂಡಕ್ಟರ್ಸ್ ಮಾಡುವಂತಹ ಸ್ಥಿತಿಗೆ ಬಂದಿದ್ದೇವೆ. ಹೊಸ ಹೊಸ ತಳಿಗಳನ್ನು ಕೃಷಿ ಕ್ಷೇತ್ರದಲ್ಲಿ ಮಾಡುವಂತಹ ಪರಿಸ್ಥಿತಿಗೆ ನಾವು ಬಂದಿದ್ದರೂ ಅವರು ಏತಕ್ಕೆ ಆ ಮಾತನ್ನು ಹೇಳಿದರೋ ನನಗೆ ಗೊತ್ತಾಗಲಿಲ್ಲ. ನಾವು ಸಹ ಕೆಲವು ಸಾರಿ ತಪ್ಪುಗಳನ್ನು ಮಾಡಿರಬಹುದು. ನೀತಿಗಳನ್ನು ರೂಪಿಸುವಾಗ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವಾಗ ನಾವು ಕೆಲವು ತಪ್ಪುಗಳನ್ನು ಮಾಡಿದ್ದೇವೆ. ಇದನ್ನು ವಿರೋಧ ಪಕ್ಷದವರೂ ಮಾಡಿದ್ದಾರೆ ತಪ್ಪನ್ನು ನೀವು ಮಾಡಿದ್ದು ಅಥವಾ ನಾವು ಮಾಡಿದ್ದು ಎಂದು ಹೇಳುವುದನ್ನು ಬಿಟ್ಟು ಎಲ್ಲರೂ ಸೇರಿ ಇದನ್ನು ಸರಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಮೊನ್ನೆ ಬೆಂಗಳೂರಿನಲ್ಲಿ ಒಂದು ಸೆಮಿನಾರ್ ಆಯಿತು ಅಲ್ಲಿ ಒಂದು ನಿರ್ಣಯ ಮಾಡಿದರು. ಅದೇನೆಂದರೆ Country has began to lose its momentum: the economic values become more. frequent difficulties began to accumulate and deteriorating... ಅದನ್ನು ಯಾವ ಉದ್ದೇಶಕ್ಕೆ ಮಾಡಿದರೆಂದರೆ ರಷ್ಯ ದೇಶದವರು ಪೆರಾಸ್ಟ್ರೋಯ್ಕ ಮತ್ತು ಗ್ಲಾಸ್‌ನಾಸ್ಟ್ ಅನ್ನು ಮಾಡಿದ್ದಾರೆ, ಆದೇರೀತಿ ನಮ್ಮ ದೇಶದ ಪರಿಸ್ಥಿತಿಯನ್ನು ನಾವು ರಿವ್ಯೂ ಮಾಡಬೇಕಾಗುತ್ತದೆ. ಅನೇಕ ಕಾರ್ಯಕ್ರಮಗಳನ್ನು ನಾವು ರಿವ್ಯೂ ಮಾಡಬೇಕಾಗುತ್ತದೆ. ಅನೇಕ ನಮ್ಮ ಪಾಲಿಸಿಗಳನ್ನು ರಿವ್ಯೂ ಮಾಡಬೇಕಾಗುತ್ತದೆ. ಆದಕ್ಕೆ ಕರ್ನಾಟಕ ರಾಜ್ಯದಲ್ಲಿ ಈ ಭರತ ಖಂಡದಲ್ಲಿ ಪೆರಿಸ್ಟ್ರೋಯಿಕ್ ಮತ್ತು ಗ್ಲಾಸ್‌ನಾಸ್ಟ್ ಆಗಲಿ ಇದನ್ನುಯಾವ ಹೆಸರಿನಿಂದ ಬೇಕಾದರೂ ಕರೆಯಿರಿ. ಆದರೆ ಒಂದು ರಿವ್ಯೂ ಮಾಡಬೇಕಾಗುತ್ತದೆ ಎನ್ನುವ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡುವಾಗ ಬಹಳ ಜನ ಸದಸ್ಯರು ಆಡಳಿತದಲ್ಲಿ ದಕ್ಷತೆ ತರುತ್ತೇವೆಂದು ಹೇಳಿದ್ದಿರಿ ಮತ್ತು ಆಡಳಿತವನ್ನು ಸರಿ ಮಾಡುತ್ತೇವೆಂದು ಹೇಳಿದ್ದಿರಿ ಆದರೆ ಆ ಬಗ್ಗೆ ಏನೂ ಹೇಳಲಿಲ್ಲವೆಂದು ಹೇಳಿದ್ದಾರೆ. One of the foremost tasks my Government has set for itself is improving efficiency in administration and injecting service discipline ಇದರಲ್ಲಿ ಮೂರು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. 'Firstly, a Bureau of Efficiency Audit and Vigilance is being set up. Secondly, a Systems Research Organisation comprising of experienced civil servants and reputed management experts and thirdly, a Screening Committee headed by a retired High Court Judge is being constituted to review the performance of Officers at all levels'... ಇದರ ಅವಶ್ಯಕತೆ ನಮಗೆ ಇದೆ ಏಕೆಂದರೆ ಅದಕ್ಕೆ ಇಂತಹ ಕಾರ್ಯಕ್ರಮವನ್ನು ೪೨ ವರ್ಷಗಳ ನಂತರ ನಾವು ರಿವ್ಯೂ ಮಾಡದೆ ಹೋದರೆ ಈ ದೇಶದ ಪರಿಸ್ಥಿತಿ ಮುಂದೆ ಯಾವ ಕಡೆ ಹೋಗುತ್ತದೆ ಎನ್ನುವುದನ್ನು ರಿವ್ಯೂಮಾಡದೆ ನಮ್ಮ ಪರ್‌ಫಾರ್ಮೆನ್ಸ್‌ನ್ನು ರಿವ್ಯೂ ಮಾಡದೆ ನಮ್ಮ ಕಾರ್ಯಕ್ರಮಗಳನ್ನು ರಿವ್ಯೂ ಮಾಡದೆ ಮತ್ತೆ ನಾವು ೪೨ ವರ್ಷಗಳ ನಂತರ ಯಾವ ಕಡೆ ಹೋಗುತ್ತೇವೆ ಎನ್ನುವುದನ್ನು ತಿಳಿದುಕೊಂಡರೆ may be it will be too late. ಏಕೆ ಈ ಮಾತನ್ನು ನಾನು ಹೇಳುತ್ತಿದ್ದೇನೆಂದರೆ, ಉದಾಹರಣೆಗಳನ್ನು ಕೊಡಬೇಕಾಗುತ್ತದೆ. I must justify my statement... ಫೈನಾನ್ಷಿಯಲ್ ಲ್ಯಾಪ್ಸ್‌ಸ್ ಅನ್ನು ಬಹಳಷ್ಟು ನೋಡಿದ್ದೇವೆ. ಕೇಳಿದ್ದೇವೆ. ಇದು ಕರ್ನಾಟಕ ರಾಜ್ಯಕ್ಕೆ ಸೀಮಿತವಾದುದಲ್ಲ. ಇದು ಭರತಖಂಡಕ್ಕೆ ಸೀಮಿತವಾದದು. ೧೩೦೦ ಕೋಟಿ ಎಕ್ಸಸ್ ಎಕ್ಸ್‌ಪೆಂಡೀಚರನ್ನು ಕಳೆದ ಸರ್ಕಾರದವರು ಮಾಡಿದ್ದಾರೆಂದು ನಾವು ಕೇಳಿದ್ದೇವೆ. ಇದು ಯಾವ ಕಾರಣಕ್ಕಾಯಿತು? ನಮಗೆ ಬಜೆಟ್ ಇರಲಿಲ್ಲವೆ? ನಮಗೆ ಅಲಾಟ್‌ಮೆಂಟ್ ಆಫ್ ಫಂಡ್ ಇರಲಿಲ್ಲವೆ? ನಮ್ಮ ಅಧಿಕಾರಿಗಳು ಏನು ಮಾಡುತ್ತಿದ್ದರು? ಯಾರು ಹಣಕಾಸಿನ ಜವಾಬ್ದಾರಿಯನ್ನು ತೆಗೆದುಕೊಂಡಿದ್ದರೋ ಅವರು ಏನು ಮಾಡುತ್ತಿದ್ದರು? ಅವರು ಒಂದು ವೇಳೆ ಏನಾದರೂ ಎಕ್ಸಸ್ ಎಕ್ಸ್‌ಪೆಂಡೀಚರ್ ಮಾಡಿದಾಗ ಅವರಿಗೆ ಶಿಕ್ಷೆ ಕೊಟ್ಟಿದ್ದಾರೆಯೇ? ಅವರಿಗೆ ಮೆಮೋ ಇಷ್ಯೂ ಮಾಡಿದ್ದಾರೋ ಎಂದು ಕೇಳುತ್ತೇನೆ. ಇದಕ್ಕೆ ಒಂದು ಉದಾಹರಣೆಯನ್ನು ತಮ್ಮ ಮುಂದೆ ಇಡುವುದಕ್ಕೆ ಇಷ್ಟಪಡುತ್ತೇನೆ. ತುಮಕೂರು ಜಿಲ್ಲಾಪರಿಷತ್ತಿನಲ್ಲಿ ೪೦ ಲಕ್ಷ ರೂಪಾಯಿಗಳನ್ನು ೧೯೮೦-೮೧ರಲ್ಲಿ ಸ್ಪೆಷಲ್ ಕಾಂಪೋನೆಂಟ್‌ನಲ್ಲಿ ಕೊಟ್ಟಿದ್ದ ಹಣವನ್ನು ಖರ್ಚು ಮಾಡಲಿಲ್ಲ. ನಾನು ಈ

ಪ್ರಶ್ನೆಯನ್ನು ಜಿಲ್ಲಾಪರಿಷತ್ತಿನಲ್ಲಿ ಕೇಳಿದೆ. ನೀವು ಏಕೆ ಖರ್ಚು ಮಾಡಲಿಲ್ಲವೆಂದು. ಇಲ್ಲ, ಮುಂದಿನ ವರ್ಷ ಮಾಡುತ್ತೇವೆಂದು ಹೇಳಿದರು. ಇದರ ಅರ್ಥ ನನಗೆ ಆಗಲಿಲ್ಲ. ಒಂದು ವರ್ಷದಲ್ಲಿ ಆಯವ್ಯಯದಲ್ಲಿ ನಾವು ಇಷ್ಟನ್ನು ಖರ್ಚು ಮಾಡಬೇಕೆಂದು ತೀರ್ಮಾನ ತೆಗೆದುಕೊಂಡಾಗ ನಿಗದಿ ಮಾಡಿದಾಗ ಅವರು ಖರ್ಚು ಮಾಡಲಿಲ್ಲ. ಅದು ಎಂತಹ ಸ್ಕೀಮ್? ಸ್ಪೆಷಲ್ ಕಾಂಪೋನೆಂಟ್ ಸ್ಕೀಮ್. ಬಡ ಜನರಿಗೆ ಇಟ್ಟಿರತಕ್ಕಂಥ ೪೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಿಲ್ಲವೆಂದರೆ, ಇದಕ್ಕೆ ಯಾರು ಹೊಣೆಯಾಗಬೇಕು? ಇನ್ನು ಮೊನ್ನೆ ತಾನೆ ನಾನು ವಿದ್ಯುತ್ ಮಂತ್ರಿಗಳಿಗೆ ಒಂದು ಕಾಲಿಂಗ್ ಅಟೆನ್ಷನ್ ಹಾಕಿ ಕೇಳಿದ್ದೆ. ನಮ್ಮ ತಾಲ್ಲೂಕಿನಲ್ಲಿ ೮೦ ಲಕ್ಷ ರೂಪಾಯಿ ಬೆಲೆ ಬಾಳುವ ಒಂದು ಟ್ರಾನ್ಸ್‌ಫಾರ್ಮರ್ ಸುಟ್ಟುಹೋಗಿದೆ. ಅದು ಯಾವ ಕಾರಣಕ್ಕಾಯಿತು? ಅದನ್ನು ಸರಿಯಾಗಿ ಆಪರೇಟ್ ಮಾಡದೆ ಇರುವುದರಿಂದ ಸುಟ್ಟು ಹೋಗಿದೆ. ಎಂದು ಹೇಳಿದರು. ಈ ತಪ್ಪನ್ನು ಯಾರ ಮೇಲೆ ಹಾಕಬೇಕು? ಇಂಥಾ ಸಮಸ್ಯೆಗಳ ಬಗ್ಗೆ ಇವತ್ತಿನ ರಿವ್ಯೂ ಮಾಡಬೇಕಾಗಿದೆ. ಜವಾಬ್ದಾರಿಯನ್ನು ಫಿಕ್ಸ್ ಮಾಡಬೇಕಾಗಿದೆ. ಇದಕ್ಕಾಗಿ ಅಡ್ಮಿನಿಸ್ಟ್ರೇಷನ್ ಅನ್ನು ಗೇರ್ ಅಪ್ ಮಾಡುತ್ತೇವೆಂದು ನಮ್ಮ ಸರ್ಕಾರ ಹೇಳಿದೆ. ಇದಕ್ಕಿಂತ ಹೆಚ್ಚಿಗೆ ವಿರೋಧ ಪಕ್ಷದವರು ಏನನ್ನು ಎಕ್ಸ್‌ಪೆಕ್ಟ್ ಮಾಡುತ್ತಾರೆಂದು ನನಗೆ ಅರ್ಥವಾಗುತ್ತಿಲ್ಲ. ಇದರಲ್ಲಿ ನಾನು ಒಂದು ಸಜೆಷನ್‌ನ್ನು ನಮ್ಮ ಹಣಕಾಸಿನ ಮಂತ್ರಿಯವರಿಗೆ ಮತ್ತು ನಮ್ಮ ಸರ್ಕಾರಕ್ಕೆ ಕೊಡುವುದಕ್ಕೆ ಇಷ್ಟಪಡುತ್ತೇನೆ. Let there be a Commit ee to review the finance management every four months or 3 months whidhever is convenient.. ಆಗ ಮಾತ್ರ ನಾವು ನಮ್ಮ ಹಣಕಾಸಿನ ವ್ಯವಸ್ಥೆಯನ್ನು ಎಷ್ಟರ ಮಟ್ಟಿಗೆ ನಾವು ಸರಿಯಾಗಿ ನೋಡಿಕೊಳ್ಳುತ್ತಿದ್ದೇವೆ? ಎಷ್ಟರ ಮಟ್ಟಿಗೆ ನಾವು ಎಲ್ಲಿ ತಪ್ಪನ್ನು ಮಾಡುತ್ತಿದ್ದೇವೆ. ಹಾಗೂ ಅದನ್ನು ಹೇಗೆ ಸರಿಪಡಿಸಿಕೊಳ್ಳಬೇಕೆನ್ನುವ ಅವಕಾಶ ಬಹುಶಃ ನಮಗೆ ಸಿಗುತ್ತದೆಂದು ನನ್ನ ಭಾವನೆ ಆಗಿದೆ ಎಂದು ಸರ್ಕಾರಕ್ಕೆ ನಾನು ಸಲಹೆ ಕೊಡುವುದಕ್ಕೆ ಇಷ್ಟಪಡುತ್ತೇನೆ.

ಸನ್ಮಾನ್ಯ ಅಧ್ಯಕ್ಷರೆ, ಈ ದೇಶದಲ್ಲಿ ನಾವು ೪೨ ವರ್ಷವಾದ ನಂತರ ೩೨ ಪರ್ಸೆಂಟ್ ಲಿಟರೇಟ್ಸ್‌ನ್ನು ತಯಾರು ಮಾಡಿದ್ದೇವೆ. ಅದು ಎಂತಹ ಲಿಟರೇಟ್ಸ್‌ನ್ನು ತಯಾರು ಮಾಡಿದ್ದೇವೆಂದರೆ, ನಾನು ತಮಗೆ ಈ ಅಂಕಿ ಅಂಶಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಇದರಲ್ಲಿ plus one or two percent deviation ಇರಬಹುದು ನಾವು ಜನರಲ್ ಎಜುಕೇಷನ್‌ಗೆ ಪ್ರಾಧಾನ್ಯತೆಯನ್ನು ಕೊಟ್ಟಿದ್ದೇವೆ. If you take degree coll ges in the State. There are 450 degree colleges. ಅವರೇಜ್ ೫೦೦ ಸ್ಟೂಡೆಂಟ್ಸ್‌ಗಳನ್ನು ಅಡ್ಮಿಷನ್ ತೆಗೆದುಕೊಂಡರೆ ೨ ಲಕ್ಷದ ೨೫ಸಾವಿರ ಜನರು ಗ್ರ್ಯಾಜುಯೇಟ್ಸ್ ಪ್ರತಿ ವರ್ಷವೂ ಹೊರಗಡೆ ಬರುತ್ತಾರೆ. They come out with a degree in History, Econom cs, Political Science, with a Degree in Arts Science... ೨ ಲಕ್ಷದ ೨೫ ಸಾವಿರ ಜನರನ್ನು ಈ ರೀತಿ ತಯಾರು ಏನು ಮಾಡುವುದಕ್ಕಾಗಿ ಮಾಡುತ್ತಿದ್ದೇವೆಂದು ನಾವು ಯೋಚನೆ ಮಾಡಿದ್ದೇವೆಯೇ ? ಇದು ಎಲ್ಲರ ಜವಾಬ್ದಾರಿ. ಇದು ಒಂದು ಪಕ್ಷದ ಜವಾಬ್ದಾರಿಯಲ್ಲ. ನಾನು ಒಂದು ಪ್ರಶ್ನೆಯನ್ನು ಈ ಸಂದರ್ಭದಲ್ಲಿ ಕೇಳುತ್ತೇನೆ. ಹಿಸ್ಟರಿ, ಎಕನಾಮಿಕ್ಸ್, ಪೊಲಿಟಿಕಲ್ಸ್ ಸೈನ್ಸ್‌ನ್ನು ಕಲಿತಿರುವಂಥ ಹುಡುಗನಿಗೆ ಎಫ್. ಡಿ. ಸಿ. ಯಾಗಿ ಕ್ಲರ್ಕ್ ಕೆಲಸ ಮಾಡುವುದಕ್ಕೆ ನೇಮಕ ಮಾಡಿಕೊಳ್ಳಲಾಗುತ್ತದೆ. ಕ್ಲರ್ಕ್ ಕೆಲಸಕ್ಕೆ ಬೇಕಾಗಿರುವುದು ಬುಕ್ ಕೀಪಿಂಗ್, ಅಕೌಂಟೆನ್ಸಿ ಆದರೆ, ಹಿಸ್ಟರಿ, ಎಕನಾಮಿಕ್ಸ್, ಪೊಲಿಟಿಕಲ್ ಸೈನ್ಸ್ ಆದವರನ್ನು ಕ್ಲರ್ಕ್ ಆಗಿ ನೇಮಕ ಮಾಡುತ್ತೇವೆ. ಇಂಥ ಒಂದು ನೀತಿಯನ್ನು ನಾವು ಬದಲಾವಣೆ ಮಾಡದೇ ಹೋದರೆ ಬಹುಶಃ ನಮಗೆ ಬಹಳ ತೊಂದರೆಯಾಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ತಾಂತ್ರಿಕ ಶಿಕ್ಷಣದಲ್ಲಿ ೧೫,೯೦೦ ಜನರು ಇಂಜಿನಿಯರ್ಸ್ ಆಗಿ ಹೊರ ಬರುತ್ತಾರೆ, ೨,೭೦೦ ಜನ ಡಾಕ್ಟರ್ಸ್ ಹೊರ ಬರುತ್ತಾ ಇದ್ದಾರೆ, ಹಾಗೆಯೇ ಅಗ್ರಿಕಲ್ಚರ್, ವೆಟರ್ನರಿ, ತೋಟಗಾರಿಕೆ ಮುಂತಾದವುಗಳು ಸೇರಿ ಸುಮಾರು ೬೦೦ ಜನರು ಹೊರ ಬರುತ್ತಾ ಇದ್ದಾರೆ. ಇವುಗಳೆಲ್ಲವೂ ಸೇರಿ ೨,೪೪,೧೦೦ ಜನ ಪದವೀಧರರು ಹೊರ ಬರುತ್ತಾ ಇದ್ದಾರೆ. ಆದರೆ ಕಳೆದ ಏಳು ವರ್ಷಗಳಿಂದ ಲೋಕಸೇವಾ ಆಯೋಗದಲ್ಲಿ ಯಾವುದೇ ತರಹದ ರಿಕ್ರೂಟ್‌ಮೆಂಟ್ ಮಾಡಿಲ್ಲ. ಹಾಗಾದರೆ ಈ ಪಧವೀಧರರು ಎಲ್ಲಿಗೆ ಹೋಗಬೇಕು ? ೧೫,೯೦೦ ಜನ ಇಂಜಿನಿಯರ್ಸ್ ಮತ್ತು ೨,೭೦೦ ಜನರು ಡಾಕ್ಟರ್ಸ್ ಎಲ್ಲಿಗೆ ಹೋಗಬೇಕು ? ಅದೇ ದಿಕ್ಕಿನಲ್ಲಿ ನಾವು ನೋಡುತ್ತಿರುವಂತೆ ಸ್ಕೂಲ್‌ಗಳಲ್ಲಿ ಟೀಚರ್ಸ್ ಇಲ್ಲ, ಆಸ್ಪತ್ರೆಗಳಲ್ಲಿ ಡಾಕ್ಟರ್ಸ್ ಇಲ್ಲ ಸಹಸ್ರಾರು ವೇಕೆನ್ಸಿಗಳು ಖಾಲಿ ಇವೆ. ಇನ್ನೊಂದು ಕಡೆ ನಾವು ಹೆಚ್ಚಿನ ಸಂಖ್ಯೆಯಲ್ಲಿ ಡಾಕ್ಟರ್ಸ್, ಇಂಜಿನೀಯರ್ ಗಳನ್ನು ತಯಾರು ಮಾಡುತ್ತಾ ಇದ್ದೇವೆ. ಇದಕ್ಕೆ ಏನಾದರೂ ಒಂದು ಸೂಕ್ತ ಕಾರ್ಯಕ್ರಮವನ್ನು ಹಾಕಿಕೊಳ್ಳದಿದ್ದರೆ ನಾವು ಅನುಸರಿಸುತ್ತಿರುವ ನೀತಿ ಏನಿದೆ ಅದು ನಿಜಕ್ಕೂ ಸಮಾಜಕ್ಕೆ ಧಕ್ಕೆತರತಕ್ಕಂಥಾ ನೀತಿ ಆಗುತ್ತದೆ ಎಂದು ಹೇಳಬಯಸುತ್ತೇನೆ. ಇನ್ನು ೬.೩೩ ಪರ್ಸೆಂಟ್ ಬಜೆಟ್ ಅಲೋಕೇಶನ್‌ನ್ನು ೧೯೯೦-೯೧ನೇ

ಸಾಲಿಗಾಗಿ ಮಾಡಿದ್ದಾರೆ. 'ಎಲ್ಲರನ್ನೂ ವಿದ್ಯಾವಂತರನ್ನಾಗಿ ಮಾಡಬೇಕೆಂದು ನಾವೇನು ಹೇಳುತ್ತೇವೆ ಅದರಂತೆ ಲಿಟ್ರಸಿಯನ್ನು ಯಥೇಚ್ಛವಾಗಿ ನಾವು ಈ ದೇಶದಲ್ಲಿ ಜಾರಿಗೆ ತರಬೇಕಾದರೆ ಬಜೆಟ್‌ನಲ್ಲಿ ನಾವು ಅದಕ್ಕಾಗಿ ಎಷ್ಟು ಹಣವನ್ನು ಖರ್ಚು ಮಾಡುತ್ತೇವೆ ಎಂದು ನೋಡಬೇಕಾಗುತ್ತದೆ. ಅದನ್ನು ನೋಡಿದರೆ ನಮಗೆ ಬೇಜಾರು ತರುತ್ತದೆ. ಆದ್ದರಿಂದ ನಾವು ಯಾವುದಕ್ಕೆ ಮೊದಲ ಆದ್ಯತೆ ಕೊಡಬೇಕೆಂದು ವಿಚಾರ ಮಾಡಬೇಕು. ಇವೊತ್ತಿನ ದಿವಸ ನಮಗೆ ಡಾಕ್ಟರ್ಸ್ ಬೇಕು. ೨೦೦೦ನೇ ಇಸವಿಯ ಹೊತ್ತಿಗೆ ನಾವು ಎಲ್ಲರಿಗೂ ಆರೋಗ್ಯವನ್ನು ಕೊಡುವ ಅವಕಾಶವನ್ನು ಕಲ್ಪಿಸುತ್ತೇವೆ ಎಂದು ಹೇಳುತ್ತಿರುವಾಗ ನಾವು ಡಾಕ್ಟರ್ಸ್ ಆಗಲಿ, ಟೀಚರ್ಸ್ ಆಗಲೀ, ಸಾಕಷ್ಟು ಪ್ರಮಾಣದಲ್ಲಿ ನೇಮಕ ಮಾಡಬೇಕಾಗುತ್ತದೆ. ಆದರೆ ಅವರಿಗೆ ಈ ಕುರಿತು ಕಡಿಮೆ ಬಜೆಟ್ ಕೊಟ್ಟರೆ ಅದು ಹೇಗೆ ಸಾಧ್ಯ ಎಂಬ ಒಂದು ದೊಡ್ಡ ಪ್ರಶ್ನೆ ಸಮಸ್ಯೆಯಾಗಿ ನಮ್ಮ ಮುಂದೆ ಬರುತ್ತದೆ.

ಇನ್ನು ವಿಶ್ವವಿದ್ಯಾನಿಲಯಗಳ ವಿಚಾರದಲ್ಲಿ ಹೇಳುವುದಾದರೆ, ಯಾರು ಬೇಕಾದರೂ ನಮಗೆ ವಿಶ್ವವಿದ್ಯಾನಿಲಯ ಕೊಡಿ, ನಮಗೆ ಕಾಲೇಜು ಕೊಡಿ ಎಂದು ಕೇಳಬಹುದು. ಎಲ್ಲರೂ ಅದನ್ನು ಕೇಳುವುದು ಸಾಮಾನ್ಯ ಎಂಬ ಹಂತಕ್ಕೆ ಬಂದು ಬಿಟ್ಟಿದ್ದಾರೆ. ನಾನು ಕೂಡ ಕೃಷಿ ವಿಶ್ವವಿದ್ಯಾನಿಲಯದಿಂದ ಬಂದವನಾಗಿದ್ದೇನೆ. ಧಾರವಾಡದಲ್ಲಿ ಕೃಷಿ ವಿಶ್ವವಿದ್ಯಾಲಯವನ್ನು ಹೊಸದಾಗಿ ಮಾಡಿದರು. ಆದರೆ ಕಳೆದ ಸರಕಾರದವರು ಅದಕ್ಕೆ ಎಷ್ಟು ಹಣವನ್ನು ಕೊಟ್ಟಿದ್ದಾರೆ. ಎಂಬುದನ್ನು ಯೋಚಿಸಬೇಕಾಗುತ್ತದೆ. ಅಂದಿನ ದಿವಸ ಅಂದಿನ ರಾಜ್ಯಪಾಲರು ಕೂಡ ತಮ್ಮ ಭಾಷಣದಲ್ಲಿ ಹೇಳಿದರು, ಏನೆಂದರೆ, "I do not brlieve in the proliferation of education system in this country" ಎಂದು ಅವರು ಈ ಮಾತನ್ನು ಏಕೆ ಹೇಳಿದರು ? ಇರತಕ್ಕಂಥ ವಿಶ್ವವಿದ್ಯಾಲಯಗಳನ್ನು ಬಲಶಾಲಿಗಳನ್ನಾಗಿ ಮಾಡಿ, ಅಲ್ಲಿ ಏನೇನು ಸಲಕರಣೆಗಳು ಬೇಕು, ಎಷ್ಟು ಅಧ್ಯಾಪಕರುಗಳು ಬೇಕು, ಇವೇ ಮುಂತಾದ ಇತರ ಅವಶ್ಯಕತೆಗಳು ಏನು ? ಎಂಬುದನ್ನು ನೋಡಿಕೊಂಡು ಅದನ್ನು ಸುಸ್ಥಿತಿಯಲ್ಲಿಡಲು ಕ್ರಮ ತೆಗೆದುಕೊಳ್ಳಬೇಕು, ಅದನ್ನು ಬಿಟ್ಟು ಯೂನಿವರ್ಸಿಟಿ ಮತ್ತು ಕಾಲೇಜುಗಳನ್ನು ಶುರು ಮಾಡುವುದು ಬೇಡ ಎಂಬ ಅಭಿಪ್ರಾಯವನ್ನು ಅವರು ಕೊಟ್ಟರು.

ಇನ್ನು ವಿಶ್ವವಿದ್ಯಾನಿಲಯಗಳಲ್ಲಿ ಆಗಿರುವ ನೇಮಕಾತಿಯನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ಉದಾಹರಣೆಗೆ ಕೃಷಿ ವಿಶ್ವವಿದ್ಯಾಲಯ ಬೆಂಗಳೂರಿನಲ್ಲಿ ೨,೭೦೦ ಜನ ವಿದ್ಯಾರ್ಥಿಗಳಿಗೆ ೨,೯೦೦ ಜನ ಸ್ಟಾಫ್ ಇದ್ದಾರೆ. ಇದನ್ನು ಯಾವ ಒಂದು ಆಧಾರದ ಮೇಲೆ ಮಾಡಿಕೊಂಡಿದ್ದಾರೆ ಎಂಬುದು ನಮಗೆ ಗೊತ್ತಾಗಿಲ್ಲ. ಯು.ಜಿ.ಸಿ.ಯವರು ಕೂಡ ಫಿಕ್ಸ್ ಮಾಡಿದ್ದಾರೆ, ೧೬ ಜನ ವಿದ್ಯಾರ್ಥಿಗಳಿಗೆ ಒಬ್ಬ ಅಧ್ಯಾಪಕರು ಇರಬೇಕೆಂದು. ಆದರೆ ಇವರು ಯಾವ ಆಧಾರವನ್ನು ಫಿಕ್ಸ್ ಮಾಡಿಕೊಂಡಿದ್ದಾರೆ ಎಂಬುದು ಗೊತ್ತಾಗಿಲ್ಲದ ಕಾರಣ ಸರಕಾರದವರು ಈ ಬಗ್ಗೆ ಸೂಕ್ತ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇದನ್ನು ಏತಕ್ಕಾಗಿ ಹೇಳುತ್ತಿದ್ದೇನೆ ಅಂದರೆ ನೀವು ಕೊಟ್ಟ ೬.೩೩ ಬಜೆಟ್‌ನಲ್ಲಿ ೭೦ ಪರ್ಸೆಂಟ್‌ನಷ್ಟು ಸಂಬಳ ಸಾರಿಗೆಗೆ ಹೋಗುತ್ತಾ ಇದೆ. ಅದಕ್ಕಾಗಿ ಇದರ ಪರಿಶೀಲನೆ ಅಗತ್ಯವೆಂದು ನಾನು ಕೇಳಿಕೊಳ್ಳುತ್ತೇನೆ. ಮೊನ್ನೆ ಅರಸೀಕೆರೆಯಲ್ಲಿ ಮಾನ್ಯ ವಿದ್ಯಾಸಚಿವರು ಒಂದು ಸ್ಟೇಟ್‌ಮೆಂಟ್‌ನ್ನು ಕೊಟ್ಟಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ನಮ್ಮದೇ ಆದಂಥ ಎಜುಕೇಷನ್ ಪಾಲಿಸಿಯನ್ನು ಸಹ ಮಾಡುತ್ತೇವೆ, ಅದನ್ನು ರಿವ್ಯೂ ಮಾಡುತ್ತೇವೆ ಎಂದು ಹೇಳಿದ್ದಾರೆ. ಅದನ್ನು ನಾನು ಸ್ವಾಗತಿಸುತ್ತೇನೆ. ಕೊನೆಯಂದಾಗಿ ಒಂದು ಬಹು ಮುಖ್ಯವಾದ ವಿಚಾರವನ್ನು ಈ ಸದನದ ಮುಂದಿಡುವುದಕ್ಕೆ ಇಷ್ಟಪಡುತ್ತೇನೆ. ಏನೆಂದರೆ ಈ ನಮ್ಮ ಸಮಾಜದಲ್ಲಿ ಹಿಂದುಳಿದ ವರ್ಗ ಏನಿವೆ ತುಳಿತಕ್ಕೆ ಒಳಗಾದ ವರ್ಗ ಏನಿವೆ ಅವುಗಳ ಬಗ್ಗೆ ಕಾಳಜಿ ವಹಿಸುತ್ತೇವೆ, ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೇವೆಂದು ರಾಜ್ಯಪಾಲರು ಹೇಳಿದ್ದಾರೆ.

> "My Government is deeply committed to the cause of educational and social advancement of of Scheduled Castes and Scheduled Tribes..."

ಅಧ್ಯಕ್ಷರೇ ನಾನು ಒಂದು ರಿಸರ್ವ್ಡ್ ಕಾನ್‌ಸ್ಟಿಟ್ಯೂಯನ್ಸಿಯಿಂದ ಬಂದವನು. ಅಲ್ಲಿ ಶೇಕಡ ೩೫–೪೦ ರಷ್ಟು ಜನ ಹರಿಜನ ಗಿರಿಜನರಿದ್ದಾರೆ. ನನಗನ್ನಿಸುತ್ತದೆ, ಆ ಜನರನ್ನು ಹೋಗಿ ನೋಡಿದಾಗ, ಅಲ್ಲಿನ ಹಳ್ಳಿಗಳಿಗೆ ಹೋಗಿ ನೋಡಿದಾಗ ನಮ್ಮ ಕಣ್ಣಲ್ಲಿ ನೀರು ಬರುತ್ತದೆ. ಸ್ವಾತಂತ್ರ್ಯ ಬಂದು ೪೦ ವರ್ಷಗಳಾದ ಮೇಲೂ ಸಹ ಆ ಜನರಿಗೆ ಕನಿಷ್ಟ ಸವಲತ್ತುಗಳನ್ನು ತಲುಪಿಸಲು ನಮ್ಮ ಕೈಯಲ್ಲಿ ಆಗಲಿಲ್ಲ. ಅವರ ಪ್ರಗತಿಗಾಗಿ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಈ ಜನರಿಗೆ ವಿಶೇಷ ಸವಲತ್ತುಗಳನ್ನು ಒದಗಿಸಿ ಕೊಡಲಾಗುತ್ತದೆಂದು

ಸರ್ಕಾರ ಹೇಳಿದೆ. ಬಹಳ ಸಂತೋಷ. ಇನ್ನೊಂದು ಮುಖ್ಯವಾದ ವಿಚಾರ ಏನೆಂದರೆ ಯೂನಿವರ್ಸಿಟಿಗಳಲ್ಲಿ ಕಾಲೇಜುಗಳಲ್ಲಿ ರಿಸರ್ವೇಷನನ್ನು ಎಷ್ಟರ ಮಟ್ಟಿಗೆ ಮೇನ್‌ಟೇನ್ ಮಾಡಿದ್ದಾರೆಂದು ಹೇಳಿದರೆ ಬಹಳ ಬೇಜಾರಾಗುತ್ತದೆ. ಒಂದು ಕಮಿಟಿಯ ಸದಸ್ಯನಾಗಿ ನಾನು ಕರ್ನಾಟಕದಲ್ಲಿ ಎಷ್ಟು ವಿಶ್ವವಿದ್ಯಾನಿಲಯಗಳಿವೆಯೋ ಅಷ್ಟಕ್ಕೂ ಭೇಟಿ ಕೊಟ್ಟಿದ್ದೇನೆ. ಬಹಳ ಬೇಜಾರಿನ ವಿಷಯ ಎಂದರೆ ಬಹಳ ವ್ಯಸನದ ವಿಷಯವೆಂದರೆ, ಪ್ರೊಫೆಸರ್‌ಗಳು ಮೂರು ಪರ್ಸೆಂಟ್ ಅಥವಾ ಎರಡು ಪರ್ಸೆಂಟ್ ಇರಬಹುದು. ಆದರೆ ಅಟೆಂಡರ್ ಮತ್ತು ಪ್ಯೂನ್‌ಗಳನ್ನು ಕೂಡ ರಿಸರ್‌ವೇಷನ್ ಪ್ರಕಾರ ತುಂಬಿಲ್ಲ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕೃಷಿ ವಿದ್ಯಾಲಯದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ರಿಸರ್ವೇಷನ್ ಇನ್ನೂ ವರೆಗೆ ಮೇಂಟೇನ್ ಮಾಡಿಲ್ಲ. ನಮಗೆ ಸ್ವಾತಂತ್ರ್ಯ ಬಂದು ೪೨ ವರ್ಷವಾದರೂ ಕೂಡ ೧೮ ಪರ್ಸೆಂಟ್ ರಿಜರ್‌ವೇಷನ್ ರಾಜ್ಯಾಂಗದಲ್ಲಿ ಏನಿಟ್ಟಿದ್ದಾರೆ, ಅದನ್ನು ತುಂಬಿಲ್ಲ. ೧೯೪೯ರ ನವೆಂಬರ್ ೨೬ರಲ್ಲಿ ನಾವು ಏನು ಸಮಾಜವನ್ನು ಬದಲಾವಣೆ ಮಾಡುತ್ತೇವೆ, ಎಲ್ಲರಿಗೂ ಸಮಾನತೆಯನ್ನು ಕೊಡುತ್ತೇವೆ ಆರ್ಥಿಕವಾಗಿ ಸಾಮಾಜಿಕವಾಗಿ ಸಮಾನತೆಯನ್ನು ಕೊಡುತ್ತೇವೆ ಎಂದು ಹೇಳಿದ್ದೆವೋ, ಅದನ್ನು ೪೨ ವರ್ಷವಾದರೂ ಕೂಡ ಈ ೧೮ ಪರ್ಸೆಂಟ್ ಕ್ಲರ್ಕ್‌ಗಳನ್ನು ೧೮ ಪರ್ಸೆಂಟ್ ಜವಾನರನ್ನು ತುಂಬುವುದಕ್ಕೆ ಆಗಲಿಲ್ಲ ಎಂದರೆ ಈ ಪರಿಸ್ಥಿತಿ ಎಷ್ಟು ದುಃಖಕರವಾದದ್ದು ಎಂದು ಈ ಸಂದರ್ಭದಲ್ಲಿ ಯೋಚನೆ ಮಾಡಬೇಕಾಗುತ್ತದೆ. ಆದ್ದರಿಂದ ನಾನು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ಒಂದು ಕಮಿಟಿ ಮಾಡಿ ಎಲ್ಲೆಲ್ಲಿ ಇಂಥ ರಿಸರ್ವೇಷನನ್ನು ಜಾರಿಗೆ ತಂದಿಲ್ಲ ಯಾವ ಕಾರಣಕ್ಕಾಗಿ ಮಾಡಲಿಲ್ಲವೆಂದು ತನಿಖೆ ನಡೆಸಬೇಕು. ಯಾವ ಕಾರಣಕ್ಕಾಗಿ ಅವರು ಮಾಡಲಿಲ್ಲವೆಂದು ಅವರು ಹೇಳಬೇಕಾಗುತ್ತದೆ. ತಪ್ಪು ಮಾಡಿದವರಿಗೆ ಶಿಕ್ಷೆ ಆಗಲೇಬೇಕು. ಇವತ್ತು ಎಸ್ಎಸ್ಎಲ್‌ಸಿ ಆದವರು ಎಸ್.ಸಿ. ಮತ್ತು ಎಸ್.ಟಿ. ಜನಾಂಗಗಳಲ್ಲಿ ಸಿಗುವುದಿಲ್ಲವೇ, ಬಿಎ. ಬಿ. ಎಸ್.ಸಿ. ಆದವರು ಸಿಗುವುದಿಲ್ಲವೇ ? ಆದ್ದರಿಂದ ಒಂದು ಕಮಿಟಿ ಮಾಡಿ. ಆ ಕಮಿಟಿ ಮೂಲಕ ಇದನ್ನು ರಿವ್ಯೂ ಮಾಡಿಸಬೇಕು ಹಾಗೂ ಅನ್ಯಾಯವಾಗಿರುವ ಕಡೆ ನ್ಯಾಯ ಒದಗಿಸುತ್ತೀರೆಂದು ನಂಬಿಕೊಂಡಿದ್ದೇನೆ. ಇನ್ನು ಡಾ: ಬಾಬಾಸಾಹೇಬ್ ಅಂಬೇಡ್ಕರ್‌ರವರ ನೂರನೇ ಜನ್ಮಶತಾಬ್ದಿ ಏಪ್ರಿಲ್ ೧೪ನೇ ತಾರೀಖು ಬರುತ್ತಿದೆ. ನನಗಂತೂ ಒಂದು ದುಃಖದ ಸಂಗತಿ ಎಂದರೆ ಈ ದಿಶೆಯಲ್ಲಿ ಸರ್ಕಾರ ಯಾವ ಕಾರ್ಯಕ್ರಮವನ್ನೂ ಹಾಕಿಕೊಂಡಿಲ್ಲ. ಅಂಥಹ ಮಹಾಪುರುಷ ಬಾಬಾಸಾಹೇಬ್ ಅಂಬೇಡ್ಕರ್‌ರವರು ಹರಿಜನರಿಗೆ ಮಾತ್ರವಲ್ಲ, ಅವರು ಇಡೀ ದೇಶಕ್ಕೆ ನಾಯಕರು ಎಂಬುದನ್ನು ಘಂಟಾಘೋಷವಾಗಿ ಹೇಳುತ್ತಿದ್ದೇನೆ. ಯಾರು ಈ ಸಮಾಜದಲ್ಲಿ ತುಳಿತಕ್ಕೆ ಒಳಗಾಗಿದ್ದರು...

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು).— ಅಧ್ಯಕ್ಷರೇ, ಏಪ್ರಿಲ್ ೧೪ರಿಂದ ಬೆಂಗಳೂರಿನಲ್ಲಿ ಮತ್ತು ಇನ್ನಿತರ ಜಿಲ್ಲೆಗಳಲ್ಲಿ ಡಾ: ಅಂಬೇಡ್ಕರ್ ಜಯಂತಿ ಕಾರ್ಯಕ್ರಮಗಳನ್ನು ಸರ್ಕಾರದಿಂದಲೇ ಆರ್ಗನೈಸ್ ಮಾಡುತ್ತಿದ್ದೇವೆ. ೧೪ ರಿಂದ ಮುಂದಿನ ೧೪ರವರೆಗೆ ನಾನಾ ತರಹದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ.

ಡಾ: ಜಿ. ಪರಮೇಶ್ವರ್.— ನೀವು ಕಾರ್ಯಕ್ರಮಗಳನ್ನು ಈ ಬಗ್ಗೆ ಹಾಕಿಕೊಂಡಿಲ್ಲವೆಂದು ನಾನು ಹೇಳುತ್ತಿಲ್ಲ. ಪ್ರತಿವರ್ಷ ಸರ್ಕಾರದವರು ಮಾಡುತ್ತಿದ್ದಾರೆ, ವಿಧಾನಸೌಧದ ಮುಂದೆ ದೊಡ್ಡ ಫಂಕ್ಷನ್ ಏರ್ಪಡಿಸಿ ದೊಡ್ಡವರನ್ನೆಲ್ಲ ಕರೆಸುತ್ತೀರಿ, ಸಾವಿರಾರು ಜನರನ್ನು ಕರೆಸುತ್ತೀರಿ. ಮಾನ್ಯ ಮಂತ್ರಿಯವರಿಗೆ ತಮ್ಮ ಮೂಲಕ ಹೇಳುವುದೇನೆಂದರೆ ಕಾಂಕ್ರೀಟಾಗಿ ಏನು ಅಂಬೇಡ್ಕರ್ ಅವರ ಹೆಸರಿನಲ್ಲಿ ನೂರು ವರ್ಷಗಳ ನಂತರ ಕೊಡುತ್ತಿದ್ದೀರಿ ಎಂದು ಕೇಳುತ್ತಿದ್ದೇನೆ. ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಹೆಚ್ಚಳ ಹಾಸ್ಟೆಲ್‌ಗಳ ನಿರ್ಮಾಣ ಇವುಗಳನ್ನು ಹೆಚ್ಚು ಮಾಡಬೇಕು. ಅಥವಾ ಪ್ರತಿಯೊಂದು ತಾಲ್ಲೂಕಿನಲ್ಲೂ ಹೊಸದಾಗಿ ಹಾಸ್ಟೆಲ್‌ನ್ನು ಕಟ್ಟಿಸಿ. ಒಂದು ಕಮ್ಯುನಿಟಿ ಹಾಲನ್ನು ಕಟ್ಟಿಸಿ, ಇಂಥ ಒಂದು ಕಾರ್ಯಕ್ರಮವನ್ನು ಮಾಡಬೇಕು ಎಂದು ತಮ್ಮಲ್ಲಿ ವಿಜ್ಞಾಪನೆ ಮಾಡಿಕೊಂಡು ಅವಕಾಶ ಕೊಟ್ಟಂಥ ಸನ್ಮಾನ್ಯ ಅಧ್ಯಕ್ಷರಿಗೆ ವಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಸಿ. ಬೈರೇಗೌಡ (ವೇಮಗಲ್).-- ಸನ್ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು.— ಸಮಯದ ಅಭಾವ ಇದೆ. ಆದುದರಿಂದ ನಿಮಗೆ ೫ ನಿಮಿಷ ಎಂದು ಕೊಟ್ಟಿದ್ದೇನೆ.

ಶ್ರೀ ಸಿ. ಬೈರೇಗೌಡ.— ನಮ್ಮ ಪಕ್ಷದಿಂದ ಯಾರೂ ಮಾತನಾಡಿಲ್ಲ. ಅದನ್ನು ಸ್ವಲ್ಪ ತಾವು ಗಮನಿಸಿಕೊಳ್ಳಬೇಕು.

ಅಧ್ಯಕ್ಷರು.— ಪಕ್ಷಗಳು ಎಂದು ನಾನು ಹೋಗುತ್ತಿಲ್ಲ. ಒಟ್ಟು ಸದಸ್ಯರ ಸಂಖ್ಯೆಯನ್ನು ನೋಡಿ ಡಿವೈಡ್ ಮಾಡಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅವರವರ ಪಕ್ಷದ ಸದಸ್ಯರ ಸಂಖ್ಯೆಯ ಆಧಾರದ ಮೇಲೆ ಟೈಮ್ ನಿಗದಿ ಮಾಡಬೇಕು.

ಅಧ್ಯಕ್ಷರು.— ಆಯಿತು.

ಶ್ರೀ ಸಿ. ಬೈರೇಗೌಡ.— ಮಾನ್ಯ ಅಧ್ಯಕ್ಷರೇ, ಈ ದಿವಸ ಸನ್ಮಾನ್ಯ ರಾಜ್ಯಪಾಲರು ಎರಡು ಸದನಗಳನ್ನು ಉದ್ದೇಶಿಸಿ ಮಾತನಾಡಿರತಕ್ಕಂಥ ಸಂದರ್ಭದಲ್ಲಿ ನಮ್ಮ ಸ್ನೇಹಿತರಾದ ಕಾಗೋಡು ತಿಮ್ಮಪ್ಪನವರು ವಂದನಾ ನಿರ್ಣಯವನ್ನು ಈ ಸಭೆಯ ಮುಂದೆ ಒಪ್ಪಿಗೆಗಾಗಿ ಇಟ್ಟಿದ್ದಾರೆ. ಇದನ್ನು ವಿರೋಧಿಸುತ್ತಾ ಒಂದೆರಡು ಮಾತುಗಳನ್ನು ಹೇಳಬೇಕು ಎಂದು ಇಚ್ಛೆಪಡುತ್ತೇನೆ. ರಾಜ್ಯಪಾಲರ ಭಾಷಣದ ಎರಡನೇ ಪ್ಯಾರಾದಲ್ಲಿ ಬೆಂಗಳೂರಿನಲ್ಲಿ ನಡೆದಂಥ ವಿಮಾನದ ದುರಂತದ ಬಗ್ಗೆ ಈ ಸದನದ ಗಮನವನ್ನು, ಜನತೆಯ ಗಮನವನ್ನು ಸೆಳೆದಿದ್ದಾರೆ. ಈ ದುರಂತ ಅದು ಎಲ್ಲಿಯೇ ನಡೆದಿರಲಿ, ಬೆಂಗಳೂರು ನಗರದಲ್ಲಿ ನಡೆದಿರಲಿ ಮತ್ತೆ ಎಲ್ಲಿಯಾದರೂ ನಡೆದಿರಲಿ, ಆ ದುರಂತ it is a human tragedy. ಅದಕ್ಕೆ ನಾವು ನಮ್ಮ ಶ್ರದ್ಧಾಂಜಲಿಯನ್ನು ಅರ್ಪಿಸಬೇಕಾಗಿರತಕ್ಕಂಥದ್ದು ನಮ್ಮ ಕರ್ತವ್ಯ. ಆದರೆ ಇವತ್ತು ನನ್ನ ಚಿಂತೆ ಏನು ಎಂದರೆ ಸಾವು ಎಲ್ಲರಿಗೂ ಕೂಡಾ ಚಿಕ್ಕವರಾಗಲಿ, ದೊಡ್ಡವರಾಗಲಿ ವಿಮಾನದಲ್ಲಿ ಪ್ರಯಾಣ ಮಾಡತಕ್ಕಂಥವರಾಗಲಿ, ಸೈಕಲ್ ಮೇಲೆ ಪ್ರಯಾಣ ಮಾಡತಕ್ಕಂಥವರಾಗಲಿ ಅಥವಾ ರಸ್ತೆಯಲ್ಲಿ ಕಾಲು ನಡಿಗೆಯಲ್ಲಿ ಹೋಗತಕ್ಕಂಥವರಾಗಲಿ, ಇದ್ಯಾವುದಕ್ಕೂ ವ್ಯತ್ಯಾಸ ಇರಬಾರದು. ವಿಮಾನದಲ್ಲಿ ಸತ್ತಂಥವರಿಗೆ ಐದು ಲಕ್ಷ ರೂಪಾಯಿಯನ್ನು ಕೊಡತಕ್ಕಂಥ ಒಂದು ವ್ಯವಸ್ಥೆ ನಮ್ಮ ದೇಶದಲ್ಲಿದೆ. ಆದರೆ ಅದೇ ನಮ್ಮ ರಸ್ತೆ ಸಾರಿಗೆ ಬಸ್‌ಗಳಲ್ಲಿ ಪ್ರಯಾಣ ಮಾಡತಕ್ಕಂಥವರು ಸಾಮಾನ್ಯ ಜನ. ರಸ್ತೆ ಸಾರಿಗೆ ಸಂಸ್ಥೆ ಕೂಡಾ ಒಂದು ರಾಷ್ಟ್ರೀಕೃತ ವಾದಂಥ ಸಂಸ್ಥೆ. ಆ ಬಸ್‌ಗಳಲ್ಲಿ ಪ್ರಯಾಣ ಮಾಡತಕ್ಕಂಥವರಿಗೆ ಅಪಘಾತ ಉಂಟಾದಾಗ ನಾವು ಕೊಡತಕ್ಕಂಥ ಪರಿಹಾರ ಕೇವಲ ಐದು ಸಾವಿರ ರೂಪಾಯಿಗಳು. ಹೌದಾ ಸಿಂಧ್ಯಾರವರೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಿಮ್ಮ ಸರ್ಕಾರವೇನಾದರೂ ಹೆಚ್ಚು ಮಾಡಿತ್ತೇನು ?

ಶ್ರೀ ಸಿ. ಬೈರೇಗೌಡ.— ಕೆ.ಎಸ್.ಆರ್.ಟಿ.ಸಿ. ಬಸ್‌ಗಳಲ್ಲಿ ಪ್ರಯಾಣ ಮಾಡತಕ್ಕಂಥವರಿಗೆ ಕೊಡತಕ್ಕಂಥ ಪರಿಹಾರ ೫ ಸಾವಿರ ರೂಪಾಯಿ ಅಷ್ಟೇ ಅಲ್ಲವೇ ?

ಶ್ರೀ ಪಿ. ಜಿ. ಆರ್. ಸಿಂಧ್ಯ.— ಮಂತ್ರಿಗಳು ಅದಕ್ಕೆ ಉತ್ತರ ಹೇಳಬೇಕು. ಅದನ್ನು ನಾನು ಏತಕ್ಕೆ ಹೇಳಲಿ.

ಶ್ರೀ ಸಿ. ಬೈರೇಗೌಡ.— ಎಷ್ಟು ಪರಿಹಾರ ಕೊಡುತ್ತಾರೆಂದು ಹೇಳಿ. ಏಕೆಂದರೆ ತಾವು ಸಾರಿಗೆ ಮಂತ್ರಿಗಳಾಗಿದ್ದವರು.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಕೆ.ಎಸ್.ಆರ್.ಟಿ.ಸಿ.ಯಲ್ಲಿ ಅಪಘಾತದಲ್ಲಿ ಸತ್ತಂಥವರಿಗೆ ಇವತ್ತಿನ ಕೆ.ಎಸ್.ಆರ್.ಟಿ.ಸಿ. ಕಾನೂನು ಪ್ರಕಾರವಾಗಿ ೨೫ ಸಾವಿರ ರೂಪಾಯಿಗಳನ್ನು ಮಿನಿಮಮ್ ಕೊಡುತ್ತಾರೆ. ಕೋರ್ಟ್‌ಗೆ ಹೋಗಿ ಕ್ಲೈಮ್ ಮಾಡಿದರೆ ಎರಡೂವರೆ ಲಕ್ಷ ಮೂರು ಲಕ್ಷ, ನಾಲ್ಕು ಲಕ್ಷ ರೂಪಾಯಿಗಳವರೆಗೂ ತೆಗೆದುಕೊಂಡಿದ್ದಾರೆ.

ಶ್ರೀ ಸಿ. ಬೈರೇಗೌಡ.— ಕಾಂಪೆನ್‌ಸೇಷನ್ ಬಗ್ಗೆ ಮಾತನಾಡುತ್ತಿಲ್ಲ. ಆದರೆ ಎಕ್ಸ್‌ಗ್ರೇಷಿಯೊ ಬಗ್ಗೆ ನಾನು ಹೇಳುತ್ತಿರುವುದು. ವಿಮಾನ ದುರಂತದಲ್ಲಿ ಸತ್ತಂಥವರಿಗೆ ಐದು ಲಕ್ಷ ರೂಪಾಯಿಗಳನ್ನು ಕೊಡತಕ್ಕಂಥ ವ್ಯವಸ್ಥೆ ಇದೆ. ಅದೇ ಕೆ.ಎಸ್.ಆರ್.ಟಿ.ಸಿ.ಯಲ್ಲಿ ಎಕ್ಸ್‌ಗ್ರೇಷಿಯಾ ಕೊಡತಕ್ಕಂಥದ್ದರ ಬಗ್ಗೆ ಹೇಳಿದ್ದಾರೆ. ಈ ಎಕ್ಸ್‌ಗ್ರೇಷಿಯಾ ಬಗ್ಗೆ ಎಷ್ಟು ಸಾರಿ ಕಣ್ಣೀರು ಸುರಿಸಬೇಕೋ ಗೊತ್ತಿಲ್ಲ. ನಾನು ಹೇಳತಕ್ಕಂಥದ್ದು ಜೀವ ಎನ್ನುವುದು ಒಂದೇ, ವಿಮಾನ ದುರಂತದಲ್ಲಿ ಸತ್ತವರದ್ದು ಒಂದೇ ಜೀವ. ವಿಮಾನ ದುರಂತದಲ್ಲಿ ಸತ್ತವರ ಕುಟುಂಬದವರಿಗೆ ಎಷ್ಟು ದುಃಖವಾಗುತ್ತದೋ ಅಷ್ಟೇ ದುಃಖ, ಅಷ್ಟೇ ನಷ್ಟ ಬಸ್‌ನಲ್ಲಿ ಪ್ರಯಾಣ ಮಾಡತಕ್ಕಂಥವರಿಗೂ ಕೂಡಾ ಅಷ್ಟೇ ಆಗುತ್ತದೆ. ಆದ್ದರಿಂದ ಈ ಸಾವಿನಲ್ಲಿ ವ್ಯತ್ಯಾಸವನ್ನು ಮಾಡತಕ್ಕಂಥಾದ್ದು ಬೇಡ. ಬಸ್‌ನಲ್ಲಿ ಸತ್ತಂಥವರಿಗೂ ಕೂಡಾ ವಿಮಾನ ದುರಂತದಲ್ಲಿ ಎಷ್ಟು ಪರಿಹಾರವನ್ನು ಕೊಡುತ್ತಾರೋ ಅಷ್ಟನ್ನೇ ಇಲ್ಲಿಯೂ ಅಂದರೆ ಐದು ಲಕ್ಷ ರೂಪಾಯಿಗಳನ್ನು ಕೊಡಬೇಕು ಅಥವಾ ಅವರ ಜೀವನ ಪರ್ಯಂತ ಸುಖಮಯವಾದಂಥ ಜೀವನವನ್ನು ನಡೆಸತಕ್ಕ ರೀತಿಯಲ್ಲಿ ಆದರೂ ಎಕ್ಸ್‌ಗ್ರೇಷಿಯಾ ಪೇಮೆಂಟನ್ನು ನಿಗದಿ ಮಾಡಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ನಮ್ಮ ರಾಜ್ಯದಲ್ಲಿ ೧೭೮ ಜನ ನಮ್ಮ ಕಾಂಗ್ರೆಸ್-ಐ ಮಿತ್ರರು ಗೆದ್ದು ಬಂದಿದ್ದಾರೆ. ಅದು ಜನರ ತೀರ್ಪು. ನಾವು ಪ್ರಶ್ನೆ ಮಾಡುವ ಹಾಗೆ ಇಲ್ಲ. ಅವರು ಅಧಿಕಾರ ನಡೆಸಲಿ. ಈ ರಾಜ್ಯ ಪಾಲರ ಭಾಷಣದಲ್ಲಿ ೮ನೇ ಪ್ಯಾರಾದಲ್ಲಿ ಈ ರೀತಿ ಹೇಳಿದ್ದಾರೆ. ಇದು ಬಹಳ ಮುಖ್ಯವಾದ ಪ್ಯಾರಾ ಎಂದು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

''ಆಡಳಿತದಲ್ಲಿ ದಕ್ಷತೆಯನ್ನು ಸುಧಾರಿಸುವುದು ಮತ್ತು ಆಡಳಿತ ವ್ಯವಸ್ಥೆಯಲ್ಲಿ ಸೇವಾ ಶಿಸ್ತನ್ನು ಕಟ್ಟುನಿಟ್ಟಾಗಿ ತರುವುದು ನನ್ನ ಸರ್ಕಾರದ ಪ್ರಮುಖ ಕಾರ್ಯಗಳಲ್ಲೊಂದು. ಆಡಳಿತ ದಕ್ಷತೆ ಅತ್ಯಂತ ಕ್ಷೀಣ ಸ್ಥಿತಿಯಲ್ಲಿರುವುದರಿಂದ ವ್ಯಾಪಕವಾಗಿ ವಿಸ್ತರಿಸಿರುವ ನೌಕರ ಶಾಹಿ ವ್ಯವಸ್ಥೆಯು ಜನತೆಯ ಅಗತ್ಯಗಳು ಮತ್ತು ಆಶೋತ್ತರಗಳಿಗೆ ಸಾಕಷ್ಟು ಸ್ಪಂದಿಸುತ್ತಿಲ್ಲ, ಭ್ರಷ್ಟಾಚಾರವು ಎಲ್ಲೆಡೆ ವ್ಯಾಪಿಸಿದೆ.''

ಭ್ರಷ್ಟಾಚಾರ ಎಲ್ಲೆಡೆ ವ್ಯಾಪಿಸಿದೆ ಎನ್ನತಕ್ಕ ಮಾತನ್ನು ಒತ್ತಿ ಒತ್ತಿ ಹೇಳಿದ್ದಾರೆ. ಅದು ನಿಜ. ಅದಕ್ಕೆ ನನ್ನ ತಕರಾರು ಇಲ್ಲ. ಇದು ತುಟ್ಟತುದಿ ಮುಟ್ಟಿದೆ. ಆದರೆ ಇಲ್ಲಿ ಹೇಳತಕ್ಕದ್ದು ನೌಕರ ಶಾಹಿಯಲ್ಲಿ ನಡೆಯುತಕ್ಕ ಭ್ರಷ್ಟಾಚಾರದ ಬಗ್ಗೆ ಮಾತ್ರ ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇದು ನನಗೆ ಖೇದವನ್ನು ಮತ್ತು ದುಃಖವನ್ನು ತರತಕ್ಕದ್ದು. ಆದರೆ ಜವಾಬ್ದಾರಿ ಸ್ಥಾನದಲ್ಲಿರತಕ್ಕವರು ಜವಾಬ್ದಾರಿ ಸ್ಥಾನ ಗಳನ್ನು ಅಲಂಕರಿಸತಕ್ಕವರು ಮಾಡತಕ್ಕ ಭ್ರಷ್ಟಾಚಾರದ ಬಗ್ಗೆ, ಮಾಡತಕ್ಕ ಅವ್ಯವಹಾರದ ಬಗ್ಗೆ ಇಲ್ಲಿ ಪ್ರಸ್ತಾಪ ಇಲ್ಲ. ಒಂದು ಚಕಾರವನ್ನು ಸಹ ಎತ್ತಲಿಲ್ಲ. ಈಗಾಗಲೇ ತಮಗೆ ಒಂದು ಪತ್ರವನ್ನು ಬರೆದಿದ್ದೇನೆ. ಅದರ ಬಗ್ಗೆ ನಾನು ತಮ್ಮ ಪರವಾನಗಿಯನ್ನು ಪಡೆಯತಕ್ಕಂತಹ ಪ್ರಯತ್ನವನ್ನು ಪಟ್ಟಿದ್ದೇನೆ.

ಅಧ್ಯಕ್ಷರು.—ನಮ್ಮ ಆಫೀಸಿನಿಂದ ಪತ್ರ ಬಂದಿರಬೇಕಲ್ಲ.

ಶ್ರೀ ಸಿ. ಬೈರೇಗೌಡ.—ತಮ್ಮ ಆಫೀಸಿನಿಂದ ಪತ್ರ ಬಂದಿದೆ. ತಮ್ಮ ಪತ್ರದಲ್ಲಿ ತಿಳಿಸಿರುವ ಮಟ್ಟಿಗೆ ನಾವು ಇವೊತ್ತು ಎಲ್ಲಿ ಏನೇ ನಡೆದರೂ ಕೂಡ ನಾವು ಇಲ್ಲಿ ಅದನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಇಲ್ಲ ಎಂದು ನನ್ನ ಭಾವನೆ. ಆದರೆ ನಮ್ಮ ರೂಲ್ಸ್‌ನಲ್ಲಿ ಸ್ಪಷ್ಟವಾಗಿ ಇದೆ. ಯಾರಾದರೂ ಇಂತಹ ವಿಷಯವನ್ನು ಪ್ರಸ್ತಾಪ ಮಾಡಬೇಕಾಗಿದ್ದರೆ, ನೋಟೀಸ್ ಅನ್ನು ಕೊಟ್ಟು ಪ್ರಸ್ತಾಪ ಮಾಡಬೇಕೆಂದು ರೂಲ್ಸ್ ೩೧೧ರಲ್ಲಿ ಇದೆ.

ಅಧ್ಯಕ್ಷರು.—ಬರೇ ನೋಟೀಸ್ ಎಂದು ಇದೆಯೇ.

ಶ್ರೀ ಸಿ. ಬೈರೇಗೌಡ.—ಹೌದು. ನಿಯಮಾವಳಿ ೩೧೧ರಲ್ಲಿ ಈ ಬಗ್ಗೆ ಸ್ಪಷ್ಟವಾಗಿ ಹೇಳಿದ್ದಾರೆ.

''ಒಬ್ಬ ವ್ಯಕ್ತಿಯನ್ನು ಕುರಿತ ಆಪಾದನೆಯ ಬಗ್ಗೆ ಕೈಗೊಳ್ಳಬೇಕಾದ ಕಾರ್ಯ ವಿಧಾನ.—ಸದಸ್ಯರು ಅಧ್ಯಕ್ಷರಿಗೆ ಮತ್ತು ಸಂಬಂಧಪಟ್ಟ ಮಂತ್ರಿಗಳಿಗೆ, ಮಂತ್ರಿಗಳು ಉತ್ತರ ನೀಡುವ ಉದ್ದೇಶಕ್ಕಾಗಿ ತನಿಖೆ ನಡೆಸಲು ಸಾಧ್ಯವಾಗುವಂತೆ ಪೂರ್ಣ ಮಾಹಿತಿ ಯನ್ನು ಕೊಟ್ಟಿದ್ದ ಹೊರತು, ಯಾವ ಸದಸ್ಯರು ಯಾವ ವ್ಯಕ್ತಿಯನ್ನು ಕುರಿತು ಅಪಮಾನಕರವಾದ ಅಥವಾ ಆಪಾದನೆ ಮಾಡುವ ಯಾವ ಆರೋಪವನ್ನು ಮಾಡತಕ್ಕದ್ದಲ್ಲ, ಅಲ್ಲದೆ ಅಧ್ಯಕ್ಷರು ಅಂಥ ಆರೋಪವು ಸದನದ ಮರ್ಯಾದೆಗೆ ಕುಂದು ತರುವಂತಹದು ಅಥವಾ ಅದರಿಂದ ಯಾವುದೇ ಸಾರ್ವಜನಿಕ ಹಿತಾಸಕ್ತಿ ಸಾಧಿತವಾಗುವುದಿಲ್ಲ ಎಂದು ಅಭಿಪ್ರಾಯ ಪಡುವುದಾದರೆ ಯಾವುದೇ ಸಂದರ್ಭದಲ್ಲಿ ಯಾರೇ ಸದಸ್ಯರು ಅಂಥ ಯಾವುದೇ ಆರೋಪ ಮಾಡುವುದನ್ನು ನಿಷೇಧಿಸಬಹುದು.''

ಅಂತ ರೂಲ್ಸ್‌ನಲ್ಲಿ ಸ್ಪಷ್ಟವಾಗಿ ಇದೆ. ನಾನು ಏನು ಈ ನಿಯಮಾವಳಿಯಲ್ಲಿ ಹೇಳಿದೆ ಅದನ್ನು ಪಾಲನೆ ಮಾಡಿದ್ದೇನೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ, ಈಗ ನಾನು ನೇರವಾಗಿ ವಿಷಯಕ್ಕೆ ಬರಬೇಕಾಗಿದ್ದರೆ........

ಅಧ್ಯಕ್ಷರು.—ಪೂರ್ಣ ಮಾಹಿತಿ ಕೊಡದ ಹೊರತು. ಎಂದು ಇದೆ.

ಶ್ರೀ ಸಿ. ಬೈರೇಗೌಡ.—ಪೂರ್ಣ ಮಾಹಿತಿ ಅಂದರೆ ಅದು ಕಷ್ಟವಾಗುತ್ತದೆ. ನಾವು ಪದೆ ಪದೆ ಏನು ಮಾತನಾಡುತ್ತೇವೆ, ಬರೆದುಕೊಳ್ಳುವುದಕ್ಕೆ ಆಗುವುದಿಲ್ಲ. ಯಾರೂ ಸಹ ಬರೆದುಕೊಂಡ ಹಾಗೆ ಅದನ್ನು ಮಾತನಾಡುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು.—ಒಂದು ಕಾಗದದ ಮೇಲೆ ಇಂತಹ ಸದಸ್ಯರ ಮೇಲೆ ಇಂತಹ ಆರೋಪಣೆ ಮಾಡುತ್ತೇನೆಂದರೆ, ಅದು ಪೂರ್ಣ ಮಾಹಿತಿ ಆಗುವುದಿಲ್ಲ. ವಿಷಯದ ಬಗ್ಗೆ ತಾವು ಪೂರ್ಣ ಮಾಹಿತಿ

ಕೊಡುವವರೆಗೆ ಪ್ರಸ್ತಾಪ ಮಾಡುವುದಕ್ಕೆ ತಮಗೆ ಅವಕಾಶ ಇಲ್ಲ. ಪೂರ್ಣವಾದ ಮಾಹಿತಿಯನ್ನು ಕೊಟ್ಟು ಪ್ರಸ್ತಾಪ ಮಾಡಬಹುದು ಎಂದು ನಿಯಮಾವಳಿಯಲ್ಲಿದೆ.

೫-೦೦ ಪಿ.ಎಂ.

ಶ್ರೀ ಸಿ. ಬೈರೇಗೌಡ.—ಪೂರ್ಣ ಮಾಹಿತಿ ಅಂದರೆ ಒಬ್ಬ ಸದಸ್ಯನಾಗಿರತಕ್ಕವನು ಏನು ಏನು ಮಾತನಾಡುತ್ತಾನೆ, ಅದನ್ನು ಪ್ರತಿ ಪದ ಪದ ಪ್ರತಿ ಅಕ್ಷರ ಕೂಡ ಬರೆದು ಕೊಡಬೇಕಾಗುತ್ತದೆ. ಆದರೆ ವಿಷಯ ಏನು ಎನ್ನುವುದನ್ನು ನಾನು ತಿಳಿಸಿದ್ದೇನೆ. ಇದು ಯಾವ ವಿಷಯಕ್ಕೆ ಸಂಬಂಧ ಪಡುತ್ತದೆ ಎನ್ನತಕ್ಕಂಥಾದ್ದನ್ನೂ ನಾನು ಬರೆದು ತಿಳಿಸಿದ್ದೇನೆ.

ಅಧ್ಯಕ್ಷರು.—ಪ್ರತಿ ಅಕ್ಷರಾನೂ ನಾನು ಕೇಳಿದರೆ ಐ ವಿಲ್ ಬಿ ಅನ್ ರೀಸನಬಲ್, ಐ ವುಡ್ ಲೈಕ್ ಟು ರೀಸನಬಲ್. ಪೂರ್ಣ ಮಾಹಿತಿಯನ್ನು ಕೊಡತಕ್ಕಂಥಾದ್ದು ನಿಮ್ಮ ಜವಾಬ್ದಾರಿ.

ಶ್ರೀ ಸಿ. ಬೈರೇಗೌಡ.—ನಾನು ಪೂರ್ಣ ಮಾಹಿತಿ ಕೊಟ್ಟಿದ್ದೇನೆ. ಇಂತಹ ಕಡೆ ಇಂತಹ ಘಟನೆ ಯಾಗಿದೆ ಎನ್ನತಕ್ಕಂಥಾದ್ದನ್ನೂ ಕೊಟ್ಟಿದ್ದೇನೆ, ನನ್ನ ನೋಟೀಸಿನಲ್ಲಿ ಯಾವ ಗ್ರಾಮಗಳಲ್ಲಿ ಇಂತಹ ಘಟನೆ ನಡೆದಿದೆ ಎನ್ನುವುದನ್ನು ಕೊಟ್ಟಿದ್ದೇನೆ.

ಅಧ್ಯಕ್ಷರು.—ಮಾಹಿತಿ ಅಂದರೆ ಏನು ತಿಳಿದುಕೊಂಡಿದ್ದೀರಿ.

ಶ್ರೀ ಸಿ. ಬೈರೇಗೌಡ.—ಅಲ್ಲಿ ಭೂಮಿ ಆಕ್ರಮಣ ಮಾಡಿಕೊಂಡಿರತಕ್ಕದ್ದು.........

ಅಧ್ಯಕ್ಷರು.—ಮಾಹಿತಿ ಅಂದರೆ ಪ್ರೂಫ್.

ಶ್ರೀ ಸಿ. ಬೈರೇಗೌಡ.—ಅದನ್ನು ಹೇಳುವುದಕ್ಕೆ ನಾನು ತಯಾರಿದ್ದೇನೆ. ಅದಕ್ಕೆ ಸಂಬಂಧ ಪಟ್ಟಂಥ ಎಲ್ಲ ಕಡತಗಳೂ ಕೂಡ ಇವತ್ತಿನ ದಿವಸ ನನ್ನ ಹತ್ತಿರ ಇದೆ.

ಅಧ್ಯಕ್ಷರು.—ರೂಲನ್ನು ಓದುವಾಗ ಪೂರ್ಣವಾಗಿ ಓದಬೇಕು. ಪೂರ್ಣವಾಗಿ ರೂಲ್ಸ್‌ನ ಅರ್ಥ ಗ್ರಹಣ ಮಾಡೋಣ. ಒಂದು ಕಾಗದದಲ್ಲಿ ಪೂರ್ಣವಾದ ಮಾಹಿತಿ ಕೊಡಬೇಕು ಅಂದರೆ ನೀವು ಬಾಯಲ್ಲಿ ಹೇಳುತ್ತೇನೆ ಎಂದು ಹೇಳುತ್ತೀರಿ. ನೀವು ಮಾಹಿತಿಯನ್ನು ಬಾಯಲ್ಲಿ ಇಟ್ಟುಕೊಂಡಿರ ಬಹುದು. ಆದರೆ.........

ಶ್ರೀ ಸಿ. ಬೈರೇಗೌಡ.—ದಾಖಲೆ ಇದೆಯೇ ಎಂದು ಕೇಳಿದ್ದರಿಂದ ನಾನು ದಾಖಲೆ ಇದೆ ಎಂದು ಹೇಳಿದ್ದು. ದಾಖಲೆಗಳನ್ನು ಕೊಡಬೇಕು ಎಂದು ಹೇಳಿದರೆ ನನ್ನ ಹತ್ತಿರ ದಾಖಲೆಗಳಿವೆ ಎಂದು ಹೇಳಿದ್ದು.

ಅಧ್ಯಕ್ಷರು.—ತಾವು ದಾಖಲೆಗಳನ್ನು ನಿನ್ನೆಯೇ ಕಳಿಸಬಹುದಾಗಿತ್ತು. ನಿಮ್ಮ ಕಾಗದದ ಜೊತೆಯಲ್ಲಿ ಆ ದಾಖಲೆಗಳನ್ನು ಕಳಿಸಿಕೊಟ್ಟಿದ್ದರೆ ನಾನು ನಿಮ್ಮ ಕಾಗದ, ನಿಮ್ಮ ದಾಖಲೆ ಎಲ್ಲವನ್ನೂ ಕೂಡ ವಿಮರ್ಶೆಮಾಡಿ ಅನಂತರ ಒಂದು ತೀರ್ಮಾನಕ್ಕೆ ಬರುತ್ತಾ ಇದ್ದೆ.

ಶ್ರೀ ಸಿ. ಬೈರೇಗೌಡ.—ತಮ್ಮ ಬಗ್ಗೆ ನಾನು ತಪ್ಪು ತಿಳಿದುಕೊಳ್ಳುವುದಕ್ಕೆ ಬರುವುದಿಲ್ಲ. ಇದರಲ್ಲಿ ಕೆಲವು ದಾಖಲೆಗಳು ಕೊಡತಕ್ಕದ್ದು ಇದೆ, ಕೆಲವು ದಾಖಲೆಗಳು ಕೊಡದೇ ಇರತಕ್ಕದ್ದೂ ಕೂಡ ಇದೆ. ಈಗ ಎಲ್ಲಾ ದಾಖಲೆಗಳನ್ನು ಕೊಡಬೇಕು ಅಂದರೆ ಅದೂ ಕೂಡ ಕಷ್ಟವಾಗುತ್ತದೆ. ಆದುದರಿಂದ ಅಧ್ಯಕ್ಷರೆ, ಇದು.........

(ಗೊಂದಲ)

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಮಾನ್ಯ ಸದಸ್ಯರು ದಾಖಲೆಗಳನ್ನು ಕೊಡದೆ...

(ಗೊಂದಲ)

ಶ್ರೀ ಸಿ. ಬೈರೇಗೌಡ.—ಈ ರಾಜ್ಯದಲ್ಲಿರತಕ್ಕಂಥ ಮಾನ್ಯ ಲೋಕೋಪಯೋಗಿ ಸಚಿವರಾದ ಪುಟ್ಟಸ್ವಾಮಿಗೌಡರು ಮಾಡಿರತಕ್ಕಂಥ ಅಕ್ರಮಗಳು ಇಲ್ಲಿ ಇವೆ. ೨೯-೧-೮೯...

ಅಧ್ಯಕ್ಷರು.—ಐ ಅಂ ಆನ್ ಮೈ ಲೆಗ್. ಮಾನ್ಯ ಸದಸ್ಯರಾದಂಥ ಶ್ರೀ ಬೈರೇಗೌಡರು ನಿನ್ನೆ ನನಗೆ ಪತ್ರ ಕಳಿಸಿಕೊಟ್ಟರು, ಆ ಪತ್ರದಲ್ಲಿ ಒಂದು ಆಪಾದನೆ ನಾಲ್ಕು ಸೆಂಟೆನ್ಸ್ ಒಳಗೊಂಡಿರ ತಕ್ಕಂಥ ಒಂದು ಆಪಾದನೆ. ನಮ್ಮ ಸದನದ ಕಾರ್ಯ ವಿಧಾನ ಹಾಗೂ ನಡವಳಿಕೆ ನಿಯಮಗಳ ಪ್ರಕಾರ ಪೂರ್ಣ ಮಾಹಿತಿಯನ್ನು ಕೊಡಬೇಕು ಎನ್ನತಕ್ಕದ್ದು ಒಂದು. ಎರಡನೆಯದು ಅದಕ್ಕೂ ಒಂದು ಗುರುತರವಾದಂಥ ಪ್ಯಾಲಿಸಿ ಏನಿದೆ ಅಂದರೆ ತಾವು ಯಾವ ವಿಚಾರ ವನ್ನು ಈ ಸದನದಲ್ಲಿ ಪ್ರಸ್ತಾಪ

ಮಾಡಲಿಕ್ಕೆ ಉದ್ದೇಶಿಸಿದ್ದೀರೊ ಅದೇ ವಿಚಾರ ಉಚ್ಚನ್ಯಾಯಾಸ್ಥಾನದಲ್ಲಿ ಈ ದಿವಸ ಒಂದು ರಿಟ್ ಪಿಟಿಷನ್ ಮೂಲಕ ಅದು ಅಲ್ಲಿ ಇದೆ. ಆದುದರಿಂದ ನೀವು ಆ ಪ್ರಕರಣದ ಬಗ್ಗೆ ಏನೇ ಹೇಳುವುದಕೂ ಕೂಡ ಅದು ಸಬ್‌ಜುಡೀಸ್‌ನ ನಿರ್ಬಂಧವಿರುವುದರಿಂದ ಅದಕ್ಕೆ ನಾನು ನಿಮಗೆ ಅವಕಾಶ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೆ, ಸಬ್‌ಜುಡೀಸ್ ಆಗತಕ್ಕ ವಿಚಾರವನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಅದಕ್ಕೆ ಸಂಬಂಧಪಟ್ಟಿರತಕ್ಕಂಥ, ನಡೆದಿರತಕ್ಕಂಥ ಘಟನೆ ಏನಿದೆ ಅದನ್ನೂ ನಾನೂ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಅದನ್ನು ಬಿಟ್ಟು ಉಳಿದ ಇನ್ನೂ ಮೂರು ಘಟನೆಗಳಿವೆ, ಅದು ಯಾವ ನ್ಯಾಯಾಸ್ಥಾನದಲ್ಲೂ ಕೂಡ ಇಲ್ಲ, ಅದು ಸರ್ಕಾರದಲ್ಲಿದೆ ಅದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ೨೯–೧–೧೯೯೦ರಲ್ಲಿ...

(ಗೊಂದಲ)

ಅಧ್ಯಕ್ಷರು.—ನನಗೆ ಪೂರ್ಣ ಮಾಹಿತಿ ಒದಗಿಸುವವರೆಗೂ ಕೂಡ, ತಾವು ಎಲ್ಲಿಯುವರೆಗೆ ನನಗೆ ಮಾಹಿತಿಗಳನ್ನು ಕೊಡುವುದಿಲ್ಲ ಅಲ್ಲಿಯವರೆಗೆ ನಾನು ನಿಮಗೆ ಆ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶಕೊಡುವುದಿಲ್ಲ.

ಶ್ರೀ ಸಿ. ಬೈರೇಗೌಡ.—ಹಾಗಾದರೆ ನಾವು ಇಲ್ಲಿ ಏಕೆ ಬರಬೇಕು, ಇಲ್ಲಿ ನಮಗೆ ಕೆಲಸ ಏನಿದೆ?

ಅಧ್ಯಕ್ಷರು.—ಆ ಪ್ರಶ್ನೆಗೆ ನಾನು ಉತ್ತರ ಕೊಡುವುದಕ್ಕೆ ಆಗುವುದಿಲ್ಲ. ನೀವು ಏಕೆ ಬರಬೇಕು ಎನ್ನುವುದಕ್ಕೆ ನಾನು ಉತ್ತರ ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ಸಿ. ಬೈರೇಗೌಡ.—ಮಾನ್ಯ ಪುಟ್ಟಸ್ವಾಮಿಗೌಡರು ಮಾಡಿರತಕ್ಕಂಥ ವಿಚಾರವನ್ನು ನಾನು ಸೂಕ್ಷ್ಮವಾಗಿ ತಿಳಿಸಿದ್ದೇನೆ. ಹೊಳೆನರಸೀಪುರ ತಾಲ್ಲೂಕಿನಲ್ಲಿ ಮತ್ತು...

(ಗೊಂದಲ)

ಶ್ರೀ ಸಿ. ಬೈರೇಗೌಡ.—ಹೊಳೆನರಸೀಪುರ ತಾಲ್ಲೂಕಿನಲ್ಲಿ...

(ಗೊಂದಲ) * *

(೧೦–೧೫ ಮಾನ್ಯ ಸದಸ್ಯರು ಎದ್ದು ನಿಂತು ಮಾತನಾಡುತ್ತಿದ್ದರು)

ಸಭಾಧ್ಯಕ್ಷರು.—ಆರ್ಡರ್ ಆರ್ಡರ್. ನಾನು ಅವರಿಗೆ ಅವಕಾಶ ಕೊಟ್ಟಿಲ್ಲ. ರಾಜ್ಯಪಾಲರ ವಂದನಾನಿರ್ಣಯದ ಮೇಲೆ ಮಾನ್ಯ ಶ್ರೀ ಬೈರೇಗೌಡರು ಮಾತನಾಡುವುದಕ್ಕೂ ಈ ಪ್ರಶ್ನೆಗೂ ಯಾವುದೇ ಸಂಬಂಧವಿಲ್ಲ.

ಶ್ರೀ ಸಿ. ಬೈರೇಗೌಡ.—ಭ್ರಷ್ಟಾಚಾರ ಎಲ್ಲೆಡೆ ವ್ಯಾಪಿಸಿದೆಯೆಂದು ಇದರಲ್ಲಿ...

(ಗೊಂದಲ)

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಶ್ರೀ ಬೈರೇಗೌಡರು ನನಗೆ ಪೂರ್ಣ ಮಾಹಿತಿ ಕೊಡದೇ ಇರುವುದರಿಂದ ಹಾಗೂ ಅವರು ತಮ್ಮ ಪತ್ರದಲ್ಲಿ ಪ್ರಸ್ತಾಪ ಮಾಡಿದ, ವಿಚಾರವು ಹೈಕೋರ್ಟಿನಲ್ಲಿ ಪೆಂಡಿಂಗ್ ಇರುವುದರಿಂದ ನಾನು ಅದನ್ನು ಇಲ್ಲಿ ಪ್ರಸ್ತಾಪಿಸಲು ಅವಕಾಶ ಕೊಟ್ಟಿಲ್ಲ.

ಶ್ರೀ ಸಿ. ಬೈರೇಗೌಡ.—ಅದನ್ನು ಪ್ರಸ್ತಾಪ ಮಾಡುವುದಿಲ್ಲ. ಆದರೆ ಬೇರೆ ಮೂರು ವಿಷಯಗಳಿವೆ.

(ಗೊಂದಲ)

ಅಧ್ಯಕ್ಷರು.—ಆರ್ಡರ್, ಆರ್ಡರ್, ಮಾನ್ಯ ಸದಸ್ಯರು ಈ ಸದನದ ಕಾರ್ಯ ಕಲಾಪವನ್ನು ನಡೆಸಲು ನನಗೆ ಅವಕಾಶವನ್ನು ಮಾಡಿಕೊಡಬೇಕು. ಶ್ರೀ ಬೈರೇಗೌಡರು ನಿನ್ನೆ ಒಂದು ಪತ್ರವನ್ನು ನನಗೆ ಕಳುಹಿಸಿದರು. ಅದರ ಬಗ್ಗೆ ನಾನು ನಿರ್ಣಯವನ್ನು ಕೊಟ್ಟಿದ್ದೇನೆ. ಈಗ ಅದನ್ನು ಬಿಟ್ಟು ಬಿಟ್ಟಿದ್ದೇನೆ. ಬೇರೆ ಎರಡು ವಿಚಾರಗಳಿವೆ ಏನು ಹೇಳುತ್ತಿದ್ದಾರೆ...

ಶ್ರೀ ಸಿ. ಬೈರೇಗೌಡ.—ಪತ್ರದಲ್ಲಿ ಬರೆದಿದ್ದೇನೆ.

---

*(ಸಭಾಧ್ಯಕ್ಷರ ಆದೇಶದ ಮೇರೆಗೆ ರೆಕಾರ್ಡ್ ಮಾಡಲಿಲ್ಲ)

ಅಧ್ಯಕ್ಷರು.—ಈಗ ಮತ್ತೆ ಎರಡು ವಿಚಾರಗಳನ್ನು ಪತ್ರದಲ್ಲಿ ಬರೆದಿರುವುದನ್ನು ಹೇಳಲು ಹೊರಟಿದ್ದಾರೆ. ನನಗೆ ಕಾಗದ ಕೊಡಿ, ಪೂರ್ಣ ಮಾಹಿತಿ ಕೊಡಿ, ಅವನ್ನು ನಾನು ನೋಡಿ, ನಾನು ಅವಕಾಶ ಕೊಡುತ್ತೇನೆ. ನಿನ್ನೆಯೇ ನೀವು ಆ ಎಲ್ಲಾ ಮಾಹಿತಿಗಳನ್ನು ಕಳುಹಿಸಬೇಕಾಗಿತ್ತು.

(ಗೊಂದಲ)

ಅಧ್ಯಕ್ಷರು.—ಈಗ ಶ್ರೀ ಕಾಳಮರಿಗೌಡರು ಕ್ರಿಯಾಲೋಪ ಎತ್ತಿದ್ದಾರೆ. ಅವರು ಏನು ಹೇಳುತ್ತಾರೋ ಕೇಳೋಣ.

ಶ್ರೀ ಕೆ. ಎಸ್. ಕಾಳಮರಿಗೌಡ.—ನನ್ನ ಕ್ರಿಯಾಲೋಪ ಏನೆಂದರೆ ಮಾನ್ಯ ಸದಸ್ಯರು ಯಾವ ವಿಷಯದಲ್ಲಿ ಮಾತನಾಡುತ್ತಾರೋ ಗೊತ್ತಿಲ್ಲ.

ಶ್ರೀ ಸಿ. ಬೈರೇಗೌಡ.—ಅದನ್ನೇ ತಿಳಿಸುತ್ತೇನೆ. ನಿಮ್ಮ ಕ್ರಿಯಾಲೋಪವನ್ನು ಒಪ್ಪುತ್ತೇನೆ. ತಾವು ಅಪ್ಪಣೆ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಕೆ ಎಸ್ ಕಾಳಮರಿಗೌಡ —ಅವರು ಯಾವ ವಿಚಾರದಲ್ಲಿ ಮಾತನಾಡುತ್ತಾರೆನ್ನುವುದು ನಮಗೆ ಗೊತ್ತಿಲ್ಲ. ಯಾರ ವಿಚಾರದಲ್ಲಿ ಮಾಡಬೇಕಾದರೂ ಸಭಾಧ್ಯಕ್ಷರಿಗೆ ಪತ್ರ ಬರೆದು ತಿಳಿಸಬೇಕು ಅವರು ನಿನ್ನೆ ಪತ್ರ ಬರೆದಿದ್ದಾರೆಂದು ತಿಳಿಸಿದ್ದೀರಿ. ಸದಸ್ಯರು ಏನು ಮಾತನಾಡುತ್ತಾರೆನ್ನುವ ಬಗ್ಗೆ ಅಧ್ಯಕ್ಷರ ಅನುಮತಿ ಬೇಕಾಗುತ್ತದೆ. ಆದರೆ ತಾವು ಅನುಮತಿ ಕೊಟ್ಟಿಲ್ಲ ಈಗ ಅವರು ಆ ವಿಷಯ ವನ್ನು ಬಿಟ್ಟಿದ್ದೇನೆ. ಬೇರೆ ವಿಷಯದ ಪ್ರಸ್ತಾಪಕ್ಕೆ ಹೋಗುತ್ತೇನೆ ಅಂದರೆ ಏನು ಅರ್ಥ? ಅದರ ಬಗ್ಗೆಯೂ ಸಹ ಅವರು ತಮಗೆ ೨೪ ಗಂಟೆ ಮುಂಚಿತವಾಗಿ ಕೊಡಬೇಕಾಗುತ್ತದೆ. ಪರಿಸ್ಥಿತಿ ಹೀಗಿರುವಾಗ ಮಾನ್ಯ ಬೈರೇಗೌಡರು ಏನು ನೇರವಾಗಿ ಒಬ್ಬರ ಬಗ್ಗೆ ಆಪಾದನೆಮಾಡುತ್ತಿದ್ದಾರೆ. ಆರೋಪ ಮಾಡುತ್ತಿದ್ದಾರೆ ಅದು ಸರಿಯಲ್ಲ ಎನ್ನುವುದೇ ನನ್ನ ಕ್ರಿಯಾಲೋಪ. ಜೊತೆಗೆ...

ಶ್ರೀ ಸಿ. ಬೈರೇಗೌಡ.—ನಾನು ನೇರವಾಗಿ ಆಪಾದನೆ ಮಾಡುತ್ತಿಲ್ಲ. ನೋಟೀಸ್ ಕೊಟ್ಟಿದ್ದೇನೆ ಏನೇನು ಪ್ರಸ್ತಾಪ ಮಾಡುತ್ತಿದ್ದೇನೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು.—ಕಾಳಮರಿಗೌಡರು ಕ್ರಿಯಾಲೋಪ ಎತ್ತಿದ್ದಾರೆ ಅದಕ್ಕೆ ನಾನು ರೂಲಿಂಗ್ ಕೊಡಬೇಕಲ್ಲ,

ಶ್ರೀ ಸಿ. ಬೈರೇಗೌಡ.—ಅದಕ್ಕೆ ಮೊದಲು ಕಾಲ್ ಅಂಡ್ ಶಕ್ದರ್ ರವರು ಏನು ಉಲ್ಲೇಖ ಮಾಡಿದ್ದಾರೆ ಎನ್ನುವುದನ್ನು ತಾವು ನನಗೆ ತಮ್ಮ ಪತ್ರದಲ್ಲಿ ತಿಳಿಸಿದ್ದೀರಿ. ಅದರಲ್ಲಿರತಕ್ಕ ಒಂದೇ ಒಂದು ವಾಕ್ಯವನ್ನು ತಮ್ಮ ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು.—ಪೇಜ್.

ಶ್ರೀ ಸಿ. ಬೈರೇಗೌಡ.—೭೮೦ ಸೆಕೆಂಡ್ ಪ್ಯಾರಾ.

"it would not be right to place an absolute ban on the members making such allegations"

ದಯವಿಟ್ಟು ತಾವು ಇದರ ಬಗ್ಗೆ ಗಮನ ಕೊಡಬೇಕು. ಈಗ ತಾವು ಏನನ್ನೂ ಪ್ರಸ್ತಾಪ ಮಾಡಬಾರದೆಂದು ಹೇಳುತ್ತಿದ್ದೀರಿ.

ಅಧ್ಯಕ್ಷರು.—ಮುಂದಕ್ಕೆ ಓದಿರಿ.

ಶ್ರೀ ಸಿ. ಬೈರೇಗೌಡ....ನಾನು ಇಲ್ಲಿ ಪ್ರತಿಪಾದನೆ ಮಾಡುವುದೇನೆಂದರೆ, the Chair would be imposing an absolute ban on a member not to raise such issues. ತಾವು ಹೇಳಿರತಕ್ಕಂಥದ್ದು ಇದರಲ್ಲಿ ಅಡಕವಾಗಿದೆ. ಆದ್ದರಿಂದ ಇದರಲ್ಲಿ ಸಾರ್ವಜನಿಕ ಮಹತ್ತರವಾದ ವಿಚಾರಗಳು ಇವೆ. ಭ್ರಷ್ಟಾಚಾರಕ್ಕೆ ಸಂಬಂಧಪಟ್ಟ ವಿಚಾರಗಳೂ ಕೂಡ ಇವೆ.

ಅಧ್ಯಕ್ಷರು.—ತಾವು ಶುರುಮಾಡಿದಿರಿ, ನಾನು ಕಂಪ್ಲೀಟ್ ಮಾಡುತ್ತೇನೆ.

"it would not be right to place an absolute ban on the members making such allegations"

I agree with that proposition, that concept.

" as that might stand in the way of discharging their duties as responsible members "
You are one. I know it.

" While a member should be given an absolute right to bring to the notice of the House any matter which on proper investigation he feels should be ventilated even though it involves the character and reputation of any person he should in the interest of public morality and high parlimentary decoram inform the Speaker before hand on his intention to do so and also the Minister concerned. The Minister will then have an opportunity to look into the matter before hand and come prepared with reply also. At the same time the Speaker will also have an opportunity of satisfying himself that the member has made resonable enquiries and has in his possession prima facie evidence in support of his allegations." Now, you are at that stage where you have got to convince the Speaker that you have a primafacie case, you have made resonable investigation and you have the necessary proof to prove that point. You are at that stage.

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೆ, ಇದರಲ್ಲಿ ಪ್ರೈಮರಿ ಇನ್‌ವೆಸ್ಟಿಗೇಷನ್ ಬಗ್ಗೆ ನಾನು ಹೇಳುವುದಾದರೆ ಇದರ ಬಗ್ಗೆ ಪ್ರಿಲಿಮಿನರಿ ಇನ್‌ವೆಸ್ಟಿಗೇಷನ್ ನಾನು ಮಾಡಿದ್ದೇನೆ. ಇಲ್ಲಿ ಏನೇನು ದಾಖಲೆಗಳು ಇವೆ, ಅವು ನೂರಕ್ಕೆ ನೂರರಷ್ಟು ಸತ್ಯವಾಗಿದೆ.

ಅಧ್ಯಕ್ಷರು.—ಅದನ್ನು ನೀವು ಹೇಳುತ್ತಿದ್ದೀರಿ.

ಶ್ರೀ ಸಿ. ಬೈರೇಗೌಡ.—ಅದರಲ್ಲಿ ಏನಾದರು ಅಸತ್ಯವಾಗಿರತಕ್ಕಂಥಾದ್ದು ..

(ಗೊಂದಲ)

ಅಧ್ಯಕ್ಷರು.—ಇವೊತ್ತು ಬೆಳಿಗ್ಗೆ ಕೂಡ ಇದನ್ನು ಓದಿದ್ದೆ. ನಾನು ಮತ್ತೆ ಇದನ್ನು ಹೇಳಬೇಕು.

" a notice relating to an allegation based on newspapers report..."
ಅದುಃಆಯಿತು.

" in the notice to the Speaker the member is required to give brief details about the allegation which he proposed to make against a person so that the Speaker Could judge that the matter before hand "

ಮಾನ್ಯ ಸದಸ್ಯರು, ಸ್ಪೀಕರ ಗೆ ಸಬ್‌ಸ್ಟ್ಯಾನ್‌ಷಿಯಲ್ ಡಾಕ್ಯುಮೆಂಟೇಷನ್ ಆಫ್ ದಿ ಅಲಿಗೇಷನ್ ಅದನ್ನು ಕೊಡಬೇಕು ಎನ್ನತಕ್ಕದ್ದು ಶಕ್ದ್ದರ್ ಅಂಡ್ ಕೌಲ್ ಬುಕ್‌ನಲ್ಲಿದೆ.

ಶ್ರೀ ಸಿ. ಬೈರೇಗೌಡ.—ಅಧ್ಯಕ್ಷರೆ. ಅದರಲ್ಲಿ ಏನು ಹೇಳುತ್ತಾರೆ ಅಂದರೆ, ಎ ಬ್ರೀಫ್ ರಿಪೋರ್ಟ್ ಎಂದು ಹೇಳುತ್ತಾರೆ ವಿನಹ ಸಬ್‌ಸ್ಟ್ಯಾನ್‌ಷಿಯಲ್ ಎನ್ನತಕ್ಕ ಪದ ಎಲ್ಲಿದೆ ? ಇಲ್ಲಿ ಅದು ಬಂದಿಲ್ಲ ಎನ್ನತಕ್ಕದ್ದನ್ನು ತಾವು ಗಮನಿಸಬೇಕು ಎಂದು ಹೇಳುತ್ತೇನೆ.

MR. SPEAKER.—A notice relating to an allegation based on newspaper report is not allowed unless the member tabling it gives

the Speaker substantial proof that the allegation has some factual basis...

"substantial proof" is there

SRI C. BYREGOWDA.—If it is based on newspaper report but I am not basing my aruguments on any newspaper. I am basing my argument out of the records.

MR. SPEAKER.—So, for that substantial proof is not necessary according to you only with reference to the news paper report substantial proof is necessary, not otherwise. What is the degree?

SRI C. BYREGOWDA.—Yes ನ್ಯೂಸ್‌ಪೇಪರ್‌ನಲ್ಲಿ ಬಂತಕ್ಕಂಥಾದ್ದು ಅದು ಅಥೆಂಟಿಕೇಟ್ ಆಗುವುದಿಲ್ಲ ಎನ್ನತಕ್ಕ ಅರ್ಥದಲ್ಲಿ ಅದು ಬರುತ್ತದೆ. ಆ ಕಾರಣದಿಂದ brief ರಿಪೋರ್ಟ್ ಕೊಡಬೇಕು ಎನ್ನತಕ್ಕದ್ದು ಬರುತ್ತದೆ.

ಅಧ್ಯಕ್ಷರು.—ತಾವು ಏನು ಪ್ರೂಫ್ ಇಟ್ಟುಕೊಂಡಿದ್ದೀರಿ, ಅದನ್ನು ಅಥೆಂಟಿಕೇಟ್ ಮಾಡಿ ನನ್ನ ಕಡೆ ಕಳುಹಿಸಿಕೊಡಿ, ನಾನು ನೋಡುತ್ತೇನೆ.

ಶ್ರೀ ಸಿ. ಬೈರೇಗೌಡ.—ಅಧ್ಯಕ್ಷರೆ ಅದು ಅಥೆಂಟಿಕೆಸಿ ಇಲ್ಲ ಅಂದರೆ ತೆಗೆದುಕೊಳ್ಳಿ ನನ್ನ ರಾಜೀನಾಮೆ. ಇದರ ಅಥೆಂಟಿಕೆಸಿ ಬಗ್ಗೆ ತಮಗೆ ಏನಾದರೂ ಸಂಶಯ ಇದ್ದರೆ ಅನುಮಾನ ಇದ್ದರೆ, ತೆಗೆದುಕೊಳ್ಳಿ ನನ್ನ ರಾಜೀನಾಮೆ ಪತ್ರ ಈಗಲೇ ಇದನ್ನು ತಮಗೆ ಮುಟ್ಟಿಸುತ್ತಿದ್ದೇನೆ.

(ತಮ್ಮ ರಾಜೀನಾಮೆ ಪತ್ರವನ್ನು ಅಧ್ಯಕ್ಷರ ಕಡೆ ಮಾನ್ಯ ಸದಸ್ಯರು ಕಳುಹಿಸಿಕೊಟ್ಟರು) ಅಧ್ಯಕ್ಷರೆ, ನಾನು ಎಲ್ಲವನ್ನು ಅಥೆಂಟಿಕೆಸಿ ಮಾಡಲಿಕ್ಕೆ ತಯಾರಾಗಿದ್ದೇನೆ.

(ಗೊಂದಲ)

ಅಧ್ಯಕ್ಷರು.—ರಾಜೀನಾಮೆ ಕೊಡತಕ್ಕಂಥಾದ್ದು ಸಬ್‌ಸ್ಟ್ಯಾನ್‌ಷಿಯಲ್ ಪ್ರೂಫ್ ನನ್ನ ಕಡೆ ಕಳುಹಿಸಿದ ಹಾಗೆ ಆಗಲಿಲ್ಲ. ನಿಮ್ಮ ರಾಜೀನಾಮೆ ನನ್ನ ಕಡೆ ಕಳುಹಿಸಿದ ಹಾಗೆ ಆಯಿತೇ ವಿನಹ ಸಬ್‌ಸ್ಟ್ಯಾನ್‌ಷಿಯಲ್ ಪ್ರೂಫ್ ಕೊಟ್ಟಂತೆ ಆಗಲಿಲ್ಲ. ಆದ್ದರಿಂದ ತಮ್ಮ ಹತ್ತಿರ ಏನೇನಂ ಡಾಕ್ಯುಮೆಂಟ್ಸ್ ಇದೆ ಅದನ್ನು ಕಳುಹಿಸಿ ಕೊಡಿ ಎಂದು ನಾನು ಕೇಳಿದ್ದು.

(ಗೊಂದಲ)

ಶ್ರೀ ಸಿ. ಬೈರೇಗೌಡ.—ಅಧ್ಯಕ್ಷರೆ,......

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಮಾನ್ಯ ಸದಸ್ಯರು ಇದನ್ನು ಬಹಳ ಗುರುತರವಾದಂತಹ ರೀತಿಯಲ್ಲಿ ತೆಗೆದುಕೊಳ್ಳಬೇಕು. ಏಕೆಂದರೆ, ಇಲ್ಲಿ ಒಬ್ಬರು ಮಾನ್ಯ ಸದಸ್ಯರು ರಾಜೀನಾಮೆ ಪತ್ರ ನನ್ನ ಕಡೆ ಕಳುಹಿಸಿಕೊಟ್ಟಿದ್ದಾರೆ. ಆದ್ದರಿಂದ ಇದು ಗಂಭೀರವಾದ ಸಮಸ್ಯೆ ಎಂದು ತಾವು ತಿಳಿಯಬೇಕು, You cannot shout him down. I will not allow it to happen. I am confining myself to the rules and procedure of this House. I will not deviate from it, whether you send your resignation or not, that is immaterial. But I will stick to the rules and procedure. Because of the serious nature of this particular episode I am giving you an additional chance to send me the documents on which you would like to base your allegations against a particular member of this House. I would like to be convinced.

ಶ್ರೀ ಸಿ. ಬೈರೇಗೌಡ.—ಅಧ್ಯಕ್ಷರೆ, ನಾನು ಕೋಟ್ ಮಾಡತಕ್ಕಂಥ ಡಾಕ್ಯುಮೆಂಟ್ಸ್ ಈ ಸದನದ ಮುಂದೆ ಇಡಲಿಕ್ಕೆ ಮತ್ತು ತಮಗೆ ಕಳುಹಿಸಿಕೊಡುವುದಕ್ಕೂ ನನ್ನದು ಏನೂ ಅಭ್ಯಂತರ ಇಲ್ಲ. ಆ ಕೆಲಸ ಮಾಡಲಿಕ್ಕೆ ನಾನು ತಯಾರು ಇದ್ದೇನೆ.

ಅಧ್ಯಕ್ಷರು.—ಸರಿ, ನನ್ನ ಕಡೆ ಕಳುಹಿಸಿಕೊಡಿ.

ಶ್ರೀ ಸಿ. ಬೈರೇಗೌಡ.—ಅಧ್ಯಕ್ಷರೆ, ಒಬ್ಬರ ಮೇಲೆ ವೃಥಾ ಆರೋಪ ಮಾಡಬೇಕೆಂದಾಗಲಿ' ಅದರಿಂದ, ಒಂದು ದೊಡ್ಡ ಕಿರೀಟ ಸಂಪಾದನೆ ಮಾಡಬೇಕೆಂದಾಗಲಿ ನನ್ನ ಉದ್ದೇಶ ಖಂಡಿತಾ ಅಲ್ಲ. ಇಲ್ಲಿ ಉದ್ದೇಶ ಏನು ಇದೆ ಎನ್ನುವುದನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ತಿಳಿಸಿದ್ದಾರೆ. ಭ್ರಷ್ಟಾಚಾರ ಎಲ್ಲಿ ಹಬ್ಬಿದೆ ಅನ್ನತಕ್ಕಂತಹ ಪದವನ್ನೂ ಕೂಡ ಹೇಳಿದ್ದಾರೆ. ಇದು ನಡೆದಿರತಕ್ಕಂತಹ ವಿಚಾರ ಇದರ ಬಗ್ಗೆ ಸರಕಾರ ಏನು ಕ್ರಮ ತೆಗೆದು ಕೊಳ್ಳುತ್ತದೆ ಎಂಬ ಉದ್ದೇಶದಿಂದ ಪ್ರಸ್ತಾಪ ಮಾಡಿದನೇ ಹೊರತು ಮತ್ತೆ ಯಾವುದರ ಬಗ್ಗೆಯೂ ನನಗೆ ಕಾಳಜಿ ಇಲ್ಲ. ಯಾವ ನಿಮಿಷದಲ್ಲಿ ಬೇಕಾದರೂ ಕೂಡ ಇದನ್ನು ತಲುಪಿಸುತ್ತೇನೆ. ಆದರೆ ಈಗ ಬಿಟ್ಟರೆ ನಾಳೆ ಸದನ ಕಡೆ ದಿನ, ನಾಳೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ. ಈ ನಿಮಿಷದಲ್ಲಿ ಕೊಡುವುದಕ್ಕೆ ನಾನು ತಯಾರಿದ್ದೇನೆ, ಇಲ್ಲಿರತಕ್ಕಂಥಾದ್ದು ಅಷ್ಟೇ ಅಲ್ಲ, ಇನ್ನೂ ಒಂದು ಹೊರೆ ಇದೆ. ಅದನ್ನೂ ಕೂಡ ತಂದು ಕೊಡುವುದಕ್ಕೆ ತಯಾರಿದ್ದೇನೆ.

(ಗೊಂದಲ)

ಅಧ್ಯಕ್ಷರು.—ದಯಮಾಡಿ ಕಳಿಸಿಕೊಡಿ.

ಶ್ರೀ ಸಿ. ಬೈರೇಗೌಡ.—ನನಗೆ ಅವಕಾಶ ಸಿಗುವುದು ಯಾವಾಗ ?

(ಗೊಂದಲ)

ಅಧ್ಯಕ್ಷರು.—ನೀವು ಮುಂದೆ ಭಾಷಣ ಮಾಡುವಾಗ.

ಶ್ರೀ ಸಿ. ಬೈರೇಗೌಡ.—ಹಾಗಾದರೆ ನಾನು ನನ್ನ ಭಾಷಣವನ್ನು ಇಲ್ಲಿಗೇ ನಿಲ್ಲಿಸುತ್ತೇನೆ. ನಾಳೆ ಬೆಳಿಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುವುದಕ್ಕೆ ಮೊದಲು ೨೦–೩೦ ನಿಮಿಷ ಮಾತನಾಡಲು ನನಗೆ ಅವಕಾಶ ಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

(ಗೊಂದಲ)

ಅಧ್ಯಕ್ಷರು.—ನಿನ್ನೆ ನಿಮ್ಮ ಪಕ್ಷದ ಪರವಾಗಿ ಶ್ರೀಮಾನ್ ವೆಂಕಟೇಶ್‌ರವರು ಮಾತನಾಡ ಬೇಕಾಗಿತ್ತು. ನೀವು ಆ ಕಾಗದ ಕಳಿಸಿದ ಮೇಲೆ ನಾನು ನಿಮಗೆ ಅವಕಾಶ ಕೊಡಬೇಕೆಂದು ಉದ್ದೇಶ ಪೂರ್ವಕವಾಗಿ ನಿಮ್ಮನ್ನು ಇವತ್ತು ಕರೆದೆ. ನಿನ್ನೆ ನೀವು ಕಳಿಸಿದಂತಹ ಇಂಥಾದ್ದೆ ಒಂದು ಪತ್ರ ಇದೆ ನೀವು ಏನು ನಿನ್ನೆ ಕಳಿಸಿಕೊಟ್ಟಿದ್ದೀರಿ ಅದರ ನಕಲನ್ನು ಮಾನ್ಯ ಸದಸ್ಯರು ಅಂದರೆ ಈಗ ಮಂತ್ರಿ ಗಳಾಗಿರತಕ್ಕಂತಹವರಿಗೆ ಕಳಿಸಿಕೊಟ್ಟಿದ್ದೇನೆ, ಅವರು ನನಗೆ ಅವರ ಸಮಜಾಯಿಷಿಯನ್ನು ಕೊಟ್ಟಿದ್ದಾರೆ. ಈಗ ನೀವು ನಿನ್ನೆ ಪತ್ರದಲ್ಲಿ ಏನು ನಮೂದಿಸಿದ್ದಿರೋ ಅದನ್ನು ಬಿಟ್ಟು ಬಿಟ್ಟಿದ್ದೀರಿ. ಸಬ್‌ಜ್ಯುಡೀಸ್ ಆಗುತ್ತದೆ ಎಂದು......

(ಗೊಂದಲ)

ಶ್ರೀ ಸಿ. ಬೈರೇಗೌಡ.—ಬಿಟ್ಟಿಲ್ಲ. ನಾನು ಮೂರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆ. Grabbing land by Sri Puttaswamygowda.

MR. SPEAKER.—You have not mentioned. You have only said "by so and so".

SRI C. BYREGOWDA.—In respect of the land belonging to Zilla Parishad, the matter is before the Hon'ble High Court. I am not raising that issue. But, the other issue......

(INTERRUPTION)

ಅಧ್ಯಕ್ಷರು.—ಆ ವಿವರಗಳನ್ನು ನನಗೆ ಕಳುಹಿಸಿ ಕೊಡಿ.

ಶ್ರೀ ಸಿ. ಬೈರೇಗೌಡ.—ಅದನ್ನೆಲ್ಲಾ ಈಗಲೂ ಕೊಡುವುದಕ್ಕೆ ತಯಾರಿದ್ದೇನೆ. ನನಗೆ ಮಾತನಾಡಲು ಬೆಳಿಗ್ಗೆ ಅವಕಾಶ ಮಾಡಿಕೊಡಬೇಕು.

(ಗೊಂದಲ)

MR. SPEAKER.—You cannot put a condition like that. Whatever you have, please send it to me.

(ಗೊಂದಲ)

ಶ್ರೀ ಸಿ. ಬೈರೇಗೌಡ.—ಹಾಗಾದರೆ ಯಾವ ಉದ್ದೇಶದಿಂದ ಈ ಪತ್ರಗಳನ್ನು ಕೇಳುತ್ತಿದ್ದೀರಿ ? ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕೆಂಬ ಉದ್ದೇಶದಿಂದ ತಾನೆ ?

(ಗೊಂದಲ)

ಶ್ರೀ ಟಿ. ಎಂ. ಮಂಜುನಾಥ್.—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಬೇಕಾದರೆ, ಈ ಸದನದಲ್ಲಿನ ಅನುಭವಿ ಸದಸ್ಯರು ಮತ್ತು ಹಿಂದೆ ಮಂತ್ರಿಗಳಾಗಿದ್ದಂತಹವರು ಈ ಸರಕಾರದ ಒಬ್ಬ ಮಂತ್ರಿಗಳ ಮೇಲೆ ಆರೋಪಣೆ ಮಾಡುತ್ತಾ ಬಂದರು, ಇದು ಸಬ್‌ಜ್ಯುಡೀಸ್ ಆಗುತ್ತದೆ ಇದರ ಬಗ್ಗೆ ಮಾಹಿತಿ ಕೊಡಿ ಎಂದು ತಾವು ರೂಲಿಂಗ್ ಅನ್ನು ಕೊಟ್ಟರೂ ಸಹ ಅವರು ಗುರುತರವಾದಂತಹ ಆಪಾದನೆಯನ್ನು ಮಾಡುತ್ತಾ ಅವರ ರಾಜೀನಾಮೆ ಪತ್ರವನ್ನು ಸದನದ ಎಲ್ಲರ ಮುಂದೆ ಕೊಟ್ಟಿದ್ದಾರೆ. ಅವರು ಹೆದರಿಕೆಗಾಗಿ ಹೀಗೆ ಮಾಡಿಲ್ಲ, ಇದು ಬಹಳ ಗಂಭೀರವಾದ ಪ್ರಶ್ನೆ. ಈ ಸರಕಾರದ ಗೌರವಕ್ಕೆ ಚ್ಯುತಿ ಬಂದಿರುತಕ್ಕಂಥಾದ್ದು ಇದೆ. ಇದರಲ್ಲಿ ಎರಡು ವಿಷಯಗಳನ್ನು ಗಂಭೀರವಾಗಿ ನಾವು ಪ್ರಸ್ತಾಪ ಮಾಡಬೇಕಾಗುತ್ತದೆ. ಸರಕಾರ ಮತ್ತು ಸರಕಾರವನ್ನು ಪ್ರತಿನಿಧಿಸತಕ್ಕಂತಹ ಮಂತ್ರಿಗಳು ಕೆಲವು ಆರೋಪಣೆಗಳಿಗೆ ಒಳಗಾಗಿದ್ದಾರೆ ಕೆಲವಾರು ತಪ್ಪುಗಳನ್ನು ಮಾಡಿದ್ದಾರೆ ಅದನ್ನು ಸಾಬೀತು ಮಾಡೇ ಮಾಡುತ್ತೇನೆಂದು ವಿರೋಧ ಪಕ್ಷದ ಸದಸ್ಯರು ಹೇಳಿದರು. ವಿರೋಧ ಪಕ್ಷದ ಮಾಜಿ ಸಚಿವರಾದ ಬೈರೇಗೌಡರು ತಾವು ಅನೇಕ ಬಾರಿ ಹೇಳಿದರೂ ಕೂಡ ತಮ್ಮದೇ ಆದಂತಹ ರೀತಿಯಲ್ಲಿ ಚಾಲೆಂಜ್ ಮಾಡಿದ್ದಾರೆ. ತಾವೂ ಕೂಡ ಅಪ್ಪಣೆ ಕೊಡಿಸಿದ್ದೀರಿ. ಅದು ಇರಲಿ ಗಂಭೀರವಾದ ಈ ಎರಡು ವಿಚಾರಗಳನ್ನು ಈ ಸದನದಲ್ಲಿ ತೀರ್ಮಾನ ಮಾಡದೇ ಹೋದರೆ ಜನತೆ ಇವತ್ತಿನ ದಿವಸ ಸರಕಾರವನ್ನು ಮತ್ತು ಸರಕಾರ ನಡೆಸತಕ್ಕಂತಹವರ ಬಗ್ಗೆ ಅನುಮಾನ ವ್ಯಕ್ತಪಡಿಸುತ್ತಾರೆ. ಅವರಿಗೂ ಕೂಡ ನಾನು ಮಾಡಿದ್ದೇ ಸರಿ ಎಂಬ ಭಾವನೆ ಬರುತ್ತಿದೆ. ಆದ್ದರಿಂದ ಇವತ್ತು ಇದು ತೀರ್ಮಾನವಾಗಲೇಬೇಕು. ಮಾನ್ಯ ಬೈರೇಗೌಡರು ತಮ್ಮ ಸ್ವಹಸ್ತದಿಂದ ರಾಜೀನಾಮೆಯನ್ನು ಬರೆದು ತಮಗೆ ಕಳಿಸಿದ್ದಾರೆ. ಈ ಸದನದ ಗೌರವ ಪ್ರತಿಷ್ಠೆ ಉಳಿಯಬೇಕಾದರೆ ತಾವು ಕೂಡಲೇ ಗಮನಹರಿಸಿ ಅವರು ಏನು ಕೊಟ್ಟಿದ್ದಾರೆ ಅದನ್ನು ಪರಾಂಬರಿಸಿ ಯಾರು ತಪ್ಪಿತಸ್ಥರಾಗಿದ್ದಾರೆ ಅವರಿಗೆ ಈ ಸದನದಲ್ಲಿ ಶಿಕ್ಷೆ ಕೊಡತಕ್ಕಂಥಾದ್ದಲ್ಲ ತಮಗೆ ಬಿಟ್ಟಿರತಕ್ಕಂತಹ ವಿಚಾರ. ಅದು ಇಲ್ಲದೇ ಹೋದರೆ ಮಾನ್ಯ ಬೈರೇಗೌಡರು ಏನು ಹೇಳಿದ್ದಾರೆ ಅವರ ಮಾತಿಗೆ ವಿರುದ್ಧ ವ್ಯತ್ಯಾಸ ಮಾಡದೆ ವಾಪಸ್ ತೆಗೆದುಕೊಳ್ಳದೆ ಅವರು ಏನು ರಾಜೀನಾಮೆ ಕೊಟ್ಟಿದ್ದಾರೆ ಅದನ್ನು ಅಂಗೀಕಾರ ಮಾಡಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು.—ಅವರಿಗೆ ಏನು ಶಿಕ್ಷೆ ಕೊಡಬೇಕು?

ಶ್ರೀ ಟಿ. ಎಂ. ಮಂಜುನಾಥ್.—ಅವರು ಏನು ತಮ್ಮ ರಾಜೀನಾಮೆಯನ್ನು ಕೊಟ್ಟಿದ್ದಾರೆ, ಈ ಬಗ್ಗೆ ಒಂದು ಒಳ್ಳೆಯ ಭಾವನೆಯನ್ನು ಈ ದೇಶದಲ್ಲಿ ಮೂಡಿಸಿರತಕ್ಕದ್ದು ಆಗಬೇಕು. ಏಕೆಂದರೆ, ಮಾನ್ಯ ಸದಸ್ಯರು ಪದೇ ಪದೇ ಎದ್ದು ನಿಲ್ಲುವುದು. ಸರ್ಕಾರದ ಮೇಲೆ ಆರೋಪವನ್ನು ಮಾಡತಕ್ಕದು, ನಿರಪರಾಧಿ ಮಂತ್ರಿಗಳ ಮೇಲೆ ಆರೋಪವನ್ನು ಮಾಡತಕ್ಕದ್ದು, ಅದು ಪತ್ರಿಕೆಗಳಲ್ಲಿ ಬರತಕ್ಕದ್ದು ಈ ವಿಚಾರದಲ್ಲಿ ಊಹಾಪೋಹ ಮಾಡತಕ್ಕದ್ದು, ಸರ್ಕಾರಕ್ಕೆ ಅಗೌರವವನ್ನು ತರತಕ್ಕದ್ದು ಈ ಮನೆಯಲ್ಲಿ ಅನೇಕಸಾರಿ ನಡೆಯುತ್ತಲೇ ಬರುತ್ತಿದೆ. ಆದ್ದರಿಂದ ಇದಕ್ಕೆ ಒಂದು ಅಂತಿಮ ತೆರೆಯನ್ನು ತಾವು ಎಳೆಯಲೇ ಬೇಕು. ತಾವು ಈ ಪ್ರಶ್ನೆಯನ್ನು ಬಹಳ ಗಂಭೀರ ರೀತಿಯಲ್ಲಿ ಪರಿಗಣಿಸಿ ಕ್ರಮವನ್ನು ತೆಗದುಕೊಳ್ಳಬೇಕೆಂದು ಈ ಸದನದ ಎಲ್ಲ ಮಾನ್ಯ ಸದಸ್ಯರ ಮುಖಾಂತರ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತಿದ್ದೇನೆ. ಇವರು ಈ ರೀತಿ ಅನೇಕ ಸಲ ಚಾಲೆಂಜ್ ಮಾಡಿ ಮಾಡಿ ತಪ್ಪಿಸಿಕೊಳ್ಳುತ್ತಿದ್ದಾರೆ. ಆದ್ದರಿಂದ ಈ ಸಾರಿ ಇದಕ್ಕೆ ಒಂದು ಅಂತಿಮ ಆಗಲೇಬೇಕು. ಆದ್ದರಿಂದ ಕೂಡಲೇ ತಾವು ಅವರ ರಾಜೀನಾಮೆಯನ್ನು ಅಂಗೀಕಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಬಿ. ಕೋಳಿವಾಡ್.—ಮಾನ್ಯ ಅಧ್ಯಕ್ಷರೆ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ. ಈಗ ನಮ್ಮ ಎದುರಿಗೆ ಇರತಕ್ಕಂಥ ಒಂದು ವಿಷಯ ಏನೆಂದರೆ ಮಾನ್ಯ ಸದಸ್ಯರಾದ ಬೈರೇಗೌಡರು ಕೊಟ್ಟಂಥ ರಾಜೀನಾಮೆಯನ್ನು ಸ್ವೀಕಾರಮಾಡುವುದು ಬಿಡುವುದು ಮಾನ್ಯಸಭಾಧ್ಯಕ್ಷರಿಗೆ ಸೇರಿದ್ದು. ಅದನ್ನು ಸ್ವೀಕಾರ ಬೇಕಾದರೂ ಮಾಡಲಿ, ಇಲ್ಲವಿದ್ದರೆ ಬೇರೆ ಇನ್ನೇನಾದರೂ ಮಾಡಲಿ. ಮಾನ್ಯ ಸದಸ್ಯರು ರಾಜೀನಾಮೆಯನ್ನು ಈ ಸದನಕ್ಕೆ ಇನ್ನೂ ಕೊಟ್ಟಿಲ್ಲ. ಅದನ್ನು ಮಾನ್ಯ ಅಧ್ಯಕ್ಷರಿಗೆ ಕೊಟ್ಟಿದ್ದಾರೆ. ಆದ್ದರಿಂದ ಈಗ ಮಾನ್ಯ ಅಧ್ಯಕ್ಷರಿಗೆ ಇದರ ಅಧಿಕಾರ ಇದೆ. ಇವತ್ತು ನಮ್ಮ ಎದುರಿಗಿರತಕ್ಕ ವಿಷಯ ಮಾನ್ಯ ಬೈರೇಗೌಡರು ಸರ್ಕಾರದ ಮೇಲೆ ಬಹಳ ಗುರುತರವಾದ ಆಪಾದನೆಯನ್ನು ಮಾಡುವುದಕ್ಕೆ ಪೂರ್ವದಲ್ಲಿ....

ಅಧ್ಯಕ್ಷರು.—ಅವರು ಇನ್ನೂ ಮಾಡಿಲ್ಲ. ಯಾವ ಆಪಾದನೆಯನ್ನೂ ಮಾಡುವುದಕ್ಕೆ ನಾನು ಇನ್ನೂ ಅವಕಾಶವನ್ನೇ ಕೊಟ್ಟಿಲ್ಲ.

ಶ್ರೀ ಕೆ.ಬಿ. ಕೋಳಿವಾಡ್.—ಅವರು ತಮಗೆ ಸಂಪೂರ್ಣವಾದ ವಿವರವನ್ನೊದಗಿಸಿದ ಮೇಲೆ, ಅದು ಮಾನ್ಯ ಸಭಾಧ್ಯಕ್ಷರಿಗೆ ಮನದಟ್ಟಾದ ಮೇಲೆ ಅದಕ್ಕೆ ತಾವು ಅನುಮತಿಯನ್ನು ಕೊಡಬೇಕೇ, ಬೇಡವೇ ಎನ್ನತಕ್ಕ ವಿಚಾರ ಬರುತ್ತದೆ. ಈಗ ಮಾನ್ಯ ಬೈರೇಗೌಡರು ತಮ್ಮಲ್ಲಿರತಕ್ಕ ಎಲ್ಲ ಕಾಗದ ಪತ್ರಗಳನ್ನೂ ಮಾನ್ಯ ಅಧ್ಯಕ್ಷರಿಗೆ ಕಳುಹಿಸಿಕೊಡಲಿ, ಅವರಿಗೆ ಸಮಾಧಾನವಾಗಿ. ಅದರ ಮೇಲೆ ಮಾತನಾಡಬಹುದು ಎಂದು ಹೇಳಿದಮೇಲೆ If the Speaker is satisfied then only the Speaker will give permission and thereafter the hon. Member is entitled to raise that allegation or any other subject. He cannot raise the matter otherwise. It is left to you Sir to give permission or not, if the hon. Member submits all the relevant documents.

MR. SPEAKER.—I uphold the contention of Sri K. B. Koliwad.

SRI C. BYREGOWDA.—Sir, my friend Sri K. B. Koliwad has made my job very easy. I am thankful to him.

MR. SPEAKER.—He has made even my job easier. Both of us should be thankful to him.

SRI C. BYREGOWDA.—Sir, personally I am thankful to him. I am prepared to handover to you all the documents which are in my possession. But, I must get a chance in this House to explain my charges. That is all my request to you.

MR. SPEAKER.—The rule provides you ample scope to pursue your charge within the limitations imposed by the Rules of Procedure of this House.

ಶ್ರೀ ಸಿ. ಬೈರೇಗೌಡ.—ಅದಕ್ಕೋಸ್ಕರವೇ ನಾಳೆ ದಿವಸ ನಾನು ಮಾತನಾಡುವುದಕ್ಕೆ ತಾವು ದಯವಿಟ್ಟು ಅವಕಾಶ ಕೊಡಬೇಕೆಂದು ನಾನು ಕೇಳಿದ್ದು.

ಅಧ್ಯಕ್ಷರು.—ನಿಮ್ಮ ಹತ್ತಿರ ಇರತಕ್ಕ ಮಾಹಿತಿಗಳನ್ನೆಲ್ಲಾ ನನಗೆ ಕಳುಹಿಸಿಕೊಡಿ. ಅದನ್ನು ನಾನು ನೋಡುತ್ತೇನೆ. Then I will decide after seeing it.

SRI C. BYREGOWDA.—I am thankful to the Chair. I will make available all records, not only in possession of me just now but also other relevant records. I will definitely handover but the Speaker should be kind enough to give me an opportunity to explain my charges on the floor of this House.

MR. SPEAKER.—Please send all the documents. I will apply my mind. I will look into them.

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಸ್ಪಷ್ಟವಾಗಿ ಹೇಳಿದ್ದೇನೆ. ಹಾರಿಕೆಗೆ, ಜಾರಿಕೆಗೆ ಯಾರಮೇಲೂ ತೀಟೆಗೋಸ್ಕರ ಆಪಾದನೆಯನ್ನು ಮಾಡತಕ್ಕವನು ನಾನಲ್ಲ. ಅದನ್ನು ನಾನು ಮಾಡುವುದಿಲ್ಲ.

(ಗೊಂದಲ)

MR. SPEAKER.—Order, order.

(Interruption)

ಅಧ್ಯಕ್ಷರು.—ಎಲ್ಲರೂ ದಯವಿಟ್ಟು ಕೂತುಕೊಳ್ಳಿ. ಬೈರೇಗೌಡರೆ ನಿಮ್ಮ ಹತ್ತಿರ ಇರುವ ದಾಖಲೆಗಳನ್ನೆಲ್ಲಾ ನನಗೆ ಕಳುಹಿಸಿಕೊಡಿ ನಾನು ನೋಡುತ್ತೇನೆ.

೩-೩೦ ಪಿ. ಎಂ.

(ಗೊಂದಲ)

ಶ್ರೀ ಸಿ. ಬೈರೇಗೌಡ.—ನಾನು ಏನು ಹೇಳುತ್ತಿದ್ದೇನೆ ಎನ್ನುವುದು ಇಡೀ ಪ್ರಪಂಚಕೆ ಗೊತ್ತಿರುವ ವಿಷಯ.

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು. ಶ್ರೀ ಬೆಳ್ಳಿಯಪ್ಪನವರು ಮಾತನಾಡಬಹುದು.

(ಗೊಂದಲ)

(ಈ ಹಂತದಲ್ಲಿ ಯಾರ ಮಾತನ್ನು ದಾಖಲೆ ಮಾಡಿಕೊಳ್ಳಬಾರದೆಂದು ಮಾನ್ಯ ಅಧ್ಯಕ್ಷರು ಅಪ್ಪಣೆ ನೀಡಿದರು)

† ಶ್ರೀ ಎ. ಎಂ. ಬೆಳ್ಳಿಯಪ್ಪ (ಸೋಮವಾರಪೇಟೆ).—ಸನ್ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಭಾಷಣದ ಮೇಲೆ ವಂದನಾರ್ಪಣೆಯನ್ನು ಅರ್ಪಿಸುವ ಈ ಸಂದರ್ಭದಲ್ಲಿ ನಾನು ಕೆಲವೊಂದು ಮಾತುಗಳನ್ನು ಹೇಳಬೇಕೆಂದು ಇದ್ದೇನೆ. ಪ್ರಪಂಚದ ಕೆಲವು ಭಾಗಗಳಲ್ಲಿ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯಲ್ಲಿ ಹಲವಾರು ಬದಲಾವಣೆಗಳನ್ನು ನಾವು ಸುಮಾರು ಒಂದೆರಡು ವರ್ಷಗಳಿಂದ ಕಂಡಿದ್ದೇವೆ. ಆ ಬದಲಾವಣೆಯನ್ನು ಅಲ್ಲಿನ ಜನ ಆ ಒಂದು ಸಿದ್ಧಾಂತಕ್ಕೆ ಅನುಗುಣವಾಗಿ ಒಪ್ಪಿಕೊಂಡಿದ್ದಾರೆ. ನಮ್ಮ ದೇಶದಲ್ಲಿ, ನಮ್ಮ ರಾಜ್ಯದಲ್ಲಿ ಅಂಥ ಒಂದು ರಾಜಕೀಯ ಬದಲಾವಣೆಯನ್ನು ಕಳೆದ ಚುನಾವಣೆಯಲ್ಲಿ ಕಂಡಿದ್ದೇವೆ. ಅದರಲ್ಲೂ ಕರ್ನಾಟಕದಲ್ಲಿ ೬-೭ ವರ್ಷಗಳಿಂದ ಅಧಿಕಾರದಲ್ಲಿದ್ದಂಥ ಜನತಾಪಕ್ಷ ಸೋತು ಕಾಂಗ್ರೆಸ್ ಗೆದ್ದು ಅಧಿಕಾರಕ್ಕೆ ಬಂದಿದೆ. ಈ ಜನತಾಪಕ್ಷದವರು ಕೊಟ್ಟಂಥ ಆಶೋತ್ತರಗಳನ್ನು ಈಡೇರಿಸದಿದ್ದುದರಿಂದ ಜನ ಅವರ ಮೇಲೆ ಇಟ್ಟಂಥ ನಂಬಿಕೆಯನ್ನು ಕಳೆದುಕೊಂಡು ಈ ಒಂದು ಕಾಂಗ್ರೆಸ್ ಪಕ್ಷವನ್ನು ಪೂರಕವಾಗಿ ನಮ್ಮ ಆಶೋತ್ತರಗಳನ್ನು ಈಡೇರಿಸಬೇಕು ಎನ್ನುವ ಒಂದೇ ಒಂದು ಅಭಿಪ್ರಾಯದಿಂದ ಇವತ್ತು ಕಾಂಗ್ರೆಸ್ ಪಕ್ಷವನ್ನು ಈ ರಾಜ್ಯದಲ್ಲಿ ಅಧಿಕಾರಕ್ಕೆ ತಂದಿದ್ದಾರೆ. ಜನರ ಆಶೋತ್ತರಗಳನ್ನು ಈಡೇರಿಸಬೇಕಾದರೆ ಕಾಂಗ್ರೆಸ್ ಪಕ್ಷಕ್ಕೆ ಬಹಳ ಕಷ್ಟವಿದೆ. ಇದಕ್ಕೆ ಕಾರಣವೇನೆಂದರೆ ಇಲ್ಲಿನ ಸಂಪನ್ಮೂಲಗಳು ಜನರ ಆಶೋತ್ತರಗಳಿಗನುಗುಣವಾಗಿ ಸರಿಯಾಗಿದೆಯೇ ಎನ್ನುವ ಪ್ರಶ್ನೆ ಬರುತ್ತದೆ. ಈ ಒಂದು ಪ್ರಶ್ನೆ ವಾದವಿವಾದಕ್ಕೆ ಒಳಗಾಗಿರುವಂತಹ ಸಂದರ್ಭದಲ್ಲಿ ಸನ್ಮಾನ್ಯ ಅರ್ಥಮಂತ್ರಿಗಳು ೧೮-೧೨-೧೯೮೯ ರಂದು ಈ ರಾಜ್ಯದ ಆರ್ಥಿಕ ವ್ಯವಸ್ಥೆಯನ್ನು ಕುರಿತ ಒಂದು ಪುಸ್ತಕವನ್ನು ಈ ರೀತಿಯಾಗಿ ನಮ್ಮ ಮುಂದೆ ಕೊಟ್ಟಿದ್ದಾರೆ. ಕರ್ನಾಟಕದ ಆರ್ಥಿಕ ಪರಿಸ್ಥಿತಿಯನ್ನು ಈ ಒಂದು ಪುಸ್ತಕದಲ್ಲಿ ನೋಡುವಾಗ ೧೯೮೪-೮೫ ರಿಂದ ೧೯೮೯-೯೦ ರವರೆಗೆ ತೆರಿಗೆ ಮಟ್ಟದಲ್ಲಿ ಆದಾಯ ಎಷ್ಟಿತ್ತು, ಆ ಒಂದು ಆದಾಯ ಕಳೆದ ಮೂರು ವರ್ಷಗಳಲ್ಲಿ ಅಂದರೆ ೧೯೮೭-೮೮, ೧೯೮೮-೮೯, ೧೯೮೯-೯೦ರಲ್ಲಿ ಯಾವರೀತಿ ಕಡಿಮೆಯಾಗುತ್ತಾ ಬಂದಿತು ಎಂಬುದನ್ನು ಇದರಲ್ಲಿ ತೋರಿಸಿದ್ದಾರೆ. ಅದೇರೀತಿ ಯೋಜನೇತರ ವೆಚ್ಚವನ್ನು ನೋಡಿದಾಗ ೧೯೮೪-೮೫ ರಿಂದ ೧೯೮೯-೯೦ ರವರೆಗೆ ೯೪೮ ಕೋಟಿ ರೂಪಾಯಿ ಇದ್ದದ್ದು ೨೫೬೨ ಕೋಟಿ ರೂಪಾಯಿಗೆ ಏರಿದೆ. ಅಂದರೆ ಆರು ವರ್ಷಗಳ ಅವಧಿಯಲ್ಲಿ ೧೬೧೪ ಕೋಟಿ ರೂಪಾಯಿಗಳಷ್ಟು ಜಾಸ್ತಿಯಾಗಿದೆ. ಈ ಯೋಜನೇತರ ಖರ್ಚುಗಳು ಏತಕ್ಕೋಸ್ಕರ ಜಾಸ್ತಿಯಾಯಿತು ಎಂಬುದನ್ನು ವಿವರಿಸುವಾಗ ಈ ಆರು ವರ್ಷಗಳಲ್ಲಿ ನೌಕರಶಾಹಿಯ ಸಂಬಳ ಏನಿತ್ತು ಅದು ಒಂದರಿಂದ ೩ ರಷ್ಟು ಹೆಚ್ಚಾಗಿದೆ ಎಂದು ತಿಳಿದು ಬರುತ್ತದೆ. ೧೯೮೪-೮೫ರಲ್ಲಿ ೪೨೪ ಕೋಟಿ ಇದ್ದಂತಹ ಸಂಬಳ ೧೯೮೯-೯೦ ರಲ್ಲಿ ೧೨೫೧ ಕೋಟಿ ರೂಪಾಯಿಗಳಿಗೆ ಹೆಚ್ಚಿದೆ, ಅಂದರೆ ೩ ರಷ್ಟು ಜಾಸ್ತಿಯಾಗಿದೆ ಎಂಬುದನ್ನು ಕಾಣುತ್ತೇವೆ. ಈ ಕಾರಣದಿಂದ ಆದಾಯಕ್ಕಿಂತ ವೆಚ್ಚ ಜಾಸ್ತಿಯಾದ ಕಾರಣದಿಂದ ನಮ್ಮ ಸಂಪನ್ಮೂಲಗಳು ಬಹಳ ಕಷ್ಟದ ಸ್ಥಿತಿಯಲ್ಲಿದೆ ಎಂಬುದನ್ನು ಆರ್ಥಿಕ ಮಂತ್ರಿಗಳು ಈ ಬಡ್ಜೆಟ್ ಪುಸ್ತಕದಲ್ಲಿ ವಿವರಣೆ ಕೊಟ್ಟಿದ್ದಾರೆ. ಈ ಒಂದು ಹೇಳಿಕೆಯನ್ನು ಕೊಟ್ಟನಂತರ ಈ ರಾಜ್ಯಪಾಲರ ಭಾಷಣದಲ್ಲಿ ನಾವು ಈ ಸರ್ಕಾರ ಮಾಡಿಸುವಂತಹ ಹಲವಾರು ಒಳ್ಳೆಯ ಕೆಲಸಗಳನ್ನು ನೋಡಿದ್ದೇವೆ. ಒಂದನೆಯದಾಗಿ, ಸರ್ಕಾರಿ ನೌಕರರ ಮತ್ತು ಸರ್ಕಾರಿ ಅಧಿಕಾರಿಗಳ ವಿಷಯ. ಇವರಲ್ಲಿ ಯಾವ ರೀತಿಯಲ್ಲಿ ದಕ್ಷತೆ ತರಬೇಕು, ಯಾವ

ರೀತಿಯಲ್ಲಿ ಸೇವಾ ಶಿಸ್ತನ್ನು ತರಬೇಕು, ಯಾವ ರೀತಿಯಲ್ಲಿ ಭ್ರಷ್ಟಾಚಾರ ಅಥವಾ ಲಂಚಗುಳಿತನ ಇಲ್ಲದಂತೆ ಮಾಡಬೇಕೆಂದು ಹೇಳುವುದಕ್ಕೆ ಈ ಒಂದು ಸರ್ಕಾರ ಮೂರು ತರಹದ ಸಮಿತಿಗಳನ್ನು ರಚಿಸುವುದಾಗಿ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಇದರ ಬಗ್ಗೆ ಹಲವಾರು ಮಂದಿ ಸದಸ್ಯರು ಹೇಳಿರುವುದರಿಂದ to avoid repetition I am not going further into this matter. However, the Government has the real intention of eradicating all these malpractices. ಅಥವಾ ದಕ್ಷತೆಯನ್ನು ಸರಿ ಮಾಡುವುದಕ್ಕೋಸ್ಕರ ಸೇವಾ ಶಿಸ್ತನ್ನು ಉಳಿಸುವುದಕ್ಕೋಸ್ಕರ ಅಥವಾ ಭ್ರಷ್ಟಾಚಾರ ಇಲ್ಲದಂತೆ ಮಾಡುವುದಕ್ಕೋಸ್ಕರ ಒಂದು ಒಳ್ಳೆಯ ನೀತಿಯನ್ನು ನಿರೂಪಿಸಿ ಈ ನೌಕರಶಾಹಿಯಲ್ಲಿ ಒಳ್ಳೆಯ ನಡತೆಯನ್ನು ತರಬೇಕೆಂದು ಸರ್ಕಾರ ಹೊರಟಿರುವದನ್ನು ನೋಡಿದಾಗ ನಾವು ಸರ್ಕಾರಕ್ಕೆ ಅಭಿನಂದನೆಗಳನ್ನು ಅರ್ಪಿಸಬೇಕಾಗಿದೆ. ಮಾನ್ಯ ರಾಜ್ಯಪಾಲರು ತಮ್ಮ ಭಾಷಣದ ೧೪ನೇ ಪ್ಯಾರಾದಲ್ಲಿ ಈ ಸರ್ಕಾರಿ ಜಮೀನುಗಳ ಅನಧಿಕೃತ ಸ್ವಾಧೀನಾನುಭೋಗಗಳನ್ನು ಸಕ್ರಮಗೊಳಿಸುವ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈ ರೀತಿ ಸಕ್ರಮಗೊಳಿಸಿದಾಗ ಎಷ್ಟೋ ವರ್ಷಗಳಿಂದ ಈ ರಾಜ್ಯದಲ್ಲಿ ಹಕ್ಕುಪತ್ರಗಳು ಇಲ್ಲದೆ ಅಥವಾ ಪಟ್ಟಾ ಇಲ್ಲದೆ ಅಥವಾ ಅನುಭೋಗ ಇರುವ ವ್ಯಕ್ತಿಗಳಿಗೆ ಸರಿಯಾದ ಹಕ್ಕುಪತ್ರಗಳನ್ನು ನೀಡುವುದರ ಮೂಲಕ ಅವರ ಅನುಭೋಗವನ್ನು ಸಕ್ರಮಗೊಳಿಸುವ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಇದು ಕೂಡ ಸ್ವಾಗತಾರ್ಹ. ಈ ಒಂದು ಸಂದರ್ಭದಲ್ಲಿ ನಾನು ಕೊಡಗು ಜಿಲ್ಲೆಯಲ್ಲಿ ಏನಾಗುತ್ತಿದೆ ಎಂಬುದರ ವಿಷಯದಲ್ಲಿ ಹೇಳಬೇಕಾಗಿದೆ. ಕೊಡಗು ಜಿಲ್ಲೆಯಲ್ಲಿ ೩-೪ ತರಹದ ಜಮೀನುಗಳು ಇವೆ. ಉಂಬಳಿ, ಊರುಗುಪ್ಪೆ, ಉರುಡುವೆ ಗೋಮಾಳ ಜಮೀನುಗಳಲ್ಲಿ ಎಷ್ಟೋ ವರ್ಷಗಳಿಂದ ಜನರು ಮನೆಗಳನ್ನು ಕಟ್ಟಿಕೊಂಡು ವ್ಯವಸಾಯ ಮಾಡಿಕೊಂಡಿರುವ ಜನರಿದ್ದಾರೆ. ಈ ಜನರಿಗೆ ಬಹಳಷ್ಟು ವರ್ಷಗಳಿಂದ ಪಟ್ಟಾ ಅಥವಾ ಹಕ್ಕುಪತ್ರ ಕೊಟ್ಟಿಲ್ಲ. ಉಂಬಳಿ, ಊರುಗುಪ್ಪೆ, ಗೋಮಾಳ ಪ್ರದೇಶಗಳಲ್ಲಿ ಯಾರು ವ್ಯವಸಾಯ ಮಾಡುವವರಿದ್ದಾರೆ, ಮನೆಗಳನ್ನು ಕಟ್ಟಿಕೊಂಡಿದ್ದಾರೆ ಅವರಿಗೆಲ್ಲ ಹಕ್ಕುಪತ್ರಗಳನ್ನು ಕೊಡತಕ್ಕ ತೀರ್ಮಾನವನ್ನು ಸರ್ಕಾರ ಜಾಗ್ರತೆ ಮಾಡಬೇಕಾಗಿದೆ.

ಕೆಲವು ದಿನಗಳ ಹಿಂದೆ ರೆವಿನ್ಯೂ ಮಂತ್ರಿಗಳು ಕೊಡಗಿಗೆ ಬಂದಿದ್ದಾಗ ಅವರು ಈ ಬಗ್ಗೆ ಒಂದು ಸಲಹೆಯನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಕೊಟ್ಟಿದ್ದಾರೆ. ಅದರ ಪ್ರಕಾರ ನಾನು ಸರ್ಕಾರವನ್ನು ಕೇಳಿಕೊಳ್ಳುವುದೇನೆಂದರೆ, ಈ ಊರುಗುಪ್ಪೆ, ಗೋಮಾಳ ಮತ್ತು ಉಂಬಳಿ, ಊರುಡುವೆ ಇದರಲ್ಲಿ ಅಕ್ರಮವಾಗಿ ಯಾರು ಮನೆ ಕಟ್ಟಿದ್ದಾರೆ ಯಾರು ೨೫-೩೦ ವರ್ಷಗಳಿಂದ ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ. ಅವರಿಗೆ ಹಕ್ಕುಪತ್ರಗಳನ್ನು ಕೊಡಿಸುವುದಕ್ಕೆ ಸರಕಾರ ಮುಂದೆ ಬರಬೇಕೆಂದು ಸರ್ಕಾರವನ್ನು ಕೇಳುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ, ಈ ಒಂದು ರಾಜ್ಯಪಾಲರ ಭಾಷಣದ ೧೬, ೧೭, ೧೮ ಮತ್ತು ೩೩ನೇ ಪ್ಯಾರಾದಲ್ಲಿ ಕೈಗಾರಿಕೆ ವಿಷಯದ ಬಗ್ಗೆ ಸನ್ಮಾನ್ಯ ರಾಜ್ಯಪಾಲರು ಹೇಳಿದ್ದಾರೆ. ಈ ನಾಲ್ಕು ಪ್ಯಾರಾಗಳಲ್ಲಿ ಕೈಗಾರಿಕೆಗಳ ಬಗ್ಗೆ ಸರ್ಕಾರದ ನೀತಿ ನಿಯಮಗಳನ್ನು ಹೇಳಿದ್ದರೂ ಕೂಡ ಕೈಗಾರಿಕಾ ರಂಗದಲ್ಲಿ ಕೆಲಸ ಮಾಡುವ ಕಾರ್ಮಿಕರ ವಿಷಯ ಏನನ್ನೂ ಹೇಳಿಲ್ಲ. ಕಾಫಿ ತೋಟದಲ್ಲಿ ಕೆಲಸ ಮಾಡುವ ಕಾರ್ಮಿಕರಿದ್ದಾರೆ. ಅದೂ ಕೂಡ ಒಂದು ಉದ್ಯಮ. ಮೊನ್ನೆ ವಿರೋಧಪಕ್ಷದ ನಾಯಕರಾದ ಚಂದ್ರೇಗೌಡರು ಕಾಫಿ ವಿಷಯದ ಬಗ್ಗೆ ಹೇಳುತ್ತಾ ಪರ್ಚೇಸ್ ಟ್ಯಾಕ್ಸ್ ಬಗ್ಗೆ ಮಾತನಾಡಿದರು. Though he is coming from the Malenad area and is in the midst of coffee plantations, he did not utter a word in support of the plantation workers. The plantation workers have been, for the last six to seven years, fighting with the Janata Government for the fulfilment of their demands i.e., the fixation of the minimum wages under the Minimum Wages Act. ೧೯೮೩ನೇ ಇಸವಿಯಲ್ಲಿ ಜನತಾ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಕರ್ನಾಟಕದ ಪ್ಲಾಂಟೇಷನ್‌ನಲ್ಲಿ ಕಾಫಿ ಎಸ್ಟೇಟ್‌ನಲ್ಲಿ, ರಬ್ಬರ್, ಟೀ ಪ್ಲಾಂಟೇಷನ್‌ನಲ್ಲಿರುವಂಥ ಕಾರ್ಮಿಕರು ೩ ಲಕ್ಷ ಜನರಿದ್ದು, ಆ ಯೂನಿಯನ್‌ನವರು ಮಿನಿಮಂ ವೇಜಸ್ಸನ್ನು ಮಿನಿಮಂ ವೇಜಸ್ ಆಕ್ಟ್ ಪ್ರಕಾರ ನಿಗದಿ ಮಾಡಬೇಕೆಂದು ಕೇಳುತ್ತಿದ್ದಾರೆ. ಆದರೆ ೧೯೮೩ನೇ ಇಸವಿಯಿಂದ ೧೯೮೯ರವರೆಗೆ ಹಿಂದಿನ ಸರ್ಕಾರ ಯಾವ ರೀತಿಯಲ್ಲೂ ಕಾರ್ಮಿಕರ ಸಂಬಳವನ್ನು ಫಿಕ್ಸ್ ಮಾಡಲಿಲ್ಲ ಟ್ರೈಪಾರ್ಟೈಟ್ ಅಗ್ರಿಮೆಂಟ್ ಆಯಿತು, ಡ್ರಾಫ್ಟ್ ನೋಟಿಫಿಕೇಶನ್ ಆಯಿತು. ಆದರೂ ಕೂಡ ಕೇಂದ್ರಸರ್ಕಾರದ ನೀತಿಯಂತೆ ಎರಡು ವರ್ಷಗಳಿಗೊಂದು ಸಾರಿ ಮಿನಿಮಂ ವೇಜಸ್ ಅನ್ನು ಫಿಕ್ಸ್ ಮಾಡಲಿಲ್ಲ. ಅದಕ್ಕೆ ವಿರುದ್ಧವಾಗಿ, according to the labourers, with the ulterior purpose to previous Government did not implement the Minimum Wages Act. ನಾನು ಕೊಡಗಿನಿಂದ ಬರುವವನು. ಮಲೆನಾಡಿನಿಂದ ಬರುವ

ಅನೇಕ ಸದಸ್ಯರು ಇಲ್ಲಿದ್ದಾರೆ. ಕಾಂಗ್ರೆಸ್ ಪಕ್ಷಕ್ಕೆ ಈ ಪ್ರದೇಶದಲ್ಲಿರುವ ಕಾರ್ಮಿಕರು ಹೆಚ್ಚಿನದಾಗಿ ಬೆಂಬಲವನ್ನು ಹಿಂದಿನ ಚುನಾವಣೆಯಲ್ಲಿ ಕೊಟ್ಟಿದ್ದಾರೆ. ಮಲೆನಾಡಿನ ಭಾಗದಲ್ಲಿ ಕಾರ್ಮಿಕರ ಸಹಾಯ ಇಲ್ಲದೇ ಹೋಗಿದ್ದರೆ ಕಾಂಗ್ರೆಸ್‌ನಲ್ಲಿ ಬಹಳ ಜನ ಗೆದ್ದು ಬರುವುದಕ್ಕೆ ಸಾಧ್ಯ ಆಗುತ್ತಿರಲಿಲ್ಲ. ನಾನು ಆ ಕಾರ್ಮಿಕರಿಗೆ ಆಶ್ವಾಸನೆ ಕೊಟ್ಟಿದೆ. ಏನೆಂದರೆ ನಾವು ಅಧಿಕಾರಕ್ಕೆ ಬಂದನಂತರ ನಿಮ್ಮ ಬೇಡಿಕೆಗಳನ್ನು ಈಡೇರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು. ನಾನು ಗೆದ್ದು ಬಂದನಂತರ ಕಾರ್ಮಿಕ ಮಂತ್ರಿಗಳನ್ನು ರಿಕ್ವೆಸ್ಟ್ ಮಾಡಿಕೊಂಡೆ. ಮನವಿ ಮಾಡಿಕೊಂಡೆ, ಕಾಗದ ಬರೆದೆ. ಮಿನಿಮಂ ವೇಜಸ್ ಅನ್ನು ನೀವು ನಿಗದಿ ಮಾಡಬೇಕೆಂದು ಕಾಗದ ಬರೆದು ಕೇಳಿಕೊಂಡೆ. ಆದರೆ ಆ ಕೆಲಸ ಇಷ್ಟರವರೆಗೆ ಆಗಿಲ್ಲ. ನಾನು ಸರ್ಕಾರವನ್ನು ಕೇಳಿಕೊಳ್ಳುವುದಿಷ್ಟೆ. You have to come to the rescue of these labourers of the coffee estate work rs and you have to fix the minimum wages for them under the Minimum Wages Act, with retrospective effect. ಇದೊಂದು ಪ್ರಾರ್ಥನೆಯನ್ನು ಮಾಡಿಕೊಂಡು, ಕಾಫಿ ತೋಟದ ವಿಷಯವಾಗಿ ಮಾನ್ಯ ಚಂದ್ರೇಗೌಡರು ಏನು ಒಂದು ಆರ್ಗ್ಯುಮೆಂಟ್‌ನ್ನು ಈ ಸಭೆಯ ಮುಂದೆ ಇಟ್ಟಿದ್ದಾರೋ ಅದರ ಬಗ್ಗೆ ನಾನೂ ಕೂಡಾ ಒತ್ತಾಸೆ ನೀಡುವುದಕ್ಕೆ ಹೊರಟಿದ್ದೇನೆ. Sir, people outside Coorg or outside Malenad area, who are not coffee planters or coffee growers, feel and think that the coffee planters are very rich people. They might have seen one or two coffee planters in Bangalore just enjoying their time. ಆದರೆ ಯಾವ ರೀತಿಯಲ್ಲಿ ಕಾಫಿ ತೋಟಗಾರರಿದ್ದಾರೆಂಬುದನ್ನು ಅವರ ಹತ್ತಿರ ಹೋಗಿ ಅವರ ಕಷ್ಟವನ್ನು ನೋಡಿದರೆ ಗೊತ್ತಾಗುತ್ತದೆ. ಇವತ್ತು ಕರ್ನಾಟಕದಲ್ಲಿ ಸುಮಾರು ೩೩ ಸಾವಿರ ಕಾಫಿತೋಟಗಾರರಿದ್ದು. ಇವರಲ್ಲಿ ಸುಮಾರು ೯೫ ಪರ್ಸೆಂಟ್ ಜನ ಸಣ್ಣ ಹಿಡುವಳಿದಾರರಿದ್ದಾರೆ. ಇವತ್ತು ಅವರ ಉತ್ಪಾದನೆ, ನೆಟ್ ಇನ್‌ಕಮ್ ಸುಮಾರು ೧೨ ಸಾವಿರ ರೂಪಾಯಿಯೆಂದು ಲೆಕ್ಕಾಚಾರದಿಂದ ಗೊತ್ತಾಗುತ್ತದೆ. ಇವತ್ತು ಕಾಫೀ ತೋಟ ಉಳಿಕೆ ಮಾಡಿಕೊಳ್ಳಬೇಕಾದರೆ ಕಾಫೀ ತೋಟಕ್ಕೆ ಬೇಕಾದಷ್ಟು ಕೆಲಸ ಮಾಡಬೇಕಾಗುತ್ತದೆ. ಟೈಮ್‌ಲಿ ಸ್ಪ್ರೇ ಮಾಡಬೇಕಾಗುತ್ತದೆ, ಗೊಬ್ಬರ ಹಾಕಬೇಕಾಗುತ್ತದೆ ಮೆನ್ಯೂರ್ಸ್ ಹಾಕಬೇಕಾಗುತ್ತದೆ. ಹೀಗೆ ಹಲವಾರು ರೀತಿಯ ಉಪಚಾರಗಳಿಂದ ಇವತ್ತು ಕಾಫಿ ಗಿಡಗಳನ್ನು ಉಳಿಸಿಕೊಳ್ಳಬೇಕಾಗುತ್ತದೆ. ನಾನೂ ಕೂಡಾ ಒಬ್ಬ ಸಣ್ಣ ಕಾಫೀ ತೋಟ ಇಟ್ಟುಕೊಂಡಿದ್ದೇನೆ, ಇವತ್ತು ಅರೇಬಿಕಾ ಎಂಬ ಕಾಫಿ ತೋಟ ಉಳಿಸಿಕೊಳ್ಳಬೇಕಾದರೆ ಸೀಸನ್ಡ್ ಆಪರೇಷನ್ಸ್ ಆಗದೇ ಹೋದರೆ ಆ ತೋಟವನ್ನು ಉಳಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇವತ್ತು ತಾವು ಪರ್ಚೇಸ್ ಟ್ಯಾಕ್ಸ್ ಹಾಕಿದ್ದೀರಿ. ಬಹುಶಃ ಜನತಾದಳದ ಸರ್ಕಾರದಿಂದ, ಮಾನ್ಯ ಬೊಮ್ಮಾಯಿಯವರ ನಾಯಕತ್ವದಲ್ಲಿಂದ ಬಂದಂತಹ ಬಳುವಳಿ ಇದು ಎಂದು ನನಗನ್ನಿಸುತ್ತದೆ. This is a legacy of Mr: Bommai's Government. Finance Minister has said in his speech that we cannot leave this sum of Rs. 15 crore which the Govt. is getting from coffee purchase tax. Today including everything and every amount that we are paying by way of purchase tax to the Government from the year 1975 onwards it has fallen on the heads of coffee planters. The amount is Rs. 176 crore. We have already paid Rs. 100 crores and the remaining Rs. 76 crore is to be paid. Today, what is the plight of the coffee growers? ಕಳೆದ ವರ್ಷ ಭಾರತದ ಒಟ್ಟು ಕಾಫಿ ಬೆಳೆ ೧ ಲಕ್ಷ ಟನ್, ಅದರ ಹಿಂದಿನ ವರ್ಷ ಇದು ೨ ಲಕ್ಷದ ೧೫ ಸಾವಿರ ಟನ್ ಆಗಿತ್ತು. ಅಂದರೆ you must appreciate as to how the coffee planters have intensively worked in the plantations and in the estates. ಕೇಂದ್ರ ಸರ್ಕಾರದ ಪಾಲಿಸಿ ಪ್ರಕಾರ ೨ ಲಕ್ಷ ಟನ್ ಕಾಫಿ ೨೦೦೦ನೇ ವರ್ಷದಲ್ಲಿ ಉತ್ಪಾದನೆ ಆಗಬೇಕಿತ್ತು. ೨೦೦೦ನೇ ವರ್ಷದಲ್ಲಿ ೨ ಲಕ್ಷ ಟನ್ ಕಾಫಿ ಬೆಳೆಯಬೇಕೆಂದು ಕಾಫಿಬೋರ್ಡ್‌ನ ಅಥವಾ ಕೇಂದ್ರ ಸರ್ಕಾರದ ಕಾರ್ಯಕ್ರಮ ಆಗಿದೆ. But the planters were able to pick and give to the Indian Government Rs. 2.15 lakh tonnes in the year 1989 Itself. ಇವತ್ತು ಈ ಒಂದು ಟ್ಯಾಕ್ಸ್ ಹಾಕಿ ಈ ಒಂದು ಉತ್ಪಾದನೆ ಕೂಡಾ ಕಡಿಮೆ ಆಗಿರುವ ಸಮಯದಲ್ಲಿ ಈ ಕಾಫಿ ಕ್ರಯ ೭೦ ಪರ್ಸೆಂಟ್ ಕಡಿಮೆ ಆಗಿದೆ. ಇಂತಹ ಸಂದರ್ಭದಲ್ಲಿ you are again levying the tax and the Finance Minister himself said Rs. 15 crore is to be got from the

coffee plantations. Is it not cutting the hen which lays golden eggs, Sir ? ಆದ್ದರಿಂದ ನಾನು ಫೈನಾನ್ಸ್ ಮಿನಿಸ್ಟರ್ ಮತ್ತು ಮುಖ್ಯಮಂತ್ರಿಗಳು ಹಾಗೂ ಸರ್ಕಾರವನ್ನು ದಯವಿಟ್ಟು ಕೇಳಿಕೊಳ್ಳುವುದೇನೆಂದರೆ you have to reconsider the decision. You have to take second thinking about this decision. ನಾನು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ವಿಷಯದಲ್ಲಿ ಪುನರ್ ವಿಮರ್ಶೆಯನ್ನು ಮಾಡಿ ಒಂದು ಅಭಿಪ್ರಾಯವನ್ನು ತೆಗೆದುಕೊಳ್ಳಬೇಕೆಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ನಾನು ಬೇರೆ ವಿಷಯಗಳಿಗೆ ಹೋಗುವುದಿಲ್ಲ. ವಿದ್ಯುಚ್ಛಕ್ತಿ ವಿಷಯಕ್ಕೆ ಹೋಗುವುದಿಲ್ಲ, ನೀರಾವರಿ ವಿಷಯಕ್ಕೆ ಹೋಗುವುದಿಲ್ಲ. ಅದರ ಬಗ್ಗೆ ಮಾತನಾಡಿದರೆ ಬೇರೆಯವರು ಹೇಳಿದ್ದನ್ನು ನಾನು ರಿಪೀಟ್ ಮಾಡಿದಹಾಗೆ ಆಗುತ್ತದೆ. ಸಮಯ ಬಹಳ ಕಡಿಮೆ ಇರುವುದರಿಂದ ನಾನು ಒಂದು ವಿಷಯವನ್ನು ಸರ್ಕಾರದ ಮುಂದಿಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಜಿಲ್ಲಾ ಪರಿಷತ್ತುಗಳಿಗೆ ೧೦೪೭ ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಕೇಳಿದ್ದಾರೆ. ನೀವು ೩೦೦ ಕೋಟಿ ೨೯ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ನಾನು ನಮ್ಮ ಕೊಡಗಿನ ಜಿಲ್ಲಾಪರಿಷತ್‌ನ ಬಗ್ಗೆ ಹೇಳುತ್ತೇನೆ ನಾನು ಏತಕ್ಕೋಸ್ಕರ ಹೇಳುತ್ತಿದ್ದೇನೆಂದರೆ ಈ ರೀತಿ ಹಣವನು ಕೊಟ್ಟರೆ ಯಾವರೀತಿಯಲ್ಲಿ ನಮ್ಮ ಗ್ರಾಮೀಣಾಭಿವೃದ್ಧಿ ಕಾರ್ಯಗಳು ಆಗುತ್ತವೆ ? ರಾಜ್ಯಪಾಲರ ಭಾಷಣದಲ್ಲಿ ಹೇಳಿದಂತಹ ಕೆಲಸ ಯಾವರೀತಿಯಲ್ಲಿ ಆಗುತ್ತವೆ ಎಂಬ ವಿಷಯಕ್ಕೋಸ್ಕರ ಹೇಳುತ್ತಿದ್ದೇನೆ. ಕೊಡಗು ಜಿಲ್ಲಾಪರಿಷತ್ ಬಜೆಟ್ ಪ್ರಕಾರ ಯೋಜನಾ ವೆಚ್ಚದಲ್ಲಿ ೧೨೪೯ ಲಕ್ಷ ಚಿಲ್ಲರೆ ಹಣ ಬೇಕೆಂದು ಅವರು ಕೇಳಿದ್ದಾರೆ. ಈ ೧೨೪೯ ಲಕ್ಷ ರೂಪಾಯಿಗಳಲ್ಲಿ ಕಳೆದ ವರ್ಷ ಸರ್ಕಾರ ೯೦೫ ಲಕ್ಷ ರೂಪಾಯಿಗಳನ್ನು ಗ್ರಾಂಟ್ ಮಾಡಲಾಗಿತ್ತು. ಆದರೆ ಈ ವರ್ಷ ಬಜೆಟ್‌ನಲ್ಲಿ ಎಲ್ಲಿ ಹುಡುಕಿದರೂ ಕೂಡ ಸಿಗುವುದಿಲ್ಲ. ನಮಗೆ ೭೦೦ ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಕಳೆದವರ್ಷ ಕೊಟ್ಟಿದ್ದಕ್ಕಿಂತ ೨೦೦ ಲಕ್ಷ ರೂಪಾಯಿ ಹಣ ಕಡಿಮೆಯಾಗಿದೆ. ಈ ರೀತಿಯಾದರೆ ಯಾವರೀತಿಯಲ್ಲಿ ಗ್ರಾಮೀಣಾಭಿವೃದ್ಧಿ ಕಾರ್ಯಗಳನ್ನು ಜನಹಿತ ಕಾರ್ಯಗಳನ್ನು ಮಾಡುವುದಕ್ಕೆ ಆಗುತ್ತದೆ ಎನ್ನುವುದನ್ನು ತಾವು ಆಲೋಚನೆ ಮಾಡಬೇಕಾಗುತ್ತದೆ ? For example I will tell you succinctly: ಹಿಂದುಳಿದ ವರ್ಗಗಳ ಏಳಿಗೆಗಾಗಿ ಬೇಡಿಕೆ ಸಲ್ಲಿಸಿದ್ದು ೧೪ ಲಕ್ಷದ ೮೫ ಸಾವಿರ, ಸರ್ಕಾರ ಕೊಟ್ಟಿದ್ದು ೯ ಲಕ್ಷ ಗ್ರಾಮೀಣಾ ನೀರು ಪೂರೈಕೆಗೆ ಜಿಲ್ಲಾಪರಿಷತ್‌ನವರು ಬಜೆಟ್‌ನಲ್ಲಿ ೧೦೦ ಲಕ್ಷ ರೂಪಾಯಿಗಳನ್ನು ಕೇಳಿದ್ದಾರೆ. ಸರ್ಕಾರದವರು ಕೊಟ್ಟಿದ್ದು ೮೦ ಲಕ್ಷದ ೮೫ ಸಾವಿರ ರೂಪಾಯಿ. ಸಣ್ಣ ನೀರಾವರಿಗಾಗಿ ೩೯ ಲಕ್ಷ ರೂಪಾಯಿಗಳನ್ನು ಜಿಲ್ಲಾಪರಿಷತ್‌ನವರು ಕೇಳಿದ್ದಾರೆ, ಇವರು ಕೊಟ್ಟಿದ್ದು ೧೨ ಲಕ್ಷ ಕೊಟ್ಟಿದ್ದಾರೆ. ಇದೇರೀತಿ ಹೇಳುತ್ತಾ ಹೋದರೆ ಅದು ಜಾಸ್ತಿಯಾಗುತ್ತದೆ. ನಾನು ಸರ್ಕಾರವನ್ನು ವಿನಂತಿಸಿಕೊಳ್ಳುವುದೇನೆಂದರೆ ಈಗ ಕೊಟ್ಟ ಹಣ ಬಹಳ ಕಡಿಮೆಯಾಗಿದೆ ಮುಂದಿನ ಸಪ್ಲಿಮೆಂಟರಿ ಬಜೆಟ್‌ನಲ್ಲಿ ನಮಗೆ ಹೆಚ್ಚಿನ ಹಣವನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಅದೇರೀತಿ ಕಾಮಗಾರಿ ಇಲಾಖೆಗೆ ೨೧೨ ಲಕ್ಷ ರೂಪಾಯಿಗಳನ್ನು ಕೇಳಿದ್ದಕ್ಕೆ ಸರ್ಕಾರದವರು ೪೦ ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಲೋಕೋಪಯೋಗಿ ಮಂತ್ರಿಗಳಾದ ಮಾನ್ಯ ಪುಟ್ಟಸ್ವಾಮಿಗೌಡರನ್ನು ಅತಿ ವಿನಯದಿಂದ ಕೇಳಿಕೊಳ್ಳುತ್ತೇನೆ ದಯವಿಟ್ಟು ಇದನ್ನು ಜಾಸ್ತಿಮಾಡಬೇಕೆಂದು ಹೇಳುತ್ತೇನೆ ಕಳೆದ ವರ್ಷ ೩ ಲಕ್ಷ ರೂಪಾಯಿಗಳನ್ನು ರೇಷ್ಮೆ ಬೆಳವಣಿಗೆಗೆ ಕೊಟ್ಟಿದ್ದಾರೆ. ಇವತ್ತು ಬಜೆಟ್‌ನಲ್ಲಿ ಒಂದು ಕಾಸೂ ಸಹ ರೇಷ್ಮೆ ವ್ಯವಸಾಯಕ್ಕೆ ಕೊಟ್ಟಿಲ್ಲ. ಎಲ್ಲರಿಗೂ ಗೊತ್ತಿರುವಹಾಗೆ ಇವತ್ತು ಮಳೆ ಕೊಡಗಿನಲ್ಲಿ ಕಡಿಮೆಯಾಗಿದೆ. ನನ್ನ ತಾಲ್ಲೂಕಿನಲ್ಲಿ ಸುಮಾರು ೪೦ ಸಾವಿರ ಎಕರೆ ಜಾಗ ಬರಗಾಲಕ್ಕೆ ತುತ್ತಾಗಿದೆ, ಅಂತಹ ಸ್ಥಳಗಳಲ್ಲಿ ಜನರು ಬೇರೆ ಬೆಳೆಗಳನ್ನು ಬೆಳೆಯಬೇಕೆಂದು ತೀರ್ಮಾನಮಾಡಿ ಕಳೆದ ಐದಾರು ವರ್ಷಗಳಿಂದ ರೇಷ್ಮೆ ಬೆಳೆಯನ್ನು ಬೆಳೆದು ಜೀವನ ಸಾಗಿಸುತ್ತಿದ್ದರು. ಕೊಡಗಿನಲ್ಲಿ ರೇಷ್ಮೆ ಇಲಾಖೆಯಲ್ಲಿ ಒಬ್ಬರು ಅಸಿಸ್ಟೆಂಟ್ ಡೈರೆಕ್ಟರ್ ಇದ್ದಾರೆ. ಅವರ ಕೆಳಗಡೆ ೧೬ ಜನ ಕೆಲಸ ಮಾಡತಕ್ಕವರು ಇದ್ದಾರೆ. ಕಳೆದ ವರ್ಷ ರೇಷ್ಮೆ ಅಭಿವೃದ್ಧಿಗಾಗಿ ೩ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರು. ಇವತ್ತು ನಮ್ಮ ಜಿಲ್ಲಾ ಪರಿಷತ್‌ಗೆ ಒಂದು ಪೈಸೆಯನ್ನು ಸಹ ಕೊಟ್ಟಿಲ್ಲ. ಈ ರೀತಿ ಆದರೆ ರೇಷ್ಮೆ ಬೆಳೆಯನ್ನು ಬೆಳೆಯುತಕ್ಕವರು ಏನಾಗಬೇಕು ? ಕೊಡಗಿನಲ್ಲಿ ಕಾಫಿ ಬೆಳೆ ಹಾಳಾಗಿದೆಯೆಂದು ಸರ್ಕಾರದವರು, ಕಾಫಿ ಬೋರ್ಡ್‌ನವರು ಎಲ್ಲ ತಜ್ಞರು ಬಹಳ ಹೇಳುತ್ತಿದ್ದಾರೆ, ಅಲ್ಲಿನ ಜನ ಬೇರೆ ವ್ಯವಸಾಯಕ್ಕೆ ಇಳಿದಿದ್ದಾರೆ. ಅಂತಹ ಸಮಯದಲ್ಲಿ ಸರ್ಕಾರ ಉತ್ತೇಜನ ಕೊಡುವುದಿಲ್ಲ ಅಂದರೆ ಪರಿಸ್ಥಿತಿ ಏನಾಗಬೇಕೆಂಬುದನ್ನು ತಾವು ಆಲೋಚನೆ ಮಾಡಬೇಕಾಗಿದೆ. ಸಮಯ ಬಹಳ ಕಡಿಮೆ ಇದೆ ನಾನು ಹೆಚ್ಚಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ನಾನು ಹೇಳಿರತಕ್ಕ ವಿಚಾರಗಳನ್ನು ಸರ್ಕಾರ ಯೋಚನೆ ಮಾಡಬೇಕು. ಕೊಡಗಿಗೆ ಹೆಚ್ಚಿನ ರೀತಿಯಲ್ಲಿ ಸಹಾಯ ಮತ್ತು ಸಹಕಾರ ನೀಡಬೇಕೆಂದು ಕೇಳಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† SRI B. I. PATIL (Uchagaon).—Mr. Speaker Sir, I am surprised that His Excellency should have made an incorrect and untrue statement regarding Maharashtra–Karnataka Boundary dispute. He has stated that this 34 year old issue has been solved by Mahajan Commission Report. The Mahajan Commission Report was submitted as back as in 1969. During the last 20 years, it could not be implemented. Why? Because Mr. Mahajan failed to solve the dispute on uniform and acceptable principles. Can the House take into consideration how many parties have accepted Mahajan Commission report. It was not accepted by the Border Area people. That is why Belgaum electorate has defeated Congress candidates and other party candidates, in all the eight general elections to this Assembly. Such is the case with Zilla Parishad. Mandal Panchayat and Corporation elections in border areas. Before making such a statement, the Government ought to have studied the statements of Central Leaders on the floor of the Parliament. All Prime Ministers and Home Ministers have categorically stated that Mahajan Report is not the last word on the issue.

(interruption)

PROF. M. D. NANJUNDASWAMI.—I would like to know how many of them are in M.E.S.? May I know their names?

SRI K. C. MODGEKAR.—The House knows its very well. It is not necessary to inform it now.

MR. SPEAKER.—My office will furnish you the names.

SRI B. I. PATIL.—I suggest that it is high time for the Government to come forward to find a just solution to the problem by taking village as unit and geographical contiguity. (interruption) Jai Maharashtra.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ, ನನ್ನದು ಕ್ರಿಯಾಲೋಪ ಇದೆ. ಏನೆಂದರೆ, ಮಹಾಜನ್ ವರದಿ ಬಗ್ಗೆ ಒಂದು ತೀರ್ಮಾನವಾಗಿದೆ. ಮಹಾಜನ್ ವರದಿ ಅಂತಿಮವಾದದ್ದು. ಅದು ಇದೇ ಸದನದಲ್ಲಿ ತೀರ್ಮಾನವಾಗಿದೆ. ಆ ತೀರ್ಮಾನದ ವಿರುದ್ಧವಾಗಿ ಇಲ್ಲಿ ಮಾತನಾಡುವುದು ಸರಿಯಲ್ಲ. ಇದು ಕರ್ನಾಟಕದ ಹಿತವನ್ನು ಕಾಪಾಡತಕ್ಕಂಥದ್ದು ಇದೆ, ಈ ಮನೆಯಲ್ಲಿ ಈಗಾಗಲೇ ಇದು ತೀರ್ಮಾನವಾಗಿದೆ. ಸರ್ವಸಮ್ಮತವಾದ ತೀರ್ಮಾನವಾಗಿ ಕೇಂದ್ರಸರ್ಕಾರಕ್ಕೂ ತಿಳಿಸಲಾಗಿದೆ. ಅದರಿಂದ ಅತ್ತ ಇತ್ತ ಅಲ್ಲಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಮಹಾಜನ್ ವರದಿಯನ್ನು ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಗಂಭೀರವಾಗಿ ಒಪ್ಪಿಕೊಳ್ಳಬೇಕು. ಮಹಾಜನ್ ವರದಿಯೇ ಅಂತಿಮ. ಅದನ್ನು ಬಿಟ್ಟು ಬೇರೆ ಏನನ್ನು ಮಾತನಾಡುವುದಕ್ಕೆ ಅವಕಾಶ ಇಲ್ಲ.

ಶ್ರೀ ಬಿ. ಎಂ. ಇದಿನಬ್ಬ.—ಇದು ಈ ಸದನದಲ್ಲಿ ಎರಡು ಬಾರಿ ನಿರ್ಣಯವಾಗಿದೆ. ಎಲ್ಲ ಸದಸ್ಯರೂ ನಿರ್ಣಯ ಮಾಡಿದಂಥ ವಿಷಯವನ್ನು ಮರುಪ್ರಸ್ತಾವನೆ ಮಾಡುವುದು ಸರಿಯಲ್ಲ.

ಶ್ರೀ ಬಿ. ಹೆಚ್. ಬನ್ನಿಕೋಡ್.—ಎಲ್ಲಾ ಮಾನ್ಯ ಸದಸ್ಯರು ಸೇರಿ ಸರ್ವಾನುಮತದಿಂದ ನಿರ್ಣಯ ಮಾಡಿರುವುದನ್ನು ಇಲ್ಲಿ ಮತ್ತೆ ಪುನರ್ ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಶ್ರೀ ವಾಟಾಳ್ ನಾಗರಾಜ್ ಅವರು ಏನು ಪ್ರಸ್ತಾಪ ಮಾಡಿದ್ದಾರೆ, ಇದರಲ್ಲಿ ಬಹಳ ಅರ್ಥ ಇದೆ. ಏಕೆಂದರೆ ಈ ಸದನದಲ್ಲಿ ಒಮ್ಮೆ ಅಲ್ಲ ಎರಡು ಬಾರಿ ಮಹಾಜನ್ ವರದಿ ಬಗ್ಗೆ ಒಮ್ಮತದಿಂದ ನಿರ್ಣಯ ಆಗಿದೆ. ಮಾನ್ಯ ಸದಸ್ಯರಿಗೆ ಮಾತನಾಡಲಿಕ್ಕೆ ಹಕ್ಕು ಇದೆ. ಆದರೆ ಈ ಸದನದಲ್ಲಿ ಒಮ್ಮತದ ನಿರ್ಣಯ ಎರಡು ಬಾರಿ ಆಗಿದೆ. ಆಗ ಸನ್ಮಾನ್ಯ ಸದಸ್ಯರಿಗೆ

ಆಕ್ಷೇಪಣೆ ಮಾಡಬೇಕಿತ್ತು. There was no dissenting voice then. MES Members were present here then. They might have walked out at that time, that is a different matter.

MR. SPEAKER.—Was MES Party to that?

೬–೦೦ ಪಿ. ಎಂ.

SRI M. VEERAPPA MOILY.—But, they have not dissented here, they might have remained here.

(interruption)

SRI B. I. PATIL.—* * *

ಶ್ರೀ ವಾಟಾಳ್ ನಾಗರಾಜ್.—ಅವರು ಸತ್ಯಕ್ಕೆ ದೂರವಾದ ಮಾತುಗಳನ್ನು ಆಡುತ್ತಿದ್ದಾರೆ. ಈ ಸದನದಲ್ಲಿ ಎರಡು ಬಾರಿ ತೀರ್ಮಾನವಾಗಿದೆ. ಮಹಾಜನ್ ವರದಿ ಅಂತಿಮ. ಆದರೂ ಅದರ ವಿರುದ್ಧ ತಮ್ಮ ರಾಜಕೀಯಕ್ಕೋಸ್ಕರ ಇಲ್ಲಿ ಮಾತನಾಡುತ್ತಿದ್ದಾರೆ.

MR. SPEAKER.—You can refer to the other matters of the Governor's Address. It has about 29 pages. You can go on to the next subject.

ಶ್ರೀ ಬಿ. ಹೆಚ್. ಬನ್ನಿಕೋಡ್,—ಈ ಮನೆಯಲ್ಲಿ ಈ ಬಗ್ಗೆ ಸರ್ವಾನುಮತದ ನಿರ್ಣಯವಾಗಿದೆ. ಇದರ ವಿರುದ್ಧ ಅವರು ಹೇಳಿರುವುದನ್ನು ರೆಕಾರ್ಡಿನಿಂದ ತೆಗೆದುಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

MR. SPEAKER.—He is also an elected Member of this House. I cannot do it.

(interruption)

ಶ್ರೀ ವಾಟಾಳ್ ನಾಗರಾಜ್.—ಕರ್ನಾಟಕದ ಹಿತಕ್ಕೆ ವಿರೋಧವಾಗಿ ಮಾತನಾಡಿರುವುದನ್ನು ತಾವು ದಯವಿಟ್ಟು ಕಡತದಿಂದ ತೆಗೆಸಬೇಕು.

SRI S. H. KOUJALAGI.—The Hon. Member has said 'The Minister is telling lie.' That has to be deleted.

MR. SPEAKER.—'The Minister is telling lie.' ಇದನ್ನು ತೆಗೆದುಹಾಕಿ. You can proceed on some other subject.

SRI B. I. PATIL.—Over Sir.

ಶ್ರೀ ಕೆ. ಎಸ್. ಈಶ್ವರಪ್ಪ.—ಈ ನಿರ್ಣಯ ಪಾಸಾದ ದಿನ ಇವರು ಇಲ್ಲಿ ಪ್ರೆಸೆಂಟ್ ಇದ್ದರೋ ಇಲ್ಲವೋ ಎಂಬುದನ್ನು ತಾವು ದಯಮಾಡಿ ಚೆಕಪ್ ಮಾಡಬೇಕು.

† SRI M. BACKTHAVACHALAM (KGF).—Mr. Speaker Sir, it is my honour and privilege to extend my thanks on behalf of myself and my party to the address made by His Excellency the Governor of our state.

The proposed policies that are to be adopting to improve the State like efficient administration in all the Government department, Modernisation of Police Force to control and detect, dacoits as well as heinous crimes, regularisation of unauthorised Government lands, construction of houses for slum dwellers, great importance to power

---

* * * Expunged as ordered by the chair.

sector, electrification of SC/ST colonies, direct employment for rank holders belonging to SC/ST, new establishment of Primary Health Centre are worthy one and appreciated by all sections of the society.

I also request this Hon'ble Government for speedy implementation of employment opportunities to all educated youths in the state by filling all existing vacancies.

Rs. 50 lakhs should be allotted for the drinking water facilities to K.G.F. City, a Blood bank should be opened and 100 beds to be increased in General Hospital at K. G. F. a separate Technical Training institute should be opened for women and handicrafts at K.G.F., the Housing Scheme under HUDCO should be implemented for the benefit of SC/ST people of K.G.F. the Member of Legislative Assembly, KGF may also be given an opportunity to participate in the Kolar Zilla Parishad Meetings to represent on health and educational problems.

St. Joseph Convent of KGF management is collecting illegal donations and compulsory fees from poor SC/ST and Labour Community. Hence, I request upon the Govt. for cancellation of recognition.

KGF should be included in a comprehensive Tourism Development Project in the coming financial year. The city Service Bus facilities to be improved by providing more number of buses within the radius of 20 kms. from Robertsonpet of KGF for the benefit of both rural and urban citizens.

The Green Card facilities should be extended for the poor SC/ST people of KGF City and issue household ration cards for needy persons. The building of the Primary Health Unit at Doddakembally Bangarpet Taluk is closed since several years for want of repair. I urge upon the Government that the said health unit should be made functioning and the same may be upgraded to community health centre to achieve health for all by 2000 AD successfully.

Thank you.

† ಶ್ರೀ ರಮಾನಾಥ ರೈ (ಬಂಟ್ವಾಳ).—ಮಾನ್ಯ ಅಧ್ಯಕ್ಷರೇ, ರಾಜ್ಯ ವಿಧಾನಮಂಡಲದಲ್ಲಿ ರಾಜ್ಯಪಾಲರು ಮಾಡಿದ ಭಾಷಣವನ್ನು ಸ್ವಾಗತಿಸುತ್ತಾ, ಅದಕ್ಕೆ ವಂದನೆಯನ್ನು ಅರ್ಪಿಸುವ ಮೂಲಕ ಏನು ಕರ್ನಾಟಕ ರಾಜ್ಯದಲ್ಲಿ ಹಿಂದೆ ಇದ್ದಂಥ ಸರಕಾರ ಯಾವ ರೀತಿಯಲ್ಲಿ ಆಡಳಿತ ವ್ಯವಸ್ಥೆಯಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡಲಿಲ್ಲ ಎನ್ನುವಂತಹದ್ದನ್ನು ಈ ರಾಜ್ಯದ ಜನತೆ ಒಪ್ಪಿಕೊಂಡು ಬದಲಾವಣೆಯನ್ನು ತಂದಿದ್ದಾರೆ ಎನ್ನುವುದನ್ನು ಈ ಸಂದರ್ಭದಲ್ಲಿ ನೆನೆಪು ಮಾಡುತ್ತೇನೆ. ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ಆಡಳಿತದಲ್ಲಿ ಬದಲಾವಣೆ ಆಗುವಂತಹದು ಸ್ವಾಭಾವಿಕ. ಆದರೆ ಕರ್ನಾಟಕದ ವಿಚಾರದಲ್ಲಿ ನಾವು ನೋಡುವುದಾದರೂ ಏನು ಎಂದರೆ, ಬಹಳಷ್ಟು ಗಂಭೀರವಾದಂಥ ಆಡಳಿತದ ದುಷ್ಪರಿಣಾಮ ಇದ್ದರೆ ಮಾತ್ರ ಈ ರಾಜ್ಯದ ಜನತೆ ಅದಕ್ಕೆ ಪ್ರತಿಕ್ರಿಯೆ ಮಾಡುತ್ತಾರೆ. ನಮ್ಮ ರಾಜ್ಯದ ಜನ ಬಹಳಷ್ಟು ಶಾಂತಿಪ್ರಿಯ ಜನ. ಅವರಿಗೆ ಗಂಭೀರವಾದ ಅನ್ಯಾಯ ಆದಾಗ ಮಾತ್ರ ಬದಲಾವಣೆ ತರುವುದಕ್ಕೆ ಪ್ರಯತ್ನ ಮಾಡುತ್ತಾರೆ. ಇವತ್ತು ಇದು ಸಂತೋಷಕರವಾದ ವಿಚಾರ. ಇವೊತ್ತು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಒಂದು ಪಕ್ಷದ ಸರಕಾರ ಸರಿಯಾದ ರೀತಿಯಲ್ಲಿ ನಡೆಯುದಿದ್ದರೆ ಜನರಿಗೆ ಪೂರಕವಾದ ಕೆಲಸ ಮಾಡದಿದ್ದರೆ ಬದಲಾವಣೆ ತರುತ್ತಾರೆ ಎಂಬುದನ್ನು ಇವತ್ತು ನಮ್ಮ

ಕರ್ನಾಟಕ ರಾಜ್ಯದ ಜನತೆ ತೋರಿಸಿಕೊಟ್ಟಿದ್ದಾರೆ. ನಾವು ಈ ಕರ್ನಾಟಕದ ಪೂರ್ವ ಇತಿಹಾಸವನ್ನು ನಾವು ಕಾಣುವುದಾದರೆ ಅನೇಕಸಾರಿ ರಾಜಕೀಯ ಬದಲಾವಣೆಯಾಗಿರುವುದನ್ನು ನಾವು ಕಾಣಬಹುದು. ದಿವಂಗತ ದೇವರಾಜ ಅರಸರ ಸರಕಾರ ಬದಲಾಗಿ ಬೇರೆ ಸರಕಾರ ಬಂದಿರಬಹುದು. ಆದರೆ ಇದು ರಾಷ್ಟ್ರೀಯ ವಿಚಾರಧಾರೆಯ ಹಿನ್ನೆಲೆಯಲ್ಲಿ ಬದಲಾವಣೆಯಾಯಿತು ಅದಕ್ಕಿಂತ ಹಿಂದೆ ವೀರೇಂದ್ರ ಪಾಟೀಲರ ಸರಕಾರ ಕೂಡ ಬದಲಾವಣೆಯಾಗಿತ್ತು. ಅದೂ ಕೂಡಾ ಒಂದು ರಾಷ್ಟ್ರೀಯ ವಿಚಾರಧಾರೆಯ ಹಿನ್ನೆಲೆಯಲ್ಲಿಯೇ ಆಯಿತು ಆದರೆ ಕಳೆದಸಾರಿ ಈ ರಾಜ್ಯದಲ್ಲಿ ಬದಲಾವಣೆ ಏನಾಯಿತು ಅದು ಕೇವಲ ಒಂದು ಸರಕಾರದ ದುರಾಡಳಿತದ ಹಿನ್ನೆಲೆಯಲ್ಲಿ ಆಯಿತು. ಹಿಂದೆ ಯಾವ ಸರಕಾರ ಇತ್ತೋ ಅದು ಆಡಳಿತ ಮಾಡುವ ಸಂದರ್ಭದಲ್ಲಿ ಸರಕಾರದ ಯಂತ್ರ ನಿಷ್ಕ್ರಿಯವಾಗಿ ಆಡಳಿತ ವ್ಯವಸ್ಥೆಯಲ್ಲಿ ಯಾವುದೇ ರೀತಿಯ ಹತೋಟಿಯಿಲ್ಲದೆ, ಅಭಿವೃದ್ಧಿ ಕಾರ್ಯಕ್ರಮಗಳು ಕುಂಠಿತವಾಗಿ ಹೋಗಿದ್ದವು. ಒಂದು ವಿಡೋ ಪೆನ್‌ಷನ್ ಸಹ ಸರಿಯಾದ ಸಮಯಕ್ಕೆ ಸಿಗುತ್ತಿರಲಿಲ್ಲ. ಮೂರು ನಾಲ್ಕು ತಿಂಗಳ ನಂತರ ಒಂದೇ ಸಾರಿ ಬರುವಂತಹದ್ದು ನಾವು ನೋಡಿದ್ದೇವೆ. ಪ್ರತಿಯೊಂದು ವಿಚಾರದಲ್ಲೂ ಖಜಾನೆ ಬಂದ್. ಖಜಾನೆ ಬಂದ್ ಎನ್ನುವಂತಹ ವಿಚಾರ ನಮ್ಮ ಇತಿಹಾಸದಲ್ಲಿ ನಮಗೆ ಗೊತ್ತಿರಲಿಲ್ಲ. ಕಳೆದ ಸರಕಾರ ಏನು ಆಡಳಿತ ಮಾಡಿತು ಎಂದರೆ ಪ್ರತಿಯೊಂದು ಸಂದರ್ಭದಲ್ಲೂ, ಸರಕಾರಿ ನೌಕರರ ಸಂಬಳ ತೆಗೆದುಕೊಳ್ಳಬೇಕಾದರೆ ಖಜಾನೆ ಬಂದ್, ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಕಂಟ್ರಾಕ್ಟರ್ ಏನು ಕೆಲಸ ಮಾಡಿದ್ದಾರೆ ಅವರಿಗೆ ದುಡ್ಡು ಕೊಡಬೇಕಾದರೆ ಖಜಾನೆ ಬಂದ್ ಈ ರೀತಿ ದುಷ್ಪರಿಣಾಮವಾಗಿ, ಆರ್ಥಿಕ ವ್ಯವಸ್ಥೆಯಲ್ಲಿ ಸರಿಯಾದ ಹಿಡಿತ ಇಲ್ಲದೆ ಸರಕಾರ ಬದಲಾವಣೆ ಆಯಿತು.

ಈ ಬದಲಾವಣೆ ಆದ ಒಂದು ಹಿನ್ನೆಲೆಯಲ್ಲಿ ಕಾಂಗ್ರೆಸ್ ಪಕ್ಷದ ಸರ್ಕಾರವನ್ನು ರಾಜ್ಯದ ಜನತೆ ಇಲ್ಲಿ ಅಧಿಕಾರಕ್ಕೆ ತಂದರು. ನಮಗೂ ಕೂಡ ಇವತ್ತು ಅನೇಕ ಜವಾಬ್ದಾರಿಗಳು ಖಂಡಿತವಾಗಿ ಇವೆ. ಪ್ರತಿಯೊಂದು ಹಂತದಲ್ಲಿಯೂ ಜನರು ನಾವು ಏನು ಮಾಡುತ್ತಿದ್ದೇವೆ ಎನ್ನುವುದನ್ನು ನೋಡುವಂತಹ ಪರಿಸ್ಥಿತಿ ಇವೊತ್ತು ನಿರ್ಮಾಣವಾಗಿದೆ. ಇವತ್ತು ಕಾನೂನು ಮತ್ತು ಸುವ್ಯವಸ್ಥೆ ಬಗ್ಗೆ ಮಾತನಾಡು ವುದಾದರೆ ಈ ಬಗ್ಗೆ ಕೂಡ ನಾನು ಒಂದು ವಿಚಾರವನ್ನು ಹೇಳಬೇಕಾಗುತ್ತದೆ. ಕರ್ನಾಟಕ ರಾಜ್ಯವನ್ನು ಬೇರೆ ರಾಜ್ಯಗಳಲ್ಲಿರುವ ಕಾನೂನು ಮತ್ತು ಸುವ್ಯವಸ್ಥೆಗೆ ಹೋಲಿಕೆ ಮಾಡಿ ನೋಡಿದರೆ ಚೆನ್ನಾಗಿಯೇ ಇದೆ. ಆದರೆ ನಾವು ಬೇರೆ ಬೇರೆ ರಾಜ್ಯಗಳನ್ನು ಕರ್ನಾಟಕ ರಾಜ್ಯಕ್ಕೆ ಹೋಲಿಕೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಉತ್ತರ ಭಾರತದ ಪಂಜಾಬ್ ಕಾಶ್ಮೀರ, ಆಸ್ಸಾಂ ರಾಜ್ಯಗಳಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸರಿಯಾಗಿಲ್ಲ. ಆ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ನಮ್ಮ ರಾಜ್ಯದಲ್ಲಿ ಶಾಂತಿ ಇದೆ. ಆದರೆ ಒಂದು ಬಹಳಷ್ಟು ಬೇಸರದ ಸಂಗತಿ ಎಂದರೆ ಹಿಂದಿನ ಸರ್ಕಾರದ ನಾಯಕರುಗಳು ಇಲ್ಲಿ ಅಧಿಕಾರದಲ್ಲಿದ್ದಾಗ ಯಾವಾಗಲೂ ಮಾತನಾಡಿದರೂ ಸಹ ಕರ್ನಾಟಕ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಎಷ್ಟೋ ಚೆನ್ನಾಗಿದೆ, ಆದರೆ ಪಂಜಾಬ್, ಕಾಶ್ಮೀರ, ಅಸ್ಸಾಂಗಳಲ್ಲಿ ಇವತ್ತು ಪರಿಸ್ಥಿತಿ ಏನಾಗಿದೆ ಎಂದು ಉತ್ತರ ಭಾರತದ ಪರಿಸ್ಥಿತಿಯನ್ನು ನಮ್ಮ ರಾಜ್ಯದಲ್ಲಿ ಪ್ರಸ್ತಾಪ ಮಾಡುತ್ತಿದ್ದರು. ಖಂಡಿತವಾಗಿ ನಾನು ಒಪ್ಪಿಕೊಳ್ಳುತ್ತೇನೆಂದು ಹೇಳುವುದಕ್ಕೆ ತಯಾರು ಇಲ್ಲ. ಕರ್ನಾಟಕ ರಾಜ್ಯದ ಜನ ತುಂಬಾ ಸಭ್ಯರು ತುಂಬಾ ಶಾಂತಿ ಪ್ರಿಯರು. ಆದ್ದರಿಂದಲೇ ನಮ್ಮ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಯಾವಾಗಲೂ ಚೆನ್ನಾಗಿರುತ್ತದೆ ಆದರೆ ಹಿಂದಿನ ಸರ್ಕಾರ ಆಡಳಿತದಲ್ಲಿ ಇದ್ದಾಗ ಪರ ರಾಜ್ಯಗಳನ್ನು ಹೋಲಿಕೆ ಮಾಡಿ ಹೇಳುತ್ತಿದ್ದರು. ಆ ರೀತಿ ಹೋಲಿಕೆ ಮಾಡಿ ಹೇಳುವುದು ಸರಿಯಲ್ಲವೆಂದು ನಾನು ಹೇಳುತ್ತೇನೆ. ಇವತ್ತು ನಮ್ಮ ರಾಜ್ಯದಲ್ಲಿ ಪೋಲೀಸ್ ಸ್ಟೇಶನ್ ತೆಗೆದು ಕೊಂಡರೆ ಒಂದೊಂದು ಪೋಲೀಸ್ ಸ್ಟೇಶನ್‌ಗಳಲ್ಲಿ ೫-೬ ಜನರು ಪೋಲೀಸ್ ಪೇದೆಗಳು ಇರುತ್ತಾರೆ. ಒಂದು ವೇಳೆ ಇದೇ ಪರಿಸ್ಥಿತಿ ಏನಾದರೂ ಬೇರೆ ರಾಜ್ಯಗಳಲ್ಲಿ ಇದ್ದಿದ್ದರೆ ಅಲ್ಲಿನ ಪೋಲೀಸ್ ಸ್ಟೇಶನ್‌ಗಳಲ್ಲಿ ಗೂಂಡಾಗಳು ಬಂದು ಆಡಳಿತವನ್ನು ಮಾಡತಕ್ಕಂಥ ಪರಿಸ್ಥಿತಿ ಬರುತ್ತಿತ್ತು ಆದರೆ ನಮ್ಮ ರಾಜ್ಯದ ಜನರು ತುಂಬಾ ಶಾಂತಿ ಪ್ರಿಯರು. ಆದ್ದರಿಂದಲೇ ಇವತ್ತು ಪೋಲೀಸ್ ಸ್ಟೇಶನ್‌ಗಳಲ್ಲಿ ಪೋಲೀಸ್ ಪೇದೆಗಳು ಕಡಿಮೆ ಜನರು ಇದ್ದರೂ ಸಹ ಕಾನೂನು ವ್ಯವಸ್ಥೆ ಸರಿಯಾಗಿದೆ. ಕಾನೂನು ವ್ಯವಸ್ಥೆ ಹತೋಟಿಯಲ್ಲಿ ಇದೆ. ಇದನ್ನು ನಾವೆಲ್ಲ ಒಪ್ಪಿಕೊಳ್ಳಬೇಕು. ಇವತ್ತು ಅನೇಕ ಕಡೆ ಪೋಲೀಸ್ ಸ್ಟೇಶನ್‌ಗಳ ಅವಶ್ಯಕತೆ ಇದ್ದರೂ ಪೋಲೀಸ್ ಸ್ಟೇಶನ್ ಇಲ್ಲದೆ ಇರಬಹುದು. ಆದರೂ ಕಾನೂನು ವ್ಯವಸ್ಥೆ ಸುವ್ಯವಸ್ಥೆಯಲ್ಲಿ ಇದೆ. ಇದೇ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳುವುದಾದರೆ ಈ ಪೋಲೀಸ್ ಇಲಾಖೆಯಲ್ಲಿ ಪೋಲೀಸ್ ಪೇದೆಗಳಿಗಿಂತ ಪೋಲೀಸ್ ಹಿರಿಯ ಅಧಿಕಾರಿಗಳ ಸಂಖ್ಯೆ ಜಾಸ್ತಿಯಾಗಿದೆ. ಪೋಲೀಸ್ ಇಲಾಖೆಯಲ್ಲಿ ಡಿ.ಜಿ.ಪಿ. ಡಿ.ಐ.ಜಿ. ಎಸ್.ಪಿ. ಇಂತಹ ದೊಡ್ಡ ದೊಡ್ಡ ಅಧಿಕಾರಿಗಳ ಸಂಖ್ಯೆ ಜಾಸ್ತಿ ಆಗುತ್ತಿದೆ. ಮನುಷ್ಯ ಮಾತ್ರ ಒಬ್ಬನೇ ; ಆದರೆ ತಲೆಗಳು ಜಾಸ್ತಿಯಾಗಿವೆ. ರಾವಣನ ತರಹ ಸುಮಾರು ೧೦-೧೫ ತಲೆಗಳಂತೆ ಜಾಸ್ತಿಯಾಗುತ್ತಿವೆ. ಇದರಿಂದ ನಮ್ಮ ಆರ್ಥಿಕ ವ್ಯವಸ್ಥೆ ಮೇಲೆ ಎಷ್ಟು ಖರ್ಚಾಗುತ್ತದೆ. ಇದನ್ನು ಸರ್ಕಾರದವರು ಯೋಚನೆ ಮಾಡಬೇಕಾಗುತ್ತದೆ.

ನಾನು ಸರ್ಕಾರಕ್ಕೆ ಒಂದು ಸಲಹೆ ಕೊಡುವುದೇನೆಂದರೆ ಆದಷ್ಟು ಹಿರಿಯ ಅಧಿಕಾರಿಗಳನ್ನು ಕಡಿಮೆ ಮಾಡಿ ಪೋಲೀಸ್ ಪೇದೆಗಳನ್ನು ಜಾಸ್ತಿ ಮಾಡಿ ಆಗ ನಮ್ಮ ರಾಜ್ಯದ ಕಾನೂನು ಸುವ್ಯವಸ್ಥೆಯಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಿದೆ. ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಪೋಲೀಸ್ ವ್ಯವಸ್ಥೆಯನ್ನು ಉತ್ತಮ ಪಡಿಸಿದರೆ ಕಾನೂನು ವ್ಯವಸ್ಥೆ ನಿರ್ವಹಣೆ ಸರಿಯಾಗಿ ಆಗುತ್ತದೆ. ಈ ಮಾತನ್ನು ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಇನ್ನು ಒಂದು ಸಂತೋಷದ ವಿಚಾರ ಅಂದರೆ ರಾಜ್ಯಪಾಲರ ಭಾಷಣದಲ್ಲಿ ಪ್ರಮುಖವಾದ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಅದೇನೆಂದರೆ ಯಾರು ಅಕ್ರಮವಾಗಿ ಸಾಗುವಳಿ ಮಾಡಿಕೊಂಡಿರುತ್ತಾರೆ ಅಂತಹ ಜನರ ಜಮೀನನ್ನು ಸಕ್ರಮಗೊಳಿಸುತ್ತೇವೆಂದು ಹೇಳಿದ್ದಾರೆ. ಹಿಂದಿನ ಸರ್ಕಾರ ಇದ್ದಾಗ ಎರಡೂ ಸದನಗಳ ಸದಸ್ಯರ ಜಂಟಿ ಸಮಿತಿಯೊಂದನ್ನು ರಚನೆ ಮಾಡಿದ್ದರು ಅದರಲ್ಲಿ ನಾನು ಕೂಡ ಒಬ್ಬ ಸದಸ್ಯನಾಗಿದೆ. ಸಮಗ್ರವಾದ ಒಂದು ಕಾನೂನನ್ನು ತರಬೇಕೆಂದು ಪ್ರಯತ್ನ ಮಾಡುವ ಹಂತದಲ್ಲಿ ಆ ಕಾನೂನು ಬರುವುದಕ್ಕೆ ಸಾಧ್ಯವಾಗಲಿಲ್ಲ. ಇವತ್ತು ಆ ಒಂದು ಸಮಗ್ರವಾದ ಕಾನೂನನ್ನು ತರುತ್ತೇವೆಂದು ನಮ್ಮ ಸರ್ಕಾರದವರು ಹೇಳುತ್ತಿದ್ದಾರೆ. ಆದಷ್ಟು ಬೇಗ ಆ ಕಾನೂನನ್ನು ತರಬೇಕೆಂದು ನಾನು ಹೇಳುತ್ತೇನೆ. ನಿಧಾನ ಮಾಡಬಾರದು. ಅದರ ಜೊತೆಯಲ್ಲಿ ಒಂದು ವಿಷಯವನ್ನು ನಾನು ಪ್ರಸ್ತಾಪ ಮಾಡುವುದಾದರೆ ನಮ್ಮ ಜಿಲ್ಲೆಯಲ್ಲಿ ಒಂದು ವಿಶೇಷವಾದ ಸಮಸ್ಯೆ ಇದೆ. ನಮ್ಮಲ್ಲಿ ಕುಮಕಿ ಜಮೀನು ಎಂದು ಇದೆ.

ನಮ್ಮಲ್ಲಿ ರೈತರು ಕೃಷಿ ಭೂಮಿಯನ್ನು ಸಾಗುವಳಿ ಮಾಡಬೇಕಾದರೆ, ಅವನು ಸೊಪ್ಪು ಮತ್ತು ಕಟ್ಟಿಗೆಯನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರದ ಜಾಗದಲ್ಲಿ ಅವಕಾಶ ಇದೆ. ಅದಕ್ಕೆ ಯಾವ ರೀತಿಯ ಹಕ್ಕು ಪತ್ರವೂ ಅವನಲ್ಲಿ ಇಲ್ಲ. ಬದಲಾಗಿ ಆ ಸೊಪ್ಪನ್ನು ತೆಗೆಯಲಿಕ್ಕೆ ಮಾತ್ರ ಅವಕಾಶ ಇದೆ. ಮಾನ್ಯ ಅಧ್ಯಕ್ಷರೇ, ನಾನು ಒಂದು ಮಾತನ್ನು ತಮ್ಮ ಸಮ್ಮುಖದಲ್ಲಿ ಹೇಳುತ್ತಿದ್ದೇನೆ. ಇವತ್ತು ಕುಮ್ಕಿ ಹಕ್ಕನ್ನು ಅವರು ಯಾವ ರೀತಿ ಸರ್ಕಾರದ ಹೆಸರಿನಲ್ಲಿ ಇದ್ದು ಉಪಯೋಗಿಸುತ್ತಿದ್ದಾರೋ ಅದನ್ನು ರೈತನ ಖಾತೆಗೆ ಸೇರಿಸುವಂಥ ಪ್ರಯತ್ನ ಮಾಡಬೇಕು. ಕೆಲವು ಕಡೆ ಇನ್ನೂ ವಿಶೇಷವಾಗಿ ಒಂದು ವಿಚಾರವನ್ನು ಹೇಳಬೇಕಾದರೆ, ಸುಮಾರು ೨೦-೪೦ ಎಕರೆ ಜಮೀನಿನಲ್ಲಿ ಕುಮ್ಕಿ ಎಂದು ಅವರು ಸರ್ಕಾರಿ ಜಮೀನಿನಲ್ಲಿ ಸೊಪ್ಪನ್ನು ಮತ್ತು ಕಟ್ಟಿಗೆಯನ್ನು ಕಡಿಯುತ್ತಿದ್ದಾರೆ. ಅದರಲ್ಲಿ ವಿಶೇಷವಾಗಿ ಹೆಚ್ಚಿನ ಜಮೀನಿನ ಭಾಗದಲ್ಲಿ ಕಟ್ ಮಾಡುತ್ತಿದ್ದಾರೆ ಇವತ್ತು ಬಹಳಷ್ಟು ಜನ ಬಡವರು ಇದ್ದಾರೆ. ಇವರಿಗೆ ಸರಿಯಾದಂಥ ಕುಳಿತುಕೊಳ್ಳುವುದಕ್ಕೂ ಸ್ಥಳ ಇಲ್ಲ. ಇಂಥಾ ಜನರುಗಳಿಗೆ ಹೆಚ್ಚುವರಿ ಭೂಮಿಯನ್ನು ಹಂಚಬೇಕು. ವಿಶೇಷವಾಗಿ ಪರಿಶಿಷ್ಟರಿಗೆ ಹರಿಜನರಿಗೆ ಈ ಜಮೀನನ್ನು ಹಂಚುವಂಥ ಪ್ರಯತ್ನವನ್ನು ಸರ್ಕಾರ ಮಾಡಬೇಕೆಂದು ನಾನು ಹೇಳುತ್ತಿದ್ದೇನೆ. ಅದೇ ರೀತಿಯಲ್ಲಿ ಇವತ್ತು ಏನು ರೈತನಿಗೆ ನೀವು ಅನುಕೂಲ ಮಾಡಬೇಕೆನ್ನುವ ಮಾತನ್ನು ಹೇಳುತ್ತಿದ್ದೀರಿ, ಆದರೆ, ನನ್ನ ಜಿಲ್ಲೆಯ ಮಟ್ಟಿಗೆ ನಾನು ಹೇಳುವುದಾದರೆ, ಒಬ್ಬ ರೈತ ಬ್ಯಾಂಕಿನಿಂದ ಸಾಲ ಪಡೆದು ಪಂಪುಸೆಟ್ಟು ಖರೀದಿ ಮಾಡಿಟ್ಟುಕೊಂಡು ಸುಮಾರು ೫ ವರ್ಷಗಳಿಂದ ವಿದ್ಯುತ್‌ನ್ನು ಪಡೆಯುವುದಕ್ಕೆ ಕಾಯುತ್ತಿದ್ದಾನೆ. ಬ್ಯಾಂಕಿನಿಂದ ಏನು ಸಾಲ ಪಡೆದು ರೈತರುಗಳು ಪಂಪುಸೆಟ್ಟುಗಳನ್ನು ಖರೀದಿ ಮಾಡಿದ್ದಾರೋ ಅಂಥಾ ರೈತರುಗಳಿಗೆ ತಕ್ಷಣ ವಿದ್ಯುತ್‌ನ್ನು ಒದಗಿಸತಕ್ಕಂಥ ಕೆಲಸವನ್ನು ಖಂಡಿತವಾಗಿ ಮಾಡಬೇಕೆಂದು ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಬ್ಯಾಂಕಿನಿಂದ ಸಾಲ ಪಡೆದುಕೊಂಡ ರೈತರುಗಳಿಗೆ ಬ್ಯಾಂಕಿನವರು ಬಡ್ಡಿ ವಸೂಲಿಗಾಗಿ ಮತ್ತು ಅಸಲು ವಸೂಲಿಗಾಗಿ ನೋಟೀಸ್‌ನ್ನು ಕೊಡುತ್ತಿದ್ದಾರೆ. ಈ ವಿಚಾರದಲ್ಲಿ ರೈತರುಗಳಿಗೆ ಬಹಳ ಕಷ್ಟವಾಗಿದೆ ಅದೇ ರೀತಿಯಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗದ ವಿದ್ಯಾರ್ಥಿಗಳು ರ್‍ಯಾಂಕ್ ಬಂದರೆ ನೇರವಾಗಿ ಉದ್ಯೋಗಗಳನ್ನು ಕೊಡುತ್ತೇವೆ ಎನ್ನುವ ಮಾತನ್ನು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದೀರಿ. ಇದು ಕೂಡ ಬಹಳಷ್ಟು ಉತ್ತಮವಾದ ಕೆಲಸ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದೇ ರೀತಿಯಲ್ಲಿ ನಗರ ಪ್ರದೇಶಗಳಿಗೆ ಕುಡಿಯುವ ನೀರಿನ ಸಮಸ್ಯೆಯನ್ನು ನಿವಾರಣೆ ಮಾಡುವ ಸಲುವಾಗಿ ವಿಶೇಷ ಆದ್ಯತೆ ಕೊಡುತ್ತೇವೆಂದು ಹೇಳಿದ್ದಾರೆ. ಇವತ್ತು ಒಂದು ವಿಚಾರವನ್ನು ತಮ್ಮ ಮುಂದೆ ಹೇಳಲಿಕ್ಕೆ ಪ್ರಯತ್ನ ಮಾಡುತ್ತೇನೆ. ನಮ್ಮ ಜಿಲ್ಲೆಯ ವಿಶೇಷವಾಗಿ ಬಂಟ್ವಾಳ ಪುರಸಭೆಯಲ್ಲಿ, ಅದು ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ಪುರಸಭೆ ಬಿಟ್ಟರೆ ಇದೇ ದೊಡ್ಡ ಪುರಸಭೆ ಆಗಿತ್ತು. ಇದು ಅನೇಕ ಗ್ರಾಮಾಂತರ ಪ್ರದೇಶಗಳನ್ನು ಸೇರಿಸಿಕೊಂಡು ಈ ಪುರಸಭೆಯನ್ನು ಮಾಡಿದ್ದಾರೆ. ಇಲ್ಲಿ ನೀರಿನ ಸಮಸ್ಯೆ ಬಹಳಷ್ಟು ಗಂಭೀರವಾಗಿದೆ. ನಮ್ಮ ಪುರಸಭೆಯ ವ್ಯಾಪ್ತಿಯಲ್ಲಿ ಶೇಕಡಾ ೨೦ ಜನಕ್ಕೆ ಮಾತ್ರ ನಲ್ಲಿ ನೀರು ಸಿಗುತ್ತಿದೆ, ಉಳಿದ ಜನರಿಗೆ ಯಾವುದೇ ರೀತಿಯಲ್ಲಿ ನೀರಿನ ವ್ಯವಸ್ಥೆ ಇಲ್ಲ. ಈ ತಾಲ್ಲೂಕಿನ ಜನರಿಗೆ ನೀರಿನ ಸೌಕರ್ಯ ಇಲ್ಲದೇ ಇರುವುದರಿಂದ ಬಹಳ ತೊಂದರೆಯಾಗಿದೆ. ಆದ್ದರಿಂದ ನಮ್ಮ ತಾಲ್ಲೂಕಿನ ಜನರುಗಳಿಗೆ ನಲ್ಲಿ ನೀರನ್ನು ಒದಗಿಸಿಕೊಡುವುದಕ್ಕೆ ಸರ್ಕಾರ ಒಂದು ಯೋಜನೆಯನ್ನು ಹಾಕಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ

ವಿನಂತಿ ಮಾಡಿಕೊಳ್ಳುತ್ತೇನೆ. ಆ ಮೇಲೆ, ಮಾನ್ಯ ಅಧ್ಯಕ್ಷರೇ, ನಿರ್ಮಲ ಗ್ರಾಮ ಯೋಜನೆ ಎಂದು ಮಾಡಿದ್ದಾರೆ. ಇದು ಒಂದು ಉತ್ತಮವಾದ ಕಾರ್ಯ. ನಗರ ಪ್ರದೇಶಗಳನ್ನು ನಿರ್ಮಲಗೊಳಿಸಲಾಗುತ್ತದೆಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಒಂದು ವಿಚಾರವನ್ನು ತಮ್ಮ ಮುಂದೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಮಂಗಳೂರು ನಗರದ ಹತ್ತಿರದಲ್ಲಿ ವಾಮಂಜೂರು ಎಂಬುವಲ್ಲಿ ಗ್ರಾಮಾಂತರ ಪ್ರದೇಶ ಇದೆ. ಅಲ್ಲಿ ಸ್ಕೂಲ್, ಕಾಲೇಜು, ಚರ್ಚ್, ದೇವಸ್ಥಾನಗಳು ಇದ್ದು ಇದು ಜನನಿಬಿಡ ಪ್ರದೇಶವಾಗಿದೆ. ಮಂಗಳೂರು ನಗರದ ಎಲ್ಲಾ ಗಲೀಜು ವಸ್ತುಗಳನ್ನು ಜನರು ವಾಸಿಸುವಂಥ ಈ ವಾಮಂಜೂರು ಎನ್ನುವ ಭಾಗದಲ್ಲಿ ಡಂಪ್ ಮಾಡುತ್ತಿದ್ದಾರೆ. ಇದರಿಂದ ಬರುವ ವಾಸನೆಯಿಂದ ಜನ ಅಲ್ಲಿ ಕುಳಿತುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಅನೇಕ ಸಾರಿ ಇದರ ಬಗ್ಗೆ ನಗರಸಭೆಯಲ್ಲಿ ವಿನಂತಿ ಮಾಡಿಕೊಂಡಿದ್ದರೂ ಏನೂ ಪ್ರಯೋಜನವಾಗಿಲ್ಲ. ಆ ಗಲೀಜುಗಳಲ್ಲಿ ಕೆಲವು ಸಾರಿ ಸತ್ತಂಥ ಪ್ರಾಣಿಗಳನ್ನು ಹಾಕುವುದರಿಂದ ದುರ್ವಾಸನೆ ಬರುತ್ತದೆ. ಇದರಿಂದ ಅಲ್ಲಿರುವ ಜನರ ಆರೋಗ್ಯ ಕೆಡತಕ್ಕಂಥ ಪರಿಸ್ಥಿತಿ ಇದೆ. ಈ ಒಂದು ವಿಚಾರದಲ್ಲಿ ಸಹ ಸರ್ಕಾರವು ಗಮನಹರಿಸಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ನನಗೆ ಹೆಚ್ಚಿಗೆ ಮಾತನಾಡತಕ್ಕಂಥ ಚಟವೂ ಇಲ್ಲ ಮತ್ತು ಹವ್ಯಾಸವೂ ಇಲ್ಲ ಆದರೂ ಕೂಡ ಒಂದು ವಿಚಾರವನ್ನು ಸ್ಪಷ್ಟವಾಗಿ ಹೇಳ ಬಯಸುತ್ತೇನೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಕೆಲವು ವಿಶಿಷ್ಟ ಸಮಸ್ಯೆಗಳ ಬಗ್ಗೆ ನಾನು ಮಾತನಾಡ ಬೇಕಾಗಿದೆ. ಅಲ್ಲಿಯ ಸಂಸ್ಕೃತಿ, ಭಾಷೆ, ಜನಜೀವನದ ವ್ಯವಸ್ಥೆಯು ವಿಶಿಷ್ಟವಾಗಿರುವುದು ತಮಗೆ ಗೊತ್ತಿರುವ ವಿಚಾರ. ನಮ್ಮ ಜಿಲ್ಲೆಯಲ್ಲಿ ಬೀಡಿ ಕಟ್ಟಿ ತಮ್ಮ ಜೀವನ ನಿರ್ವಹಣೆ ಮಾಡತಕ್ಕಂಥ ಜನರು ಬಹುದೊಡ್ಡ ಸಂಖ್ಯೆಯಲ್ಲಿದ್ದಾರೆ. ಇವೊತ್ತು ಮಧ್ಯಪ್ರದೇಶ ಸರಕಾರದವರು ಬೀಡಿ ಎಲೆಯನ್ನು ರಾಷ್ಟ್ರೀಕರಣ ಮಾಡಿದ ಕಾರಣದಿಂದಾಗಿ ಓವರ್ ನೈಟ್ 10 ರೂಪಾಯಿಯ ಬೆಲೆಯುಳ್ಳ ಎಲೆಯ ಬೆಲೆ 40 ರೂಪಾಯಿಗಳಿಗೆ ಏರಿತು. ಇದರಿಂದಾಗಿ ಬೀಡಿ ಇಂಡಸ್ಟ್ರೀಗೆ ದೊಡ್ಡ ಏಟು ಬಿದ್ದಂತಾಗಿದೆ. ಬೀಡಿ ಮಾಲೀಕರು ಬೀಡಿಯ ಬೆಲೆಯನ್ನು ಅನಿವಾರ್ಯವಾಗಿ ಹೆಚ್ಚಿಗೆ ಮಾಡಿದ ಕಾರಣದಿಂದಾಗಿ ಮಾರ್ಕೆಟ್‌ನಲ್ಲಿ ಏರಿದ ಬೆಲೆಗೆ ಗ್ರಾಹಕರು ಕಡಿಮೆಯಾಗಿದ್ದಾರೆ. ಇಂಥ ಒಂದು ಸನ್ನಿವೇಶ ಉಂಟಾಗಿರುವ ಕಾರಣದಿಂದಾಗಿ ಬೀಡಿ ಉಪಯೋಗಿಸುವ ಜನರು ಕಡಿಮೆಯಾಗಿ ಸಹಜವಾಗಿಯೇ ಉತ್ಪಾದನೆಯ ಮೇಲೆ ಅಗಾಧ ಪರಿಣಾಮ ಉಂಟಾಗಿದೆ. ಆ ಉದ್ಯೋಗದಲ್ಲಿ ನಿರತರಾದ ಜನರು ಇವೊತ್ತು ಬದುಕುವುದು ಕಷ್ಟವಾಗಿ ಅದಕ್ಕಾಗಿ ಹೋರಾಟ ಮಾಡತಕ್ಕಂಥ ಒಂದು ವಾತಾವರಣ ಸೃಷ್ಟಿಯಾಗಿದೆ. ಈ ಕುರಿತು ಸಮಸ್ಯೆಯನ್ನು ಬಗೆಹರಿಸುವಲ್ಲಿ ಬೀಡಿ ಮಾಲೀಕರ ಒಂದು ಮನವಿಯಂತೆ ಅವರಿಗೆ ವಿಧಿಸುತ್ತಿರುವ ಎರಡು ವಿಧವಾದ ಎಂಟ್ರಿ ಟ್ಯಾಕ್ಸ್‌ನಲ್ಲಿ ಒಂದು ಟ್ಯಾಕ್ಸ್‌ನ್ನು ಮನ್ನಾ ಮಾಡಿದರೆ ಒಂದು ಪರಿಹಾರವನ್ನು ಕಂಡುಕೊಳ್ಳುವಲ್ಲಿ ಸಹಾಯಕವಾಗುತ್ತದೆ. ಕಚ್ಚಾವಸ್ತುಗಳನ್ನು ತೆಗೆದುಕೊಳ್ಳುವಾಗ ಮತ್ತು ತಯಾರಾದ ವಸ್ತುವಿನ ಮೇಲೆ ಹೀಗೆ ಇರುವ ಎರಡು ಟ್ಯಾಕ್ಸ್‌ಗಳಲ್ಲಿ ಒಂದು ಟ್ಯಾಕ್ಸ್‌ನ್ನು ತೆಗೆದು ಹಾಕಿ ಈ ಉದ್ದಿಮೆಯನ್ನು ರಕ್ಷಿಸಿ ಜನರಿಗೆ ಉಪಕಾರ ಮಾಡ ಬೇಕಾಗಿ ವಿನಂತಿಸಿಕೊಳ್ಳುತ್ತೇನೆ. ಹೀಗೆ ಮಾಡುವುದರಿಂದ ಬೀಡಿಯ ಬೆಲೆ ಕಡಿಮೆಯಾಗಿ, ಕೊಳ್ಳುವವರ ಸಂಖ್ಯೆ ಜಾಸ್ತಿಯಾಗಿ ಉತ್ಪಾದಕ ವ್ಯವಸ್ಥೆಗೆ ಸಹಾಯಕವಾಗುತ್ತದೆ.

ಅಪಿಲೇಟ್ ಟ್ರಿಬ್ಯೂನಲ್ ವಿಚಾರವಾಗಿ ನಾವುಗಳು ಮಾತನಾಡುತ್ತಾ ಇರುತ್ತೇವೆ. ಅದರಿಂದಾಗಿ ಅನೇಕ ಬಡ ಗೇಣಿದಾರರಿಗೆ ಅನ್ಯಾಯವಾಗುತ್ತಾ ಇದೆ. ದಿವಂಗತ ಮಾನ್ಯ ಶ್ರೀ ದೇವರಾಜ್ ಅರಸ್‌ರವರು ಯಾವ ಪ್ರಗತಿಪರವಾದಂಥ ಈ ಒಂದು ಭೂಸುಧಾರಣಾ ಕಾಯಿದೆಯನ್ನು ಜಾರಿಗೆ ತಂದರು. ಈಗ ಅದರಿಂದ ವಿಶೇಷತಃ ಬಡಗೇಣಿದಾರರಿಗೆ ಅದರ ವ್ಯವಸ್ಥೆಯಲ್ಲಿನ ಲೋಪದೋಷಗಳಿಂದಾಗಿ ತೊಂದರೆಯಾಗುತ್ತಾ ಇದೆ. ಆದುದರಿಂದ ಅದನ್ನು ಅಬಾಲಿಷ್ ಮಾಡಬೇಕೆಂದು ಹೇಳುತ್ತಾ ನಮ್ಮ ಜಿಲ್ಲೆಯಲ್ಲಿನ ನದಿಪಾತ್ರಗಳ ಭಾಗದಲ್ಲಿ ಸಮುದ್ರ ತೀರದಲ್ಲಿ ಸಮುದ್ರ ಕೊರತೆಯಿಂದ ತುಂಬಾ ಹಾನಿಗೊಳಗಾಗುವ ಸಂದರ್ಭ ಬಂದರೆ. ಕೇರಳ ರಾಜ್ಯದವರು ಕನ್ಯಾಕುಮಾರಿಯಿಂದ ಕಾಸರಗೋಡಿನ ವರೆಗೆ ಅವರ ಪ್ರದೇಶದಲ್ಲಿ ಸೂಕ್ತ ಕ್ರಮವನ್ನು ತೆಗೆದುಕೊಂಡು ಅನುಕೂಲ ಮಾಡಿಕೊಟ್ಟಿದ್ದಾರೆ. ಸಮುದ್ರ ಕೊರೆತಕ್ಕೆ ಅಲ್ಲಿ ಶಾಶ್ವತ ಪರಿಹಾರವನ್ನು ಮಾಡಿಕೊಂಡಿದ್ದಾರೆ. ಆದರೆ ನಮ್ಮ ಜಿಲ್ಲೆಯಲ್ಲಿ ಸಮುದ್ರ ಕೊರೆತದ ಹಾವಳಿ ಇದ್ದರೂ ಕೂಡ ಯಾವುದೇ ಪರಿಹಾರವನ್ನು ಮಾಡಿಕೊಡುವುದಕ್ಕೆ ಸರಕಾರವು ಸೂಕ್ತ ಕ್ರಮವನ್ನು ತೆಗೆದುಕೊಂಡಿಲ್ಲ, ಇನ್ನಾದರೂ ಈ ಬಗ್ಗೆ ಒಂದು ಶಾಶ್ವತ ಪರಿಹಾರವನ್ನು ಮಾಡಿಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

ಇನ್ನು ಭಾಷೆಯ ಕುರಿತು ಹೇಳುವುದಾದರೆ, ಅದೂ ನಮ್ಮ ಜಿಲ್ಲೆಯ ಮಟ್ಟಿಗೆ ಹೇಳಲಿ ಮಹಾತ್ಮಾ ಗಾಂಧೀಜಿಯವರು ಹೇಳಿದ ಮಾತು ಉದಾಹರಿಸ ಬಹುದಾಗಿದೆ. "ಯಾವ ಮನುಷ್ಯ ಹುಟ್ಟು ಭಾಷೆಯಲ್ಲಿ ಶಿಕ್ಷಣ ಸಿಗುವುದಿಲ್ಲವೋ ಅಲ್ಲಿಯ ತನಕ ಅವನಿಗೆ ಸ್ವಾತಂತ್ರ್ಯ ಸಿಕ್ಕ ಹಾಗೆ ಆಗುವುದಿಲ್ಲ"

ಎಂದು ಹೇಳಿದ್ದಾರೆ. ನಮ್ಮ ಜನರು ತುಳು ಭಾಷೆಯನ್ನು ಆಡತಕ್ಕವರು, ಆದರೆ ಪ್ರಾಥಮಿಕ ಶಾಲಾ ಹಂತದಲ್ಲಿ ಕನ್ನಡವನ್ನು ಕಲಿಯುತ್ತಾರೆ. ಹೈಸ್ಕೂಲ್ ಮಟ್ಟದಲ್ಲಿ ಕನ್ನಡವನ್ನು ಕಲಿಯುತ್ತಾರೆ. ಇದಲ್ಲದೇ ಅನೇಕ ರೀತಿಯಲ್ಲಿ ನಮಗೆ ಮಲತಾಯಿ ಧೋರಣೆ ಸರಕಾರದ ವತಿಯಿಂದ ಕಂಡು ಬರುತ್ತದೆ. ಅನೇಕ ಅಭಿವೃದ್ಧಿ ಕೆಲಸಕಾರ್ಯಗಳು ಇದು ಎದ್ದು ಕಂಡುಬರುತ್ತದೆ. ನೂರಾರು ವರ್ಷಗಳ ನಂತರ ಒಂದು ಫಸ್ಟ್‌ಗ್ರೇಡ್ ಕಾಲೇಜು ಇದ್ದುದು ಎರಡನೇ ಫಸ್ಟ್‌ಗ್ರೇಡ್ ಕಾಲೇಜು ಬಂದಿದೆ. ಇವೊತ್ತು ವಿದ್ಯಾಕ್ಷೇತ್ರದಲ್ಲಿ ಸರಕಾರದವರು ಸೂಕ್ತವಾಗಿ ಕಾರ್ಯಕ್ರಮಗಳನ್ನು ಜಿಲ್ಲೆಗೆ ಹಾಕಿಕೊಂಡಿದ್ದಲ್ಲಿ ಬಹಳಷ್ಟು ಮುಂದುವರಿಯಬಹುದಾದಂಥ ಜಿಲ್ಲೆಯಾಗಿತ್ತು. ಇದರ ಬಗ್ಗೆ ಇನ್ನಾದರೂ ವಿಚಾರ ಮಾಡಬೇಕಾಗಿದೆ. ಮಂಗಳೂರು ನಗರಕ್ಕೆ ಕುಡಿಯುವ ನೀರಿನ ಸರಬರಾಜಿನಲ್ಲಿ ಕೊರತೆ ಇದೆ, ಅದಕ್ಕೆ ಶಾಶ್ವತವಾದ ಒಂದು ವ್ಯವಸ್ಥೆಯು ಇನ್ನೂ ಆಗಿಲ್ಲ. ನೈಸರ್ಗಿಕ ವ್ಯವಸ್ಥೆಯನ್ನು, ಅಂದರೆ ನೇತ್ರಾವತಿ ನದಿನೀರನ್ನು ಬಳಸಿಕೊಳ್ಳುವಬಗ್ಗೆ, ಅದನ್ನು ಉಪಯೋಗಿಸಿಕೊಳ್ಳುವ ಬಗ್ಗೆ ಒಂದು ಯೋಜನೆಯನ್ನು ಇನ್ನೂ ಮಾಡುವುದಕ್ಕೆ ಆಗಿಲ್ಲ. ಹರಿಯುವ ನದಿ ನೀರು ಎಲ್ಲಾದರೂ ಬತ್ತಿ ಹೋದರೆ ನಗರದ ಜನರಿಗೆ ಬಹಳ ಕಷ್ಟ ಪರಿಸ್ಥಿತಿಯು ಬರುತ್ತದೆ. ಈ ಬಗ್ಗೆ ಸೂಕ್ತ ಕ್ರಮವನ್ನು ಕೈಗೊಳ್ಳಬೇಕು. ನಗರಕ್ಕೆ ನೀರು ಸರಬರಾಜು ಮಾಡುವ ಶರಪಾಡಿ ಯೋಜನೆಯನ್ನು ಸರಕಾರದವರು ಮಾಡುತ್ತೇವೆ ಎಂದು ಭರವಸೆಯನ್ನು ಕೊಟ್ಟಿದ್ದಾರೆ. ಅದನ್ನು ಶೀಘ್ರದಲ್ಲಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ನದಿಯು ಸಮುದ್ರಕ್ಕೆ ಸೇರುವ ಭಾಗ, ಅದನ್ನು ಅಳಿವೆ ಬಾಗಿಲು ಎಂದು ಕರೆಯುತ್ತಾರೆ ಇಂಥ ಕಡೆಗಳಲ್ಲಿ ಡ್ರೆಜಿಂಗ್ ಮಾಡದಿದ್ದ ಕಾರಣ ಮೀನುಗಾರಿಕೆ ಮಾಡುವಾಗ ಅನೇಕ ಜನ ಮೀನುಗಾರರು ದುರಂತಕ್ಕೆ ಈಡಾಗಿರುವುದು ತಮಗೆ ತಿಳಿದಿರುವ ವಿಚಾರವಾಗಿದೆ. ಇದರ ಬಗ್ಗೆ ಡ್ರೆಜ್ಜಿಂಗ್ ಮಾಡಬೇಕೆಂದು ಸರಕಾರದವರಲ್ಲಿ ಕೇಳಿಕೊಂಡಿದ್ದರೂ ಕೂಡ ಅದರ ಬಗ್ಗೆ ಸರಕಾರದವರು ಮೌನವರ್ತನೆಯನ್ನು ಅನುಸರಿಸಿದ್ದಾರೆ. ಇಂಥ ಸಂದರ್ಭದಲ್ಲಿ ನಮ್ಮ ಸಮಸ್ಯೆಯ ಪರಿಹಾರಕ್ಕಾಗಿ ನಾವು ಮೌನವಾಗಿರುವುದರಿಂದಾಗಿ ಪರಿಹಾರ ಕಾಣದೇ ಉಳಿದಿವೆ. ಹಿಂದೆ ವರುಣ ನಾಲೆಯ ಬಗ್ಗೆ ತಾವುಗಳು ಕೂಡಮಾಡಿದ ಯತ್ನಗಳನ್ನು ನಾವು ಕಂಡಿದ್ದೇವೆ. ಇವೊತ್ತು ರಾಷ್ಟ್ರದ ಅನೇಕ ಸಮಸ್ಯೆಗಳ ಬಗ್ಗೆ ಚಳುವಳಿಯಾಗುತ್ತಾ ಇವೆ. ಅದು ಅಸ್ಸಾಂ ಮುಂತಾದ ಕಡೆ ಚಳುವಳಿಗಳು ನಡೆಯುತ್ತಿದ್ದುದನ್ನು ನಾವು ನೋಡುತ್ತಾ ಇದ್ದೇವೆ. ದೀರ್ಘಕಾಲದ ಸಮಸ್ಯೆಗಳಿಗೆ ಪರಿಹಾರವನ್ನು ಸರಕಾರದವರು ಸಕಾಲದಲ್ಲಿ ಮಾಡಬೇಕಾಗುತ್ತದೆ. ಹಾಗೆ ಮಾಡದಿದ್ದಲ್ಲಿ ಜನರು ತಮ್ಮದೇ ಆದ ಪ್ರಯತ್ನಗಳನ್ನು ಮಾಡಲು ಪ್ರಾರಂಭಿಸುತ್ತಾರೆ. ಇಂಥ ನೂರಾರು ಸಮಸ್ಯೆಗಳು ನಮ್ಮ ಜಿಲ್ಲೆಯ ಮಟ್ಟಿಗೆ ಜೀವಂತವಾಗಿ ಉಳಿದಿವೆ. ಅವುಗಳಿಗೆ ಪರಿಹಾರವನ್ನು ಕೊಡಲು ಸರಕಾರದವರು ನಿಜವಾದ ಮನಸ್ಸಿನಿಂದ ಪ್ರಾಮಾಣಿಕವಾಗಿ ಯತ್ನಿಸಬೇಕು. ನಮ್ಮ ಸಮಸ್ಯೆಗಳಿಗೆ ಪರಿಹಾರವನ್ನು ಮಾಡಿಕೊಡಲು ಸರಕಾರವು ಪೂರ್ಣ ಪ್ರಮಾಣದ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳುತ್ತದೆ ಎಂಬ ಭರವಸೆಯನ್ನು ವ್ಯಕ್ತಪಡಿಸಿ, ನನಗೆ ಇಷ್ಟು ಕಾಲ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ತಮಗೆ ಅಭಿನಂಧಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಪ್ರಕಟಣೆ

ಅಧ್ಯಕ್ಷರು.—ಈ ದಿನ ಬೆಳಿಗ್ಗೆ ೧೧–೩೫ಕ್ಕೆ ಪ್ರೇಕ್ಷಕರ ವೇದಿಕೆಯಿಂದ ಈ ಕೆಳಗೆ ಕಂಡ ವ್ಯಕ್ತಿಗಳು ಘೋಷಣೆಗಳನ್ನು ಕೂಗಿ ಕರಪತ್ರಗಳನ್ನು ಸದನದಲ್ಲಿ ಎಸೆದಿದ್ದಾರೆ.

ಶ್ರೀಯುತರುಗಳಾದ.—

ಜಿ. ಗುರುಪ್ರಸಾದ್ ಬಿನ್ ಚಿನ್ನಬಸಪ್ಪ,
ವಯಸ್ಸು–೩೩, ನಂ. ೨೬, ಬಿ. ಎಸ್. ಲೇನ್, ಚಿಕ್ಕಪೇಟೆ ಕ್ರಾಸ್, ಬೆಂಗಳೂರು.

ಸಿ. ಕೆ. ರಾಮೇಗೌಡ ಬಿನ್ ಲೇಟ್ ಕಳಸೇಗೌಡ,
ನಂ. ೯೭೫, ೨೫ನೇ ಮುಖ್ಯರಸ್ತೆ, ಶ್ರೀನಗರ ಬೆಂಗಳೂರು.

ಎಂ. ಎಸ್. ನಾಗರಾಜ ಬಿನ್ ಎಂ. ಎಸ್. ಸೋಮಶೇಖರ,

೨೮ ವರ್ಷ, ನಂ. ೮೬, ೬ನೇ ಮುಖ್ಯ ರಸ್ತೆ, ೭೮ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು.

ಎಸ್. ರಘುನಾಥ್, ಬಿನ್ ಶೇಷಗಿರಿ, ೨೩ ವರ್ಷ, ನಂ. ೫೬, ಗೋಪಾಲಕೃಷ್ಣ ಗುಡಿ ಬೀದಿ ಚಿಕ್ಕಪೇಟೆ ಕ್ರಾಸ್, ಬೆಂಗಳೂರು.